

ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 50 | ಡಿಸೆಂಬರ್ 6–12, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com

ಸಾಮ್ರಾಜ್ಯಶಾಹಿಯ ಮೇಲೆ ರೈತಾಪಿಯ ವಿಜಯ



ಕರ್ನಾಟಕದಲ್ಲಿ ಬಡತನ, ಹಸಿವು ಮತ್ತು ಅಪೌಷ್ಟಿಕತೆಯ ಅಟ್ಟಹಾಸ...



ಸಂಸತ್ತಿಗೆ ಬಿಜೆಪಿಯ ತಿರಸ್ಕಾರ

ತ್ರಿಪುರಾದಲ್ಲಿ ಮೋಸದ ಚುನಾವಣೆಯ ಪ್ರಹಸನ

ಸಂಘ ಪರಿವಾರಕ್ಕೆ ಗೋಮಾಳ ಭೂಮಿ

ಅಲ್ಪಸಂಖ್ಯಾತರ ಮೇಲೆ ಹಲ್ಲೆಗಳ ವಿರುದ್ಧ ರಾಜ್ಯವ್ಯಾಪಿ ಪ್ರತಿಭಟನೆ



ಲೋನಿ 'ಎನ್‌ಕೌಂಟರ್': ಬೆದರಿಕೆ ನಿಲ್ಲಿಸಿ, ನಿಷ್ಪಕ್ಷಪಾತ ತನಿಖೆ ನಡೆಸಬೇಕು

ಘಾಝಿಯಾಬಾದ್‌ನ ಲೋನಿಯಲ್ಲಿ ಇತ್ತೀಚೆಗೆ ಪೋಲೀಸ್ ಅತ್ಯಾಚಾರಕ್ಕೆ ತುತ್ತಾಗಿರುವವರ ಮನೆಗಳಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯೆ ಬೃಂದಾ ಕಾರಟ್ ನೇತೃತ್ವದ ಪಕ್ಷದ ನಿಯೋಗ ಭೇಟಿ ನೀಡಿ ಬಂದ ಮೇಲೆ ಅಲ್ಲಿನ ಬಿಜೆಪಿ ಶಾಸಕ ಬೃಂದಾ ಕಾರಟ್ "ಕೋಮು ಅಸಾಮರಸ್ಯವನ್ನು ಉಂಟುಮಾಡುತ್ತಿದ್ದಾರೆ", ಅದಕ್ಕಾಗಿ "ಗೋವಧೆಯನ್ನು ಪ್ರೋತ್ಸಾಹಿಸುತ್ತಿದ್ದಾರೆ" ಎಂದೆಲ್ಲ ಅವರ ವಿರುದ್ಧ ಅತ್ಯಂತ ಸುಳ್ಳು ಮತ್ತು ದುರ್ಭಾವನೆ ಹರಡಿಸುವ ಆಪಾದನೆಗಳನ್ನು ಮಾಡುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ, ಇದನ್ನು ಖಂಡಿಸುತ್ತ ಅದು ಈ ಆಪಾದನೆಗಳನ್ನು ತಿರಸ್ಕರಿಸಿದೆ.

ಲೋನಿಯಲ್ಲಿ ಪೋಲೀಸರು ಎನ್‌ಕೌಂಟರ್ ಎಂದು ಹೇಳಿರುವ ಒಂದು ಘಟನೆಯಲ್ಲಿ ಏಳು ಯುವಕರನ್ನು ಒಂದೇ ರೀತಿಯಲ್ಲಿ ಗಾಯಗೊಳಿಸಲಾಗಿದೆ, ಮತ್ತು ಇವರೆಲ್ಲರೂ ಮುಸ್ಲಿಮರು. ಇದಕ್ಕಾಗಿ ಪೋಲೀಸರ ಮೇಲೆ ಪ್ರಕರಣ ದಾಖಲಿಸುವ ಬದಲು ಈ ಏಳು ಯುವಕರನ್ನೇ ಲಾಕಪ್ಪಿನಲ್ಲಿ ಹಾಕಲಾಗಿದೆ. ಅತ್ಯಂತ ಕೋಮುವಾದಿ ಆಧಾರದಲ್ಲಿ ಪೋಲೀಸ್ ಕಾರ್ಯಾಚರಣೆಯನ್ನು ಬೆಂಬಲಿಸುವ ಕಾವಲುಕೋರ ಗುಂಪುಗಳಿಗೆ ನೇತೃತ್ವ ಕೊಡುತ್ತಿರುವ ಲೋನಿಯ ಶಾಸಕ ಈಗ ಸಂತ್ರಸ್ತರ ಪರವಾಗಿ ನಿಲ್ಲುವವವರನ್ನು ಹೆದರಿಸುವ, ಬೆದರಿಸುವ ಪ್ರಯತ್ನ ನಡೆಸಿದ್ದಾರೆ. ಈ ಘಟನೆಯ ಬಗ್ಗೆ ಒಂದು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂಬ ಸಿಪಿಐ(ಎಂ)ನ ಆಗ್ರಹವನ್ನು ಪುನರುಚ್ಚರಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ನ್ಯಾಯ ಸಿಗದಂತೆ ಮಾಡಲು ಕೆಲಸ ಮಾಡುತ್ತಿರುವ ಎಲ್ಲರ ಮೇಲೂ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

13 ಗುಂಡೇಟುಗಳು, 7 ಮಂದಿಗೆ ಒಂದೇ ರೀತಿಯ ಗಾಯಗಳು–ಉತ್ತರಪ್ರದೇಶದಲ್ಲಿ ಕೋಮುವಾದಿ ಎನ್‌ಕೌಂಟರ್ ರಾಜಕೀಯ

ಬೃಂದಾ ಕಾರಟ್ ಅಲಲ್ದೆ ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ ಎಂ ತಿವಾರಿ ಮತ್ತು ದಿಲ್ಲಿಯ ಸಿಪಿಐ(ಎಂ) ಮುಖಂಡರಾದ ಸೆಹ್ಬಾ ಫಾರುಕಿ, ಆಶಾ ಶರ್ಮ ಮತ್ತು ಅಮನ್ ಸೈನಿಯವರಿದ್ದ ಸಿಪಿಐ(ಎಂ) ನಿಯೋಗ 7ರಲ್ಲಿ ಐವರ ಮನೆಗಳಿಗೆ ಭೇಟಿ ನೀಡಿ ಸಂಗ್ರಹಿಸಿದ ಮಾಹಿತಿಗಳ ಪ್ರಕಾರ ಇದೊಂದು ಹುಸಿ



ಎನ್‌ಕೌಮಟರ್ ನಂತೆ ಕಾಣುತ್ತದೆ. ಈ 7 ಮಂದಿ ದಿನಗೂಲಿ ಕಾರ್ಮಿಕರು, ಅವರನ್ನು ಸುಳ್ಳು ಗೋವಧೆ ಕೇಸಿನಲ್ಲಿ ಸಿಲುಕಿಸಲಾಗಿದೆ. ಸಾರ್ವಜನಿಕ ಒತ್ತಡದಿಂದ ಸದ್ಯಕ್ಕೆ ಲೋನಿ ಪೋಲೀಸ್ ಠಾಣೆಯ ಮುಖ್ಯಸ್ಥ(ಎಸ್‌ಹೆಚ್‌ಒ)ನನ್ನು ಅಮಾನತು ಮಾಡಲಾಗಿದೆ. ಭೇಟಿಯ ನಂತರ ಬೃಂದಾ ಕಾರಟ್ ಮತ್ತು ಕೆ ಎಂ ತಿವಾರಿ ಉತ್ತರ ಪ್ರದೇಶ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಈ ಕುರಿತು ಒಂದು ನ್ಯಾಯಾಂಗದ ಉಸ್ತುವಾರಿಯ ನಿಷ್ಪಕ್ಷಪಾತ ತನಿಖೆಯನ್ನು ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಪೋಲೀಸ್ ಅತ್ಯಾಚಾರವನ್ನು ಮರೆಮಾಚಲು ಗೋವಧೆಯ ಕತೆ ಕಟ್ಟುತ್ತಿರುವ ಎಸ್‌ಹೆಚ್‌ಒ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಸಂತ್ರಸ್ತರನ್ನು ಜೈಲಿನಿಂದ ಬಿಡುಗಡೆ ಮಾಡಬೇಕು, ಅವರಿಗೆ ಸೂಕ್ತ ವೈದ್ಯಕೀಯ ಸೇವೆಯನ್ನು ಲಭ್ಯಗೊಳಿಸಬೇಕು ಎಂದು ಪತ್ರದಲ್ಲಿ ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ.

ಸಂಯುಕ್ತ ಕಿಸಾನ್ ಮೋರ್ಚದೊಂದಿಗೆ ರೈತರ ಬೇಡಿಕೆಗಳ ಬಗ್ಗೆ ಮಾತುಕತೆ ನಡೆಸಿ

ರೈತರ ಐಕ್ಯತೆಯನ್ನು ಮುರಿಯುವ ಸರಕಾರದ ಪ್ರಯತ್ನಗಳು ಯಶಸ್ವಿಯಾಗವು–ಎಐಕೆಎಸ್

ಐಕ್ಯ ರೈತ ಚಳುವಳಿಯ ಎದುರು ಅವಮಾನಕಾರೀ ಸೋಲು ಅನುಭವಿಸಿರುವ ಬಿಜೆಪಿ ಕೇಂದ್ರ ಸರಕಾರ ತನ್ನ ಮುಖ ಮುಚ್ಚಿಕೊಳ್ಳು ಸತತವಾಗಿ ಸುಳ್ಳುಗಳನ್ನು ಹೇಳುತ್ತಿದೆ. ಯಾವುದೇ ಚರ್ಚೆಯಿಲ್ಲದೆ ಮೂರು ಕೃಷಿ ಕಾಯ್ದೆಗಳನ್ನು ನಾಲ್ಕೇ ನಿಮಿಷದಲ್ಲಿ ಪಾಸು ಮಾಡಿಸಿಕೊಂಡಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿದೆ.

ಈ ಹೋರಾಟದ ವೇಳೆಯಲ್ಲಿ ಪ್ರಾಣ ಕಳಕೊಂಡ ರೈತರ ದಾಖಲೆ ಸರಕಾರದ ಬಳಿ ಇಲ್ಲ, ಆದ್ದರಿಮದ ಅವರ ಕುಟುಂಬಗಳಿಗೆ ಪರಿಹಾರ ಕೊಡಲಾಗುವುದಿಲ್ಲ ಎಂದು ಕೃಷಿ ಮಂತ್ರಿ ನರೇಂದ್ರ ತೋಮರ್ ಹೇಳಿದ್ದಾರೆ. ಅಂದರೆ ಈ ಸರಕಾರದ ಅಮಾನವೀಯ ಮತ್ತು ದುರಹಂಕಾರದ ನಿಲುವು ಮುಂದುವರೆಯುತ್ತಿದೆ, 700ಕ್ಕೂ ಹೆಚ್ಚು ರೈತರ ಸಾವಿನ ಬಗ್ಗೆ ಅದಕ್ಕೆ ತುಸುವಾದರೂ ಪಶ್ಚಾತ್ತಾಪ ಇಲ್ಲ.

ಬಿಜೆಪಿ ಸರಕಾರ ಸಂಯುಕ್ತ ಕಿಸಾನ್ ಮೋರ್ಚಾದೊಂದಿಗೆ ಅದು ಮುಂದಿಟ್ಟಿರುವ ರೈತರ ಆರು ಬೇಡಿಕೆಗಳ ಬಗ್ಗೆ ಮಾತುಕತೆ ನಡೆಸುವ ಬದಲು ಕೆಲವು ಸಂಘಟನೆಗಳೊಂದಿಗೆ ಅಧಿಕಾರಶಾಹಿಗಳ ಅನೌಪಚಾರಿಕ ಮಾತುಕತೆಗಳ ಮೂಲಕ ರೈತರ ಐಕ್ಯತೆಯನ್ನು ಒಡೆಯುವ ಹುನ್ನಾರ ನಡೆಸಿದೆ. ಪ್ರಧಾನ ಮಂತ್ರಿಗಳು ಮತ್ತು ಬಿಜೆಪಿ ಸರಕಾರ ಇದರಲ್ಲಿ ರಾಜಕೀಯ ಆಟ ಆಡುವುದನ್ನು ನಿಲ್ಲಿಸಬೇಕು, ಎಸ್‌ಕೆಂನೊಂದಿಗೆ ಈ ಬೇಡಿಕೆಗಳ ಬಗ್ಗೆ ಮಾತುಕತೆ ನಡೆಸಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಎಂಎಸ್‌ಪಿ ಖಾತ್ರಿ ಶಾಸನ ರಚಿಸಲು ಒಪ್ಪದೆ ಆ ಕುರಿತು ಇನ್ನೊಂದು ಸಮಿತಿಯನ್ನು ರಚಿಸುವುದರಿಂದ ಏನೂ ಪ್ರಯೋಜನವಿಲ್ಲ, ಅದನ್ನು ರೈತರು ಒಪ್ಪುವುದಿಲ್ಲ ಎಂದು ಎಐಕೆಎಸ್ ಹೇಳಿದೆ.

ಸಂಯುಕ್ತ ಕಿಸಾನ್ ಮೋರ್ಚಾವನ್ನು ಬಲಪಡಿಸಲು ಮತ್ತು ಕಾರ್ಮಿಕ ವರ್ಗದ ಸಕ್ರಿಯ ಬೆಂಬಲದೊಂದಿಗೆ ಅದಕ್ಕೆ ಬೆಂಬಲವನ್ನು ವಿಶಾಲಗೊಳಿಸಲು ಸರ್ವ ಪ್ರಯತ್ನ ನಡೆಸುವುದಾಗಿ ಹೇಳಿರುವ ಎಐಕೆಎಸ್ ನರೇಂದ್ರ ಮೋದಿ ಸರಕಾರ ತನ್ನ ರೈತ–ವಿರೋಧಿ, ಕಾರ್ಪೊರೇಟ್–ಪರ ನಿಲುವನ್ನೇ ಮುಂದುವರೆಸಿದರೆ ತೀಕ್ಷ್ಣ ಹೋರಾಟವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದೆ.

12 ರಾಜ್ಯಸಭಾ ಎಂಪಿಗಳ ಪ್ರಜಾಪ್ರಭುತ್ವ–ವಿರೋಧಿ ಅಮಾನತ್ತು: ಸಿಐಟಿಯು ಖಂಡನೆ


ಮುಜುಗರದಿಂದ ಪಾರಾಗುವ ಸರಕಾರದ ಪ್ರಯತ್ನ–ಎಳಮಾರಂ ಕರೀಂ

ಹಿಂದಿನ ಅಧಿವೇಶನದಲ್ಲಿ ಪುಂಡಾಟಿಕೆ ನಡೆಸಿದರೆಂದು ಈ ಅಧಿವೇಶನದಲ್ಲಿ ರಾಜ್ಯ ಸಭೆಯ 12 ಸದಸ್ಯರನ್ನು ಅಮಾನತ್ತು ಮಾಡಿರುವುದು ಅತ್ಯಂತ ಪ್ರಜಾಪ್ರಭುತ್ವ–ವಿರೋಧಿ ಕೃತ್ಯ ಎಂದು ಸಿಐಟಿಯು ಖಂಡಿಸಿದೆ. ಈ 12 ಎಂಪಿಗಳಲ್ಲಿ ಸಿಐಟಿಯುನ ರಾಷ್ಟ್ರೀಯ ಕಾರ್ಯದರ್ಶಿ ಎಳಮಾರಂ ಕರೀಮ್ ಕೂಡ ಒಬ್ಬರು.

ನಿಜಸಂಗತಿಯೆಂದರೆ ಗಲಭೆಯಾದ ದಿನ ಪ್ರತಿಪಕ್ಷಗಳ ಸದಸ್ಯರು ಸಾಮಾನ್ಯ ವಿಮಾ ತಿದ್ದುಪಡಿ ಮಸೂದೆಯ ಮೇಲೆ ಸಂರಚಿತ ಚರ್ಚೆ ನಡೆಯಬೇಕೆಂದು ಆಗ್ರಹಿಸುತ್ತಿದ್ದರು ಮತ್ತು ಮಸೂದೆಯ ಮೇಲೆ ಮತದಾನ ನಡೆಯಬೇಕು ಎಂದು ಹೇಳುತ್ತಿದ್ದರು. ಇದನ್ನು ಆಧಾರಹೀನ ಕಾರಣಗಳನ್ನೊಡ್ಡಿ ಅತ್ಯಂತ ಪ್ರಜಾಪ್ರಭುತ್ವ- ವಿರೋಧಿ ರೀತಿಯಲ್ಲಿ ನಿರಾಕರಿಸಲಾಯಿತು.

ಇದು ಮೂಲ ಪ್ರಜಾಪ್ರಭುತ್ವ ವಿಧಿ–ವಿಧಾನಗಳನ್ನು ಮತ್ತು ಸಂಸದೀಯ ಪ್ರಕ್ರಿಯೆಗಳನ್ನೇ ತುಳಿದು ಹಾಕುವ ಕ್ರಮ ಎಂದಿರುವ ಸಿಐಟಿಯು ಈ ಅಧಿವೇಶನದಲ್ಲಿ ಕೂಡ ಬ್ಯಾಂಕ್ ರಾಷ್ಟ್ರೀಕರಣ ಕಾಯ್ದೆ, ವಿದ್ಯುತ್ ಕಾಯ್ದೆ, ಪಿಎಫ್‌ಆರ್‌ಡಿಎ ಕಾಯ್ದೆ ಇತ್ಯಾದಿಗಳನ್ನು ಖಾಸಗೀಕರಣಕ್ಕೆ ಅನುವು ಮಾಡಿಕೊಡುವಂತೆ ತಿದ್ದುಪಡಿ ಮಾಡುವ ಮಸೂದೆಗಳನ್ನು ಸುಲಭವಾಗಿ ಪಾಸು ಮಾಡಿಕೊಳ್ಳಲಿಕ್ಕಾಗಿ ಈ ಹುನ್ನಾರ ನಡೆಸಿದೆ ಎಂದು ಸಿಐಟಿಯು ಹೇಳಿದೆ.

ಪ್ರಜಾಪ್ರಭುತ್ವ ಸಂಸ್ಥೆಗಳ ಮೇಲೆ ಇಂತಹ ಸರ್ವಾಧಿಕಾಶಾಹಿ ದಾಳಿಗಳನ್ನು ಖಂಡಿಸುವುದಾಗಿ ಹೇಳಿರುವ ಸಿಐಟಿಯು, ಶ್ರಮಜೀವಿ ಜನಗಳು ಇಂತಹ ವಿನಾಶಕಾರಿ ಧೋರಣೆಗಳ ವಿರುದ್ಧ ಒಗ್ಗಟ್ಟಿನಿಂದ ದೇಶವ್ಯಾಪೀ ಪ್ರತಿರೋಧ ಹೋರಾಟವನ್ನು ನಡೆಸಬೇಕು ಎಂದು ಕರೆ ನೀಡಿದೆ.



ಬಿಜೆಪಿ ಸರಕಾರದ ಪುಕ್ಕಲುತನ ಮತ್ತು ಚರ್ಚೆಯ ಬಗ್ಗೆ ಅಸಹಿಷ್ಣುತೆ ರಾಜದ್ಯಸಭೆಯಲ್ಲಿ ಬಯಲಾಗಿದೆ. ಅದು ಸಂಸತ್ತನ್ನು ಪ್ರಜಾಪ್ರಭೂತ್ವವನ್ನು ನಾಶಪಡಿಸುವ ವೇದಿಕೆಯಾಗಿ ಮಾಡುತ್ತಿದೆ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಎಳಮಾರಂ ಕರೀಮ್ ಹೇಳಿದ್ದಾರೆ.

ಹಿಂದಿನ ಅಧಿವೇಶನದಲ್ಲಿ ಪ್ರತಿಪಕ್ಷಗಳ ಸಂಸತ್ ಸದಸ್ಯರು ಮಾಡಿರುವ ಆಪಾದನೆಗಳೆಲ್ಲವೂ ಈಗ ನಿಜವೆಂದು ಸಾಬೀತಾಗಿದೆ. ಪೆಗಸಸ್ ಮತ್ತು ಕೃಷಿ ಕಾಯ್ದೆಗಳನ್ನು ಕುರಿತಂತೆ ಸರಕಾರ ತನ್ನ ನಿಲುವುಗಳನ್ನು ಬದಲಿಸಲೇ ಬೇಕಾಗಿ ಬಂದಿದೆ. ಜನಗಳಿಗೆ ಮುಖ ತೋರಿಸದಂತಾಗಿರುವ ಬಿಜೆಪಿ ಸರಕಾರ ಆ ಮುಜುಗರದಿಂದ ತಪ್ಪಿಸಿಕೊಳ್ಳಲು ಅಮಾನತ್ತಿನ ಹುನ್ನಾರ ನಡೆಸಿದೆ.

ಹಿಂದೆಂದೂ ಹಿಂದಿನ ಅಧಿವೇಶನದಲ್ಲಿನ ಕ್ರಿಯೆಗೆ ಪ್ರಸಕ್ತ ಅಧಿವೇಶನದಲ್ಲಿ ಕ್ರಮ ಕೈಗೊಂಡಿದ್ದಿಲ್ಲ. ಸರಕಾರ ಸಂಸದೀಯ ಪ್ರಜಾಪ್ರಭುತ್ವಕ್ಕೆ ಅವಮಾನ ಮಾಡುತ್ತಿದೆ ಎಂದು ಕರೀಂ ಹೇಳಿದ್ದಾರೆ.

ತನಿಖಾ ಸಮಿತಿಯ ವರದಿಯ ಮೇರೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಸರಕಾರ ಹೇಳುತ್ತಿದೆ. ಆದರೆ ಪ್ರತಿಪಕ್ಷಗಳ ಸದಸ್ಯರೂ ತಮ್ಮ ಮೇಲೆ ಭದ್ರತಾ ಸಿಬ್ಬಂದಿ ಕೈಮಾಡಿದ್ದಾರೆ ಎಂದು ದೂರು ಸಲ್ಲಿಸಿದ್ದರು. ಆದರೆ ಆ ದೂರುಗಳ ಮೇಲೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಪ್ರತಿಪಕ್ಷಗಳು ಸರಕಾರದ ನಿಲುವಿನ ವಿರುದ್ಧ ಒಂದು ಬಲವಾದ ಪ್ರತಿಭಟನೆಯನ್ನು ಸಂಘಟಿಸುತ್ತಾರೆ, ಈ ಅಮಾನತ್ತು ಬಿಜೆಪಿ ನೇತೃತ್ವದ ಆಳ್ವಿಕೆಯನ್ನು ಬಯಲು ಮಾಡಲು ಒಂದು ಅವಕಾಶ ಎಂದು ಎಳಮಾರಂ ಕರೀಂ ಹೇಳಿದ್ದಾರೆ.

ವಿದ್ಯುತ್ ತಿದ್ದುಪಡಿ ಮಸೂದೆ ಮಂಡಿಸಿದ ದಿನ 15 ಲಕ್ಷ ಸಿಬ್ಬಂದಿಯ ಮುಷ್ಕರ–ವಿದ್ಯುತ್ ಇಂಜಿನಿಯರುಗಳ ಒಕ್ಕೂಟ

ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲಿ ವಿದ್ಯುತ್ ತಿದ್ದುಪಡಿ ಮಸೂದೆ, 2021ನ್ನು ಕೇಂದ್ರ ಸರಕಾರ ಮಂಡಿಸಬೇಕೆಂದಿದೆ. ಹಾಗೇನಾದರೂ ಮಾಡಿದರೆ ಆದಿನ ವಿದ್ಯುತ್ ವಲಯದ 15 ಲಕ್ಷ ಇಂಜಿನಿಯರುಗಳು, ನೌಕರರು ಮತ್ತು ಕಾರ್ಮಿಕರು ಮುಷ್ಕರ ನಡೆಸುತ್ತಾರೆ ಎಂದು ಅಖಿಲ ಭಾರತ ವಿದ್ಯುತ್ ಇಂಜಿನಿಯರುಗಳ ಒಕ್ಕೂಟ (ಎಐಪಿಇಎಫ್)ಹೇಳಿಕೆ ನೀಡಿದೆ.

ಈ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಿ ಪಾಸು ಮಾಡಿಸಿಕೊಳ್ಳುವ ನಡೆಯ ವಿರುದ್ಧ ಎಚ್ಚರದಿಂದಿರಬೇಕು ಎಂದು ವಿದ್ಯುತ್ ನೌಕರರರು ಮತ್ತು ಇಂಜಿನಿಯರುಗಳ ರಾಷ್ಟ್ರೀಯ ಸಮನ್ವಯ ಸಮಿತಿ (ಎನ್‌ಸಿಸಿಇಇಇ) ಈ ಮೊದಲೇ ಕರೆ ನೀಡಿತ್ತು.

ಭಾರತದ ಬಡವರು ಮತ್ತು ಗ್ರಾಮೀಣ ಜನಗಳ ವಿದ್ಯುತ್ ಪಡೆಯುವ ಹಕ್ಕನ್ನು ಮೊಟಕುಗೊಳಿಸುವ ಈ ಮಸೂದೆಯ ಬಗ್ಗೆ ಕೇಂದ್ರ ಸರಕಾರ ಹಟಮಾರಿ ನಿಲುವು ತಳೆದಿದೆ. ಇಂತಹ ಸನ್ನಿವೇಶದಲ್ಲಿ, ರಾಷ್ಟ್ರೀಯ ಸಮನ್ವಯ ಸಮಿತಿ ದೇಶಾದ್ಯಂತ ಬೃಹತ್ ಪ್ರಮಾಣದಲ್ಲಿ ಪ್ರತಿಭಟನಾ ಮತಪ್ರದರ್ಶನ ನಡೆಸಲು ನಿರ್ಧರಿಸಿದೆ ಎಂದು ಎಐಪಿಇಎಫ್ ಅಧ್ಯಕ್ಷ ಶೈಲೇಂದ್ರ ದುಬೆ ಹೇಳಿದ್ದಾರೆ.

ಈ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು ಎಂಬುದು ಸಂಯುಕ್ತ ಕಿಸಾನ್ ಮೋರ್ಚಾದ ಆರು ಬೇಡಿಕೆಗಳಲ್ಲಿ ಒಂದು ಎಂಬುದನ್ನು ಇಲ್ಲಿ ಗಮನಿಸಬಹುದು.

ಸಂಪಾದಕೀಯ

ಸಂಘ ಪರಿವಾರಕ್ಕೆ ಗೋಮಾಳ ಭೂಮಿ

ವಿಶೇಷ ವರದಿಯೊಂದರ ಪ್ರಕಾರ, ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲೂಕು ವ್ಯಾಪ್ತಿಯಲ್ಲಿರುವ ಹೆಸರಗಟ್ಟ ಬಳಿ ಇರುವ 24.8 ಎಕರೆ ವಿಸ್ತೀರ್ಣದ ಗೋಮಾಳ ಜಮೀನಿನ ಪೈಕಿ ಸಂಘ ಪರಿವಾರದ ಅಂಗ ಸಂಸ್ಥೆಯಾಗಿರುವ ರಾಷ್ಟ್ರೋತ್ಥಾನ ಪರಿಷತ್‌ಗೆ ಬಹುಕೋಟಿ ಮೌಲ್ಯದ 9.32 ಎಕರೆ ಜಾಗವನ್ನು ಮಂಜೂರು ಮಾಡಲು ಕರ್ನಾಟಕ ಬಿಜೆಪಿ ಸರ್ಕಾರ ಮುಂದಾಗಿದೆ. ಎಂದು ತಿಳಿದು ಬಂದಿದೆ. ಈ ಹಿಂದೆ 76 ಎಕರೆ ಜಮೀನನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇದೇ ರಾಷ್ಟ್ರೋತ್ಥಾನ ಪರಿಷತ್ತಿಗೆ ಮಂಜೂರು ಮಾಡಿದನ್ನು ಸಿಎಜಿ ವರದಿಯಲ್ಲಿ ಆಕ್ಷೇಪಿಸಲಾಗಿತ್ತು. ಈ ಕುರಿತು ಸಚಿವ ಸಂಪುಟವು ಯಾವುದೇ ನಿರ್ಧಾರವನ್ನು ಕೈಗೊಂಡಿಲ್ಲ. ಬದಲಿಗೆ ಮಂಜೂರಾತಿ ವಿಚಾರವನ್ನು ಕಂದಾಯ ಇಲಾಖೆಯೇ ನೇರವಾಗಿ ಮುಖ್ಯ ಮಂತ್ರಿಯೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿದು ಬಂದಿದೆ. ಸದರಿ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕೆ ಮಂಜೂರು ಮಾಡಲು ಕಂದಾಯ ಸಚಿವರು ಆಸಕ್ತಿ ವಹಿಸಿದ್ದಾರೆ ಎಂದು ಗೊತ್ತಾಗಿದೆ.

ಯಲಹಂಕ ತಾಲೂಕು ಹೆಸರಘಟ್ಟ ಹೋಬಳಿಯ ಹುರಳಿಚಿಕ್ಕನ ಹಳ್ಳಿ ಗ್ರಾಮದ ಸರ್ವೆ ನಂಬರ್‌ನಲ್ಲಿ ಒಟ್ಟು 24.8 ವಿಸ್ತೀರ್ಣದ ಗೋಮಾಳ ಇದೆ. ಈ ಜಮೀಉ 2012–22 ರ ವರೆಗೂ ಗೋಮಾಳ ಎಂದೇ ನಮೂದಾಗಿತ್ತು. ಹುರಳಿ ಚಿಕ್ಕನಹಳ್ಳಿಯಲ್ಲಿ ಖುಷ್ಕಿ ಜಮೀನಿಗೆ ತಲಾ ಎಕರೆಯೊಂದಕ್ಕೆ 61.00 ಲಕ್ಷ ರೂ. ಬೆಲೆ ಇದೆ. ಇದರ ಪ್ರಕಾರ 9.32 ಎಕರೆಗೆ 5.49 ಕೋಟಿ ರೂ. ಗೂ ಹೆಚ್ಚು ಬೆಲೆ ಬಾಳಲಿದೆ. ಮುಕ್ತ ಮಾರುಕಟ್ಟೆಯಲ್ಲಿನ ಲೆಕ್ಕಾಚಾರದ ಪ್ರಕಾರ ಅಂದರೆ ಸರ್ಕಾರಿ ಮಾರ್ಗ ಸೂಚಿ ದರಕ್ಕಿಂತ 3 ಪಟ್ಟು ದರದಲ್ಲಿ ಎಕರೆಗೆ 1.81 ಕೋಟಿ ರೂ. ಆಗಲಿದೆ. ಇದರ ಪ್ರಕಾರ 9.32 ಎಕರೆಗೆ ಅಂದಾಜು 16.86 ಕೋಟಿ ರೂ. ಬೆಲೆ ಆಗಲಿದೆ.

2009 ಅಕ್ಟೋಬರ್ ಮತ್ತು 2011 ರಲ್ಲಿಯೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 76 ಎಕರೆ ಜಾಗವನ್ನು ಇದೇ ರಾಷ್ಟ್ರೋತ್ಥಾನ ಪರಿಷತ್‌ಗೆ ನೀಡಲಾಗಿತ್ತು. ಫಲಾನುಭವಿಗಳು ಯಾವುದೇ ಅರ್ಜಿಯನ್ನು ಸಲ್ಲಿಸದಿದ್ದರೂ ಸರ್ಕಾರ ಸ್ವಯಂ ಪ್ರೇರಿತವಾಗಿ ರಿಯಾಯಿತು ನೀಡಿತ್ತು. ಕರ್ನಾಟಕ ಭೂ ಮಂಜೂರಾತಿ ನಿಯಮಗಳ 27 ರ ಅಡಿಯಲ್ಲಿ ಅಗತ್ಯವಿರುವ ಯಾವುದೇ ಕಾರಣಗಳನ್ನು ದಾಖಲಿಸಿರಲಿಲ್ಲ.

ಅದೇ ರೀತಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಚನ್ನೇನಹಳ್ಳಿಯಲ್ಲಿ 2009 ರಲ್ಲಿ ಜನಸೇವಾ ವಿಶ್ವಸ್ಥ ಮಂಡಳಿಗೆ 6 ಎಕರೆ ಭೂಮಿಯನ್ನು ಮಂಜೂರು ಮಾಡಲಾಗಿತ್ತು. ಶೇ.50 ರಷ್ಟು ರಿಯಾಯಿತಿ ನೀಡಲಾಗಿತ್ತು. ಆ ನಂತರ ರಿಯಾಯತಿಯನ್ನು ಶೇ. 75 ಕ್ಕೆ ಮಾರ್ಪಾಡು ಮಾಡಲಾಗಿತ್ತು. ಒಬ್ಬ ಭೂರಹಿತ ಬಡವ ಅಲ್ಪಸ್ವಲ್ಪ ಸರ್ಕಾರಿ ಗೋಮಾಳ ಭೂಮಿಯನ್ನು ಬಗರ್ ಹುಕುಂ ಸಾಗುವಳಿ ಮಾಡಿ ಜೀವನ ಸಾಗಿಸಲು ಪ್ರಯತ್ನ ಪಟ್ಟರೆ ಕಾನೂನು ದೃಢವಾದ ಕ್ರಮ ಜರಗಿಸುತ್ತದೆ. ಆತನನ್ನು ಒಕ್ಕಲೆಬ್ಬಿಸುತ್ತದೆ. ಆತನ ವಿರುದ್ಧ ಪ್ರಕರಣ ದಾಖಲಿಸಲಾಗುತ್ತದೆ. ಆತನನ್ನು ಬಂಧಿಸಿ ಕ್ರಮಕೈಗೊಳ್ಳಲಾಗುತ್ತದೆ. ಆದರೆ ತಮ್ಮ ಸಂಘ ಪರಿವಾರದವರಿಗೆ ರಿಯಾಯಿತಿ ಸಹಿತ ಭೂಮಿಯನ್ನು ಮಂಜೂರು ಮಾಡಲಾಗುತ್ತದೆ. ಬಡವರಿಗೊಂದು ನ್ಯಾಯ! ಸಂಘ ಪರಿವಾರದವರಿಗೊಂದು ನ್ಯಾಯ! ಯಾವ ಕಾರಣವನ್ನೂ ಕೇಳದೆ, ಯಾವ ಸಮರ್ಥನೆಯೂ ಇಲ್ಲದೆ ಸರ್ಕಾರಿ ಜಮೀನು ರಿಯಾಯ್ತಿಯೊಂದಿಗೆ ಸಂಘ ಪರಿವಾರದ ಪಾಲಾಗುತ್ತದೆ. ಬಡ ಭೂರಹಿತರ ಅರ್ಜಿಗಳು ಕಸದ ಬುಟ್ಟಿ ಸೇರುತ್ತವೆ.

ಭ್ರಷ್ಟತೆಯ ಪ್ರಕರಣಗಳನ್ನು ನ್ಯಾಯಾಂಗ ತನಿಖೆಗೊಳಪಡಿಸಲು ಮತ್ತು ವಿಧಾನಸಭೆಯನ್ನು ವಿಸರ್ಜಿಸಿ ಜನತೆಯಿಂದ ಹೊಸ ಆದೇಶ ಪಡೆಯಲು ಸಿಪಿಐ(ಎಂ) ಒತ್ತಾಯ

ಗುತ್ತಿಗೆದಾರರ ಬಳಿ ಪ್ರತಿ ಗುತ್ತಿಗೆಯ ಸಂದರ್ಭದಲ್ಲೂ ಶೇ 40 ಕ್ಕೂ ಅಧಿಕ ಪ್ರಮಾಣದಲ್ಲಿ ಸಂಬಂದಿಸಿದ ಅಧಿಕಾರಿಗಳು, ಶಾಸಕರು ಮತ್ತು ಮಂತ್ರಿಗಳು ಲಂಚವನ್ನು ಪಡೆಯುತ್ತಿದ್ದು ಅದನ್ನು ತಡೆಯುವಂತೆ ಗುತ್ತಿಗೆದಾರರ ಸಂಘದವರು ಪ್ರಧಾನ ಮಂತ್ರಿಗಳಿಗೆ ಮನವಿ ಮಾಡಿದ್ದಾರೆ. ಗುತ್ತಿಗೆ ಕೆಲಸದಲ್ಲಿ ಗುತ್ತಿಗೆದಾರರಿಂದ ಇವರು ಲಂಚ ಪಡೆಯುತ್ತಿರುವುದು ಹೊಸದೇನಲ್ಲಾ!. ಆದರೇ ಗುತ್ತಿಗೆದಾರರೇ ದೂರು ನೀಡುವಷ್ಟು ಪರಿಸ್ಥಿತಿ ವಿಕೋಪಕ್ಕೆ ಹೋಗಿರುವುದನ್ನು ಇದು ಎತ್ತಿ ತೋರುತ್ತದೆ.ಈ ಕಾರಣ ಮತ್ತು ಗುತ್ತಿಗೆದಾರರ ಲಾಭಗಳೆಲ್ಲಾ ಸೇರಿದರೇ ಕಾಮಗಾರಿಯೆಂಬುದು ಶೇ 40 ಕ್ಕಿಂತಲೂ ಕಡಿಮೆ ಬಂಡವಾಳದಿಂದ ನಡೆಸಲ್ಪಡುತ್ತದೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದಲೇ ರಾಜ್ಯದ ರಸ್ತೆ, ಕಟ್ಟಡ ಮತ್ತಿತರೇ ನಿರ್ಮಾಣ ಕಾಮಗಾರಿಗಳು ಅತ್ಯಂತ ಕಳಪೆ ಗುಣಮಟ್ಟದಿಂದ ಕೂಡಿರುವುದು ಕಂಡು ಬಂದಿದೆ.

ಸರಕಾರಗಳ ಇಂತಹ ದೌರ್ಬಲ್ಯಗಳಿಂದಾಗಿಯೇ ಭಾರೀ ಲೂಟಿಗೊಳಪಡಿಸಲಾದ ಅಕ್ರಮ ಗಣಿಗಾರಿಕೆ ಮುಂತಾದ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ. ಸಾರ್ವಜನಿಕ ಸಂಪನ್ಮೂಲಗಳು ಲೂಟಿಗೊಳಪಡುತ್ತಿವೆ.

ಇದೇ ಪರಿಸ್ಥಿತಿ ರಾಜ್ಯ ಸರಕಾರದ ವಿವಿಧ ಇಲಾಖೆಗಳು ಮತ್ತು ಅಭಿವೃದ್ಧಿ ನಿಗಮಗಳಲ್ಲಿಯೂ ಕಾಣಬಹುದಾಗಿದೆ. ಬಹುತೇಕ ಇವುಗಳ ಫಲಾನುಭವಿಗಳು ಶಾಸಕರುಗಳ ಹಿಂಬಾಲಕರು ಮತ್ತು ಹಣ ಅಥವಾ ದೊಡ್ಡ ಪ್ರಮಾಣದ ಲಂಚ ನೀಡುವವರಾಗಿದ್ದಾರೆ. ನಿಜ ಫಲಾನುಭವಿಗಳು ಶಾಸಕರುಗಳ ಕೃಪೆಯಿಲ್ಲದೇ, ಲಂಚ ನೀಡಲಾಗದೇ ಕಛೇರಿಗಳ ಸುತ್ತ ಗಿರಕಿ ಹೊಡೆದು ಬೇಸ್ತು ಬೀಳುತ್ತಿದ್ದಾರೆ. ಇತ್ತೀಚೆಗೆ ಗಂಗಾ ಕಲ್ಯಾಣ ಯೋಜನೆಯಲ್ಲಿನ ಭಾರಿ ಅವ್ಯವಹಾರ ಮತ್ತು ಭ್ರಷ್ಟಾಚಾರವನ್ನು ಸರಕಾರ ರಚಿಸಿದ ಸದನ ಸಮಿತಿ ಬಹಿರಂಗ ಪಡಿಸಿದೆ.

ಆಸ್ತಿ– ಪಾಸ್ತಿಗಳ ವರ್ಗಾವಣೆ ಮತ್ತೊಂದು ಪಾಲು ವಿಭಾಗದ ಸಂದರ್ಭದಲ್ಲಿಯೂ,ಭೂಮಿಗಳ ಸರ್ವೇ ಮಾಡಿಸುವಾಗಲೂ ರೈತರೂ ಸೇರಿದಂತೆ ನಾಗರೀಕರು ತೀವ್ರ ಆಕ್ರೋಷ ಗೊಂಡಿದ್ದಾರೆ. ಕಂದಾಯ ಇಲಾಖೆಯು ಗಬ್ಬೆದ್ದು ನಾರುತ್ತಿದೆ. ಪೋಲೀಸ್ ಇಲಾಖೆಯು ಸೇರಿದಂತೆ ಇತರೆಲ್ಲಾ ಇಲಾಖೆಗಳು ಇದರಿಂದ ಹೊರತಲ್ಲ.

ಈ ಎಲ್ಲವೂ ದೇಶದ ಮುಂದೆ ರಾಜ್ಯವನ್ನು ತಲೆ ತಗ್ಗಿಸುವಂತೆ ಮಾಡಿವೆ. ಭ್ರಷ್ಟಾಚಾರದಲ್ಲಿ ರಾಜ್ಯವನ್ನು ಪ್ರಥಮ ಸ್ಥಾನಕ್ಕೆ ದೂಡಿವೆ. ಈ ಎಲ್ಲಾ ಅನುಚಿತ ಬೆಳವಣಿಗೆಗಳಿಗೆ ಕಾರಣವಾದ ತಮ್ಮ ಸರಕಾರದ ದುರ್ನಡೆಗಳನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿದೆ.

ಸದರಿ ಭ್ರಷ್ಠತೆಯ ಮೇಲೆ ನಿಯಂತ್ರಣ ಸಾಧಿಸಲು ತಾವು ಘೋಷಿಸಿದ ಮುಖ್ಯ ಕಾರ್ಯದರ್ಶಿಗಳ ಮೂಲಕ ಕೈಗೊಳ್ಳಲಾಗುವುದೆಂಬ ತನಿಖೆಯು ನಿರರ್ಥಕವಾದುದಾಗಿದೆ. ಆದ್ದರಿಂದ,

1) ಈ ಕೂಡಲೇ ಸದರಿ ಭ್ರಷ್ಠಾಚಾರದ ವಿಚಾರಗಳನ್ನು ನ್ಯಾಯಾಂಗದ ಸುಪರ್ಧಿಯಲ್ಲಿ ಉನ್ನತ ನ್ಯಾಯಾಂಗದ ತನಿಖೆಗೆ ಒಳಪಡಿಸಬೇಕು.
2) ಈ ಎಲ್ಲದಕ್ಕೂ ತಮ್ಮದೇ ಸರಕಾರ ಮತ್ತು ಮಂತ್ರಿಮಂಡಲವೇ ನೇರ ಹೊಣೆಗಾರನಾಗಿರುವುದರಿಂದ ತಕ್ಷಣವೇ ರಾಜಿನಾಮೆ ನೀಡಿ ಜನರಿಂದ ಮರಳಿ ಆದೇಶ ಪಡೆಯಲು ಚುನಾವಣೆಗೆ ಮುಂದಾಗಬೇಕು.

ಈ ಕುರಿತು ಸೂಕ್ತ ಕ್ರಮವಹಿಸುವಂತೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸಿದೆ.

ಮೀನುಗಾರರ ಬೇಡಿಕೆ ಈಡೇರಿಸಲು ಒತ್ತಾಯಿಸಿ ಪ್ರತಿಭಟನೆ

ಅಖಿಲ ಭಾರತ ಮೀನುಗಾರರ ಮತ್ತು ಮೀನು ಕಾರ್ಮಿಕರ ಒಕ್ಕೂಟ (AIFFWF)ಕ್ಕೆ ಸಂಯೋಜಿಸಲ್ಪಟ್ಟ ಉಡುಪಿ ಜಿಲ್ಲಾ ಮೀನುಗಾರರ ಮತ್ತು ಮೀನು ಕಾರ್ಮಿಕರ ಸಂಘ(ರಿ) ಇದರ ನೇತೃತ್ವದಲ್ಲಿ ಮೀನು ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಇಂದು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಮೀನುಗಾರರು ಮತ್ತು ದ್ವಿಚಕ್ರ ವಾಹನದಲ್ಲಿ ಮೀನು ಮಾರಾಟಗಾರರು ಬೃಹತ್ ಮತ ಪ್ರದರ್ಶನ ಹಾಗೂ ಪ್ರತಿಭಟನೆಯ ಹೋರಾಟ ಯಶಸ್ವಿಯಾಗಿ ನಡೆಯಿತು. ಉಡುಪಿ ಬನ್ನಂಜೆ ನಾರಾಯಣ ಗುರು ಸಭಾಂಗಣದಲ್ಲಿ ಜರುಗಿದ ಮೀನುಗಾರರ ಸಮಾವೇಶ ಉದ್ಘಾಟಿಸಿ, ಸಂಘದ ಜಿಲ್ಲಾಧ್ಯಕ್ಷ ಕೆ. ಶಂಕರ್ ಮಾತನಾಡುತ್ತಾ, ಕರಾವಳಿಯ ಮೂರು ಜಿಲ್ಲೆಯದ್ಯಂತ ಕೋವಿಡ್–19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಸಹಸ್ರಾರು ಸಂಖ್ಯೆಯಲ್ಲಿ ಬಡ ಮೀನುಗಾರರು ನಿರುದ್ಯೋಗದಿಂದಾಗಿ ಜೀವನ ನಡೆಸಲಾಗದೆ ಅನಿವಾರ್ಯವಾಗಿ ಬದಲಿ ಉದ್ಯೋಗಕ್ಕಾಗಿ ದ್ವಿಚಕ್ರ ಮೋಟಾರ್ ಸೈಕಲ್ ನಲ್ಲಿ ಮನೆ ಮನೆಗೆ ತೆರಳಿ ಮೀನು ವ್ಯಾಪಾರ ಮಾಡುತ್ತಿದ್ದಾರೆ. ಆರ್ಥಿಕವಾಗಿ ಬಡತನದಲ್ಲಿರುವ ಇವರಿಗೆ ಸರಕಾರ ಸಾಮಾಜಿಕ ಭದ್ರತೆಗಾಗಿ ಕಲ್ಯಾಣ ಮಂಡಳಿ ಸ್ಥಾಪಿಸಬೇಕು ಎಂದು ಸರಕಾರವನ್ನು ಆಗ್ರಹಿಸಿ. ಬಳಿಕ ಜಿಲ್ಲಾಧಿಕಾರಿ ಕಚೇರಿ ಎದುರು ಜರುಗಿದ ಮೀನುಗಾರರ ಬೃಹತ್ ಪ್ರತಿಭಟನೆಯ ನಂತರ ಬೇಡಿಕೆಗಳ ಮನವಿ ಪತ್ರವನ್ನು ಜಿಲ್ಲಾಧಿಕಾರಿಯವರಿಗೆ ಹಸ್ತಾಂತರಿಸಿ, ಪಿಂಚಣಿ ಸೌಲಭ್ಯ, ಕಲ್ಯಾಣ ಮಂಡಳಿ ರಚನೆ ಅಪಘಾತ ಪರಿಹಾರ ಇತ್ಯಾದಿ ಬೇಡಿಕೆ ಈಡೇರಿಸುವುದಕ್ಕಾಗಿ ಈ ಕೂಡಲೇ ಮೀನುಗಾರರ ಸಂಘದ ಮುಖಂಡರೊಡನೆ ಮೀನುಗಾರಿಕಾ ಇಲಾಖಾಧಿಕಾರಿ ಜತೆ ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಜಂಟೀ ಸಭೆ ಏರ್ಪಡಿಸಬೇಕು ಎಂದು ಒತ್ತಾಯಿಸಿತು. ಪ್ರತಿಭಟನಾ ಕಾರ್ಯಕ್ರಮದ ನೇತೃತ್ವವನ್ನು ಮೀನುಗಾರರ ಸಂಘದ ಮುಖಂಡರಾದ ಕವಿರಾಜ್.ಎಸ್, ಕೋಣಿ ವೆಂಕಟೇಶ್ ನಾಯಕ್, ನಳಿನಿ ಎಸ್., ಉಮೇಶ್ ಕುಂದರ್ ಮಹೇಶ್ ಪೂಜಾರಿ ಅನ್ವರ್, ಸಂಗಮೇಶ್, ವಸಂತ, ಅನ್ವರ್ ಕಟಪಾಡಿ ಇತರರು ವಹಿಸಿದ್ದರು.







ಅಲ್ಪಸಂಖ್ಯಾತರ ಮೇಲೆ ದಾಳಿ ಖಂಡಿಸಿ–ಸಂವಿಧಾನ ಬದ್ಧ ರಕ್ಷಣೆ ನೀಡಲು ಸಿಪಿಐ(ಎಂ) ರಾಜ್ಯವ್ಯಾಪಿ ಪ್ರತಿಭಟನೆ









ಧಾರ್ಮಿಕ ಅಲ್ಪಸಂಖ್ಯಾತ ಮೇಲೆ ನಡೆದಿರುವ ದಾಳಿಗಳನ್ನು ಖಂಡಿಸಿ, ಸಂವಿಧಾನ ಬದ್ಧ ರಕ್ಷಣೆ ನೀಡಬೇಕು. ಅಲ್ಪಸಂಖ್ಯಾತ ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ ಆಗ್ರಹಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ವತಿಯಿಂದ ರಾಜ್ಯದ್ಯಂತ ಪ್ರತಿಭಟನಾ ಧರಣಿ ನಡೆದಿದೆ.

ಸಂಘ ಪರಿವಾರಕ್ಕೆ ಸಂಯೋಜಿತವಾಗಿರುವ ಸಂಸ್ಥೆಗಳಿಂದ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯಗಳ ವಿರುದ್ಧ ದಾಳಿ ನಡೆಯುತ್ತಿದೆ. ಇದು ದೇಶದ ಸಂವಿಧಾನದ ಮೇಲಿನ ಒಂದು ವ್ಯವಸ್ಥಿತ ದಾಳಿಯಾಗಿದೆ. ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಅವರ ಸಾಂವಿಧಾನಿಕ ಹಕ್ಕುಗಳ ಮೇಲಿನ ದಾಳಿಗಳು ನಿಲ್ಲಬೇಕು. ತ್ರಿಪುರಾದಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ದಾಳಿ ಮಾಡಲಾಗುತ್ತಿದೆ. ಕೆಲ ಮಸೀದಿಗಳಿಗೂ ಹಾನಿ ಉಂಟು ಮಾಡಲಾಗಿದೆ.

ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದವರನ್ನು ಗುರಿಯಾಗಿಸಿಕೊಂಡು ದೊಂಬಿ, ಹತ್ಯೆ, ಬಂಧನಗಳು, ಗೋರಕ್ಷಣೆ ಮತ್ತು ಲವ್ ಜಿಹಾದ್' ಹೆಸರಿನಲ್ಲಿ ಹಿಂಸಾಚಾರದ ಪ್ರಕರಣಗಳು ಮುಂದುವರಿದಿವೆ. ಮಸೀದಿಗಳನ್ನ ಹಾಳುಗೆಡವುತ್ತಿದ್ದಾರೆ. ಬೀದಿಬದಿ ವ್ಯಾಪಾರಿಗಳನ್ನು ಬೆದರಿಸಲಾಗುತ್ತಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಸಹ ಹೊಸ, ಹೊಸ ಸಮಸ್ಯೆಗಳನ್ನು ಬೇಕೆಂದೇ ಸೃಷ್ಟಿಸಲಾಗುತ್ತಿದೆ. ಅಲ್ಲದೇ ಸೌಹಾರ್ಧತೆಯ ಕೇಂದ್ರಗಳಾಗಬೇಕಾದ ಇವುಗಳನ್ನು ಕೋಮು ವಿಭಜನೆ ತರುವ, ಪರಸ್ಪರ ನಂಬಿಕೆ, ವಿಶ್ವಾಸಗಳು ಇಲ್ಲದಂತೆ ಪರಿವತಿಸಿ ಭಯ ನಿರ್ಮಾಣ ಮಾಡುವ ಕೇಂದ್ರಗಳನ್ನಾಗಿಸುತ್ತಿವೆ. ಇಂತಹ ಪ್ರಯತ್ನಗಳನ್ನು ನಿರ್ದಾಕ್ಷಿಣ್ಯವಾಗಿ ತಡೆಯಬೇಕಾಗಿದೆ ಎಂದು ಸಿಪಿಐ(ಎಂ) ಒತ್ತಾಯಿಸಿದೆ.

ಮಾನಕ ಹಕ್ಕು ಗುಂಪುಗಳ ಇತ್ತೀಚಿನ ವರದಿ ಪ್ರಕಾರ 2021ರಲ್ಲಿ ಕ್ರಿಶ್ಚಿಯನ್ ಸಮುದಾಯಗಳು ಮತ್ತು ಅವರ ಧಾರ್ಮಿಕ ಆರಾಧನಾ ಸ್ಥಳಗಳಾದ 300 ಹೆಚ್ಚಿನ ಕಡೆಗಳಲ್ಲಿ ದಾಳಿಗಳು ಸಂಭವಿಸಿದೆ. ಇವುಗಳಿಗೆ ಗುರಿಯಾದವರು ಹೆಚ್ಚಿನವರು ಆದಿವಾಸಿ ಮತ್ತು ದಲಿತ ಸಮುದಾಯಗಳಿಗೆ ಸೇರಿದವರು. ಪ್ರಾರ್ಥನಾ ಸಭೆಗಳನ್ನು ನಿಯಮಿತವಾಗಿ ತಡೆಯಲಾಗುತ್ತಿದೆ ಮತ್ತು ಮತಾಂತರ ತಡೆಯುವ ಹೆಸರಿನಲ್ಲಿ ಅಲ್ಪಸಂಖ್ಯಾತರನ್ನು ಥಳಿಸಲಾಗುತ್ತಿದೆ.

ಸಂವಿಧಾನಬದ್ಧವಾಗಿ ನಡೆದುಕೊಳ್ಳಬೇಕಾದ ಸರ್ಕಾರ, ಸ್ಥಳೀಯ ಆಡಳಿತ, ಪೊಲೀಸ್ ಇಲಾಖೆಯೂ ಸಹ ಸ್ಥಳೀಯ ಒತ್ತಡಗಳಿಗೆ ಒಳಗಾಗಿ ನಡೆದುಕೊಳ್ಳುತ್ತಿದ್ದಾರೆ. ಗಲಭೆ ಸೃಷ್ಟಿಸಲೆಂದು ಇರುವ ಈ ಗುಂಪುಗಳು ಮುಖ್ಯವಾಗಿ, ಇತ್ತೀಚನ ದಿನಗಳಲ್ಲಿ ತುಮಕೂರು, ಕೋಲಾರ, ಕೊಡಗು, ಮಂಗಳೂರು ಸೇರಿದಂತೆ ಹಲವು ಕಡೆಗಳಲ್ಲಿ ಇಂತಹ ಪ್ರಕರಣಗಳು ನಡೆದಿವೆ. ದಾಳಿಗಳು ನಡೆದ ಕಡೆಗಳಲ್ಲೆಲ್ಲಾ ಶಾಂತಿ–ಸೌಹಾರ್ಧತೆಗೆ ಧಕ್ಕೆಯಾಗಿದೆ ಎಂದು ಸಿಪಿಐ(ಎಂ) ಪಕ್ಷವು ತಿಳಿಸಿದೆ.

ರಾಜ್ಯದ ಬಿಜೆಪಿ ಸರ್ಕಾರವು ಅಲ್ಪಸಂಖ್ಯಾತರು, ದಲಿತರು ಮತ್ತಿತರರ ಆಹಾರದ ಹಾಗೂ ಬದುಕುವ ಹಕ್ಕುಗಳನ್ನು ಮತ್ತು ರಾಜ್ಯದ ಎಲ್ಲಾ ಹೈನುಗಾರರು, ಹೈನೋದ್ಯಮ ಹಾಗೂ ಮಾಂಸೋದ್ಯಮದ ಮೇಲೆ ಧಾಲಿ ನಡೆಸಲು ಕಾರ್ಪೋರೇಟ್ ಕಂಪನಿಗಳಿಗೆ ➚



ಶಾಲೆ ಬಿಟ್ಟ ಮಕ್ಕಳ ಸಂಖ್ಯೆ 50 ಸಾವಿರ, ಎಲ್ಲಿದೆ ಶಿಕ್ಷಣ ಹಕ್ಕು ಕಾಯ್ದೆ?

ಗುರುರಾಜ ದೇಸಾಯಿ

ಕೊರೊನಾ ಬಳಿಕ ರಾಜ್ಯದಲ್ಲಿ 50 ಸಾವಿರ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಶಾಲೆ ಆರಂಭವಾಗಿ ತಿಂಗಳು ಕಳೆಯುತ್ತಿದ್ದರೂ ಮಕ್ಕಳು ಶಾಲೆಗೆ ಬರುತ್ತಿಲ್ಲ ಎಂಬ ಆತಂಕಕಾರಿ ವಿಚಾರ ಬಯಲಾಗಿದೆ.

ಶಿಕ್ಷಣ ಇಲಾಖೆಯ ಸಮೀಕ್ಷೆಯಿಂದಲೆ ಈ ಅಂಶ ಬೆಳಕಿಗೆ ಬಂದಿದೆ. 2020–21ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆ ಜಂಟಿಯಾಗಿ ಮನೆ ಮನೆ ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆಯಲ್ಲಿ ಗ್ರಾಮೀಣ ಭಾಗದಲ್ಲಿ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿದು ಕೆಲಸದಲ್ಲಿ ತೊಡಗಿದ್ದಾರೆ ಎನ್ನುವ ಮಾಹಿತಿ ತಿಳಿದು ಬಂದಿದೆ.

ಕೋವಿಡ್‌ನಿಂದ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ಕೆಲವು ಕುಟುಂಬಗಳಿಗೆ ಮಕ್ಕಳ ದುಡಿಮೆ ಕೂಡ ಜೀವನಾಧಾರವಾಗಿದೆ. ಕೆಲ ಮಕ್ಕಳು ಶಾಲೆಯನ್ನು ಮರೆತುಬಿಟ್ಟಿದ್ದಾರೆ. ಮಕ್ಕಳು ಹಾಗೂ ಪಾಲಕರ ನಿರಾಸಕ್ತಿಯೂ ಶಾಲೆಯಿಂದ ಮಕ್ಕಳು ಹೊರಗುಳಿಯಲು ಕಾರಣವೆಂದು ವಿಶ್ಲೇಷಿಸಲಾಗುತ್ತಿದೆ.

ಸ್ಥಳೀಯ ಸಂಸ್ಥೆಗಳ ಮೂಲಕ ನಡೆಸಿದ ಮನೆ ಮನೆ ಸಮೀಕ್ಷೆಯಲ್ಲಿ ರಾಜ್ಯದಲ್ಲಿ 56605 ಮಕ್ಕಳು ಶಾಲೆಯಿಂದ ಹೊರಗುಳಿದಿರುವುದು ಪತ್ತೆಯಾಗಿದೆ. ಇವರಲ್ಲಿ 22,194 ಮಕ್ಕಳು ಶಾಲೆಗೆ ನೋಂದಣಿ ಮಾಡಿಲ್ಲ. 34411 ಮಕ್ಕಳು ಅರ್ಧಕ್ಕೆ ಶಾಲೆ ಬಿಟ್ಟಿದ್ದಾರೆ. ಈ ಪೈಕಿ 19,336 ಮಕ್ಕಳು 6ರಿಂದ 14 ವರ್ಷದವರಾಗಿದ್ದರೆ 15,075 ಮಕ್ಕಳು 14ರಿಂದ 16 ವರ್ಷದವರು. ಮಕ್ಕಳು ಶಾಲೆಯಿಂದ ಹೊರ?ಗುಳಿಯಲು ವೈದ್ಯಕೀಯ, ಆರ್ಥಿಕ, ಕೌಟುಂಬಿಕ ಸಮಸ್ಯೆಗಳೇ ಕಾರಣ ಎಂದು ಸಮೀಕ್ಷೆಯಿಂದ ತಿಳಿದುಬಂದಿದೆ.

ಶಾಲೆಯಿಂದ ಹೊರಗುಳಿದವರು : ಬಾಗಲಕೋಟೆ–763, ಬಳ್ಳಾರಿ–1,279, ಬಿಬಿಎಂಪಿ–6,608, ಬೆಳಗಾವಿ–1,265, ಬೆಂಗಳೂರು–527, ಬೆಂಗಳೂರು ಗ್ರಾಮಾಂತರ ? 489, ಬೀದರ್–2,609, ಚಾಮರಾಜ ನಗರ–481, ಚಿಕ್ಕಬಳ್ಳಾಪುರ–441, ಚಿಕ್ಕಮಗ ಳೂರು–534, ಚಿತ್ರದುರ್ಗ–1,587, ದಕ್ಷಿಣ ಕನ್ನಡ–195, ದಾವಣಗೆರೆ–790, ಧಾರವಾಡ–1,463, ಗದಗ– 505, ಹಾಸನ– 772, ಹಾವೇರಿ–753, ಕಲಬುರಗಿ–2,129, ಕೊಡಗು–311, ಕೋಲಾರ– 338, ಕೊಪ್ಪಳ– 1,159, ಮಂಡ್ಯ–779, ಮೈಸೂರು–751, ರಾಯಚೂರು–1,966, ರಾಮನಗರ–540, ಶಿವಮೊಗ್ಗ–1,046, ತುಮಕೂರು–890, ಉಡುಪಿ–172, ಉತ್ತರ ಕನ್ನಡ–509, ವಿಜಯಪುರ–1,152, ಯಾದಗಿರಿ–1,608 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ.

ಎಲ್ಲಿದೆ ಶಿಕ್ಷಣ ಹಕ್ಕು ಕಾಯ್ದೆ : ಸಂವಿಧಾನದ ಪ್ರಕಾರ 6–14 ವರ್ಷದೊಳಗಿನ ಎಲ್ಲ ಮಕ್ಕಳು ಶಾಲಾಶಿಕ್ಷಣ ಪಡೆಯುವುದು ಮೂಲ ಹಕ್ಕು. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ (ಆರ್‌ಟಿಇ) ನಿಯಮ 6ರ ಪ್ರಕಾರ ಸ್ಥಳೀಯ ಪ್ರಾಧಿಕಾರಗಳು ತಮ್ಮ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಿ 0?14 ವಯಸ್ಸಿನ ಮಕ್ಕಳ ದಾಖಲೆಯನ್ನು ನಿರ್ವಹಿಸಬೇಕು. ಅದರಲ್ಲಿ 6 ರಿಂದ 14 ವರ್ಷದೊಳಗಿನ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು.

ಈಗಾಗಲೇ ಚರ್ಚಿಸಿದಂತೆ ರಾಷ್ಟ್ರದ ಸುಸ್ಥಿರ ಅಭಿವೃದ್ಧಿ, ವೈಯಕ್ತಿಕ ಪ್ರಗತಿ, ನಿಸರ್ಗ ಪೂರಕ ಜೀವನಕ್ಕೆ ಶಿಕ್ಷಣವೇ ತಳಹದಿಯಾದ್ದರಿಂದ ಯಾವ ಮಗುವೂ ಶಾಲೆಯಿಂದ ಹೊರಗಿದ್ದು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ನಮ್ಮ ನೈತಿಕ, ವೃತ್ತಿಪರ ಹಾಗೂ ಮೂಲಭೂತ ಕರ್ತವ್ಯವಾಗಿದೆ. ಆದರೆ ಈಗಲೂ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಗಣನೀಯವಾಗಿದೆ ಕುಸಿಯುತ್ತಿದೆ. ಶಾಲೆಯಿಂದ ಹೊರಗುಳಿದ ಮಕ್ಕಳ ಅಂಕಿ ಅಂಶಗಳು ಮತ್ತು ಅವುಗಳ ಗಂಭೀರತೆಯನ್ನು ಸೂಚಿಸುತ್ತದೆ.

ನೀತಿ, ಕಾನೂನು ಮತ್ತು ಕಾರ್ಯಕ್ರಮಗಳು ಮಕ್ಕಳ ಪರವಾಗಿದ್ದರೆ ಸಾಕು ಅದು ಮಕ್ಕಳಿಗೆ ದಕ್ಕುತ್ತದೆ ಎಂದು ಹೇಳುವುದು ಕಷ್ಟಸಾಧ್ಯ. ಸಂವಿಧಾನ ಮಕ್ಕಳಿಗೆ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಕೊಡಮಾಡಿದರು, ಅದನ್ನು ಜಾರಿಗೊಳಿಸಬೇಕಾದ ಅಧಿಕಾರಶಾಹಿ ಮತ್ತು ಸಂಬಂಧಿಸಿದ ಇಲಾಖೆಗಳು ಹಕ್ಕನ್ನು ಸಾಕಾರಗೊಳಿಸುವ ಬದ್ಧತೆ ಮತ್ತು ಇಚ್ಛಾಶಕ್ತಿ ಪ್ರದರ್ಶಿಸದಿದ್ದರೆ, ಅದು ಕೇವಲ ಸಂವಿಧಾನ ಮತ್ತು ಕಾನೂನಿನ ಪುಸ್ತಕದಲ್ಲಿ ಮಾತ್ರ ಹಕ್ಕಾಗಿ ಉಳಿದುಬಿಡುತ್ತದೆ ಎಂಬುದು ಅಕ್ಷರಶಃ ನಿಜ. ಈಗ ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಶಿಕ್ಷಣ ಇಲಾಖೆ ತೋರುತ್ತಿರುವ ಕಾಳಜಿ ನೋಡಿದರೆ ಅದು ನಮಗೆ ಗೊತ್ತಗುತ್ತದೆ.

ಈ ದೇಶದ ಪ್ರತಿಯೊಬ್ಬ ನಾಗರೀಕನಿಗೂ ಜೀವಿಸುವ ಮೂಲಭೂತ ಹಕ್ಕಿದೆ. ಹಾಗೆ ಜೀವಿಸಿದ್ದಾರೆಂದರೆ ಅವರಿಗೆ ಶಿಕ್ಷಣವನ್ನು ಒದಗಿಸಲೇ ಬೇಕಾದ ಜವಾಬ್ದಾರಿ ಸಮಾಜದ, ಕಾರ್ಯಾಂಗದ ಮೇಲಿದೆ. ಆದ್ದರಿಂದಲೇ ಶಿಕ್ಷಣ ಜೀವಿಸುವ ಹಕ್ಕಿನ ಅವಿಭಾಜ್ಯ ಅಂಗವಾಗಿದೆ. ಜೀವಿಸುವ ಹಕ್ಕು ಮೂಲಭೂತ ಹಕ್ಕಾದರೆ ಶಿಕ್ಷಣ ಪಡೆಯುವ ಹಕ್ಕು ಕೂಡ ಪ್ರತಿ ನಾಗರೀಕರ ಮೂಲಭೂತ ಹಕ್ಕು. 1950 ರಲ್ಲಿ ಅಳವಡಿಸಿಕೊಳ್ಳಲಾದ ಭಾರತದ ಸಂವಿಧಾನದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ರಾಜ್ಯ ನಿರ್ದೇಶಕ ತತ್ವದ ಭಾಗವಾಗಿತ್ತು. ಸಂವಿಧಾನದ 45 ನೇ ವಿಧಿಯ ಪ್ರಕಾರ ದೇಶದ ಸಂವಿಧಾನ ಜಾರಿಯಾದ 10 ವರ್ಷದ ಅವಧಿಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು 14 ವರ್ಷದ ವಯೋಮಾನದವರೆಗಿನ ಎಲ್ಲ ಮಕ್ಕಳಿಗೂ ನೀಡಬೇಕೆಂಬ ಆಶಯವನ್ನು ಹೊಂದಲಾಗಿತ್ತಾದರೂ ಈ ಪ್ರಯತ್ನದಲ್ಲಿ ಇದುವರೆಗೂ ಪರಿಪೂರ್ಣವಾದ ಯಶಸ್ಸು ಸಾಧ್ಯವಾಗಿರಲಿಲ್ಲ. ಸಂವಿಧಾನದ 4ನೇ ಭಾಗದಲ್ಲಿ ಅನುಚ್ಛೇದ 45ನ್ನು ರಾಜ್ಯ ನಿರ್ದೇಶಕ ತತ್ವಗಳನ್ನಾಗಿ ಪರಿಗಣಿಸಿರುವುದರಿಂದ ಇವುಗಳಿಗೆ ಕಾನೂನಿನ ಮನ್ನಣೆ ನೀಡಲು ಸಂವಿಧಾನಾತ್ಮಕವಾಗಿ ಅವಕಾಶವಿರಲಿಲ್ಲ. ವಿಶ್ವಸಂಸ್ಥೆಯ ಅಂಗವಾದ ಯುನೆಸ್ಕೋ ತನ್ನ ಸದಸ್ಯ ರಾಷ್ಟ್ರಗಳಲ್ಲಿ ಶಿಕ್ಷಣದ ಹಕ್ಕಿಗಾಗಿ ಕೆಲವು ನಿಯಮಗಳನ್ನು ಹಾಕಿದೆ. ಇದರಲ್ಲಿ ಪರಿಚ್ಛೇದ 4ರ ಪ್ರಕಾರ ಪ್ರಾಥಮಿಕ ಶಿಕ್ಷಣವು ಉಚಿತ ಹಾಗು ಕಡ್ಡಾಯವಾಗಿರಬೇಕೆಂದು ಒತ್ತಿ ಹೇಳಿದೆ. ಅದೇ ರೀತಿ ಪರಿಚ್ಛೇದ 13 ಮತ್ತು 28 ಕೂಡ ಪ್ರಾಥಮಿಕ ಶಿಕ್ಷಣವು ಒಂದು ಮೂಲಭೂತ ಹಕ್ಕು ಎಂದು ಪ್ರತಿಪಾದಿಸಿವೆ.

ಮಗು ಶಾಲೆ ದೂರ ಅಥವಾ ತನ್ನ ವಾಸಸ್ಥಳದ ನೆರೆಹೊರೆಯಲ್ಲಿ ಶಾಲೆ ಲಭ್ಯವಿಲ್ಲವೆಂಬ ಕಾರಣಕ್ಕೆ ಪ್ರಾಥಮಿಕ ಶಿಕ್ಷಣದಿಂದ ವಂಚಿತವಾಗದಂತೆ ಮಾಡುವುದು ಆಯಾ ಸರ್ಕಾರಗಳ ಆದ್ಯ ಕರ್ತವ್ಯವೆಂದು ಯುನೆಸ್ಕೋ ಹೇಳಿದೆ. ವರ್ಣ, ಜಾತಿ, ಧರ್ಮ, ಲಿಂಗ, ಭಾಷೆ, ರಾಜಕೀಯ ಅಥವಾ ಬೇರೆ ಯಾವುದೇ ತಾರತಮ್ಯವಿಲ್ಲದಂತೆ ಮಗುವಿಗೆ ವಿದ್ಯಾಭ್ಯಾಸವನ್ನು ಒದಗಿಸಬೇಕೆಂದು ಯುನೆಸ್ಕೋ ಒತ್ತಿ ಹೇಳಿದೆ. ಈ ಹಿನ್ನೆಲೆಯಲ್ಲಿ ವಯಸ್ಕರಿಗೆ ಮಕ್ಕಳ ಶಿಕ್ಷಣದ ಹಕ್ಕುಗಳ ಬಗ್ಗೆ ಸಾಮಾನ್ಯ ಜ್ಞಾನವಿದೆ ಎಂದಿಟ್ಟುಕೊಳ್ಳೋಣ. ಆದರೆ ಮಕ್ಕಳಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳಿದಿಲ್ಲ. ಮಕ್ಕಳ ಹಕ್ಕುಗಳನ್ನು ನಿರ್ಲಕ್ಷಿಸುತ್ತಾ ಬದುಕುವವರೇ ಬಹಳ ಮಂದಿ. ಹೀಗಿರುವಾಗ ನಮ್ಮ ಸುತ್ತ–ಮುತ್ತ ಎಲ್ಲಿ ನೋಡಿದರೂ ಲಕ್ಷಾಂತರ ಸಂಖ್ಯೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಾಲೆ ಕಾಣದ ಮಕ್ಕಳು ಯಾರದೋ ಒತ್ತಡದಿಂದಾಗಿ ಸಾಗಣೆ–ಮಾರಾಟಕ್ಕೀಡಾಗುವ, ಚಿಕ್ಕ ವಯಸ್ಸಿನಲ್ಲಿಯೇ ಬಾಲ್ಯ ಕಳೆದುಕೊಂಡು ವಯಸ್ಕರಂತೆ ಬಾಳುವುದು, ಪೋಷಕರ ನಿರ್ಲಕ್ಷ್ಯ, ಆರ್ಥಿಕ ದುರ್ಬಲತೆ, ಸಮುದಾಯದ ಅಸಡ್ಡೆ, ಹೀಗೆ ಯಾವುದೋ ಒಂದು ಕಾರಣದಿಂದ ಶಿಕ್ಷಣದ ಹಾದಿಯನ್ನೇ ತುಳಿಯದೆ ದೂರವಿರುವುದು ಕಟುಸತ್ಯ.

ಈ ಹಿಂದೆ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಅನುಷ್ಠಾನಗೊಳಿಸಲಾದ ಶಿಕ್ಷಣದ ನಿಲುವುಗಳು ಯಾವುದೇ ರೀತಿಯಲ್ಲಿ 6 ರಿಂದ 14 ವಯೋಮಾನದ ಮಕ್ಕಳ ಶೈಕ್ಷಣಿಕ ಹಿತಾಸಕ್ತಿಗೆ ದಕ್ಕೆಯುಂಟುಮಾಡುವ ವ್ಯಕ್ತಿ ಅಥವಾ ಸಮುದಾಯದ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸುವಂತಹ ಸ್ಪಷ್ಟ ನಿಯಮಗಳನ್ನು ರೂಪಿಸಿರಲಿಲ್ಲವೆಂಬುದೂ ಸಹ ಸತ್ಯ. ರಾಷ್ಟ್ರದ ಸುಸ್ಥಿರ ಅಭಿವೃದ್ಧಿ, ವೈಯಕ್ತಿಕ ಪ್ರಗತಿ, ನಿಸರ್ಗ ಪೂರಕ ಜೀವನಕ್ಕೆ ಶಿಕ್ಷಣವೇ ತಳಹದಿಯಾದ್ದರಿಂದ ಯಾವ ಮಗುವೂ ಶಾಲೆಯಿಂದ ಹೊರಗಿದ್ದು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ನಮ್ಮ ನೈತಿಕ, ವೃತ್ತಿಪರ ಹಾಗೂ ಮೂಲಭೂತ ಕರ್ತವ್ಯವಾಗಿದೆ ವರ್ಷಗಳಿಗಿಂತ ಹೆಚ್ಚು ಕಾಲ ಮಕ್ಕಳು ಶಾಲೆಯಿಂದ ಹೊರಗುಳಿದಿರುವುದರಿಂದ, ಕೆಲವು ಮಕ್ಕಳು ಶಾಲೆಗೆ ಹಿಂತಿರುಗದಿರುವ ಬಗ್ಗೆ ಮತ್ತು ಸಂಭಾವ್ಯ ಕಲಿಕಾ ನಷ್ಟದ ಬಗ್ಗೆ ಆತಂಕ ಹೆಚ್ಚುತ್ತಿದೆ. ಓದುವಂತಹ ಮೂಲಭೂತ ಕೌಶಲ್ಯಗಳನ್ನು ಪಡೆಯಲು ಆರಂಭಿಸಿರುವ ಮತ್ತು ಆನ್‌ಲೈನ್ ಶಿಕ್ಷಣಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವುಳ್ಳ ಚಿಕ್ಕ ಮಕ್ಕಳಿಗೆ ಈ ಆತಂಕ ನಿಜವಾಗಬಹುದು. ಇನ್ನು, ಓದುವಂತಹ ಮೂಲಭೂತ ಕೌಶಲ್ಯಗಳ ಕೊರತೆ ಉಂಟಾದರೆ, ಭವಿಷ್ಯದಲ್ಲಿ ಶಾಲಾ ಪಠ್ಯಕ್ರಮ ಓದುವ ಮಕ್ಕಳ ಸಾಮರ್ಥ್ಯದ ಮೇಲೂ ಪರಿಣಾಮ ಬೀರುತ್ತದೆ ಎಂಬುದನ್ನು ಮರೆಯಬಾರದು

ಅವಕಾಶ ನೀಡುವ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ–2020ನ್ನು ಜಾರಿಗೊಳಿಸಬಾರದೆಂದು ಆಗ್ರಹಿಸಲಾಗಿದೆ. ಅಲ್ಲದೆ, ಉದ್ಯೋಗ ಕಳೆದುಕೊಂಡ ಮತ್ತು ಆರ್ಥಿಕ ನಷ್ಟ ಹೊಂದಿದ ಲಕ್ಷಾಂತರ ಖುರೇಷಿಗಳಿಗೆ ಯಾವುದೇ ಪರಿಹಾರಗಳನ್ನು ನೀಡದಿರುವುದು ಸಿಪಿಐ(ಎಂ) ಪಕ್ಷವು ಖಂಡಿಸಿದೆ.

ಹಕ್ಕೊತ್ತಾಯಗಳು

ಅಲ್ಪಸಂಖ್ಯಾತರ ಸಂವಿಧಾನಿಕ ಹಕ್ಕುಗಳನ್ನು ರಕ್ಷಿಸಬೇಕು ? ಅವರ ಮೇಲಿನ ಕೋಮು ಹಿಂಸಾಚಾರವನ್ನು ನಿಲ್ಲಿಸಲು ಸರ್ಕಾರವು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಕೋಮು ಹಿಂಸಾಚಾರವನ್ನು ಸೃಷ್ಟಿಸುವ ಪುಂಡಾಟಿಕೆಯ ಗುಂಪುಗಳ ಮೇಲೆ ಹದ್ದಿನ ಕಣ್ಣಿಟ್ಟು ಅವುಗಳ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಕಠಿಣವಾಗಿ ಕ್ರಮ ವಹಿಸಬೇಕು.

ಕೋಮುದ್ವೇಷದ ಹಿಂಸಾಚಾರದಲ್ಲಿ ಹಿಂಸೆಗೊಳಗಾದ ಎಲ್ಲರಿಗೂ ಸೂಕ್ತ ಪರಿಹಾರ ಮತ್ತು ಪ್ರಾಣ ಕಳೆದುಕೊಂಡ ಕುಟುಂಬಗಳ ಸದಸ್ಯರಿಗೆ ಸರಕಾರಿ ಉದ್ಯೋಗ ಒದಗಿಸಬೇಕು.

ಡಾ. ರಾಜೇಂದ್ರ ಸಾಚಾರ್ ಸಮಿತಿಯ ಶಿಫಾರಸ್ಸಿನಂತೆ ಅಲ್ಪಸಂಖ್ಯಾತರ ಆರ್ಥಿಕ–ಸಾಮಾಜಿಕ, ಮತ್ತು ಶೈಕ್ಷಣಿಕ, ಅಭಿವೃದ್ಧಿಗೆ ಸರ್ಕಾರ ಸಮಗ್ರ ಯೋಜನೆ ರೂಪಿಸಬೇಕು. ರಾಜ್ಯ ಸರ್ಕಾರ ನಿಲ್ಲಿಸಿರುವ ವಿದ್ಯಾರ್ಥಿ ವೇತನವನ್ನು ಪುನರ್ ಆರಂಭಿಸಬೇಕು.

ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ–2020ನ್ನು ಕೂಡಲೇ ವಾಪಸ್ಸು ಪಡೆಯಬೇಕು. ಇದರಿಂದಾಗಿ ಉದ್ಯೋಗ ಕಳೆದುಕೊಂಡ ಹಾಗೂ ಆರ್ಥಿಕ ನಷ್ಟ ಹೊಂದಿದ ಖುರೇಷಿಗಳಿಗೆ ತಲಾ ಕನಿಷ್ಠ ಲಕ್ಷ ರೂ.ಗಳ ಪರಿಹಾರ ಮತ್ತು ಹೊಸ ಉದ್ಯೋಗದಲ್ಲಿ ತೊಡಗಲು ಸಹಾಯ ಧನದ ಆರ್ಥಿಕ ನೆರವನ್ನು ಪ್ರಕಟಿಸಬೇಕು.

ಮೇಲಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯು ದೇಶವ್ಯಾಪಿ ಪ್ರತಿಭಟನೆಗೆ ಕರೆ ನೀಡಿತ್ತು. ಅದರ ಭಾಗವಾಗಿ ರಾಜ್ಯದಲ್ಲಿಯೂ ಹಲವು ಕಡೆಗಳನ್ನು ಧರಣಿಗಳು ನಡೆದಿವೆ. ಹಾಸನ, ತುಮಕೂರು, ರಾಯಚೂರು, ಬಳ್ಳಾರಿ, ಕಲಬುರಗಿ, ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಮಂಡ್ಯ, ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ಹಲವು ಜಿಲ್ಲಾ ಕೇಂದ್ರಗಳು ಹಾಗೂ ಸ್ಥಳೀಯ ಮಟ್ಟದಲ್ಲಿ ಪ್ರತಿಭಟನಾ ಧರಣಿಯನ್ನು ನಡೆಸಲು ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿಕೋರರಿಗೆ ಕಠಿಣ ಶಿಕ್ಷೆ ಹಾಗೂ ಸಂವಿಧಾನಬದ್ಧ ರಕ್ಷಣೆಯನ್ನು ನೀಡಬೇಕೆಂದು ಆಗ್ರಹಿಸಿ ಸರ್ಕಾರಕ್ಕೆ ಸಿಪಿಐ(ಎಂ) ಪಕ್ಷವು ಮನವಿಯನ್ನು ನೀಡಿದೆ.

ತಿದ್ದುಪಡಿ:

ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮ್ಮೇಳನದಲ್ಲಿ ಸನ್ಮಾನಿತರ ಪಟ್ಟಿಯಲ್ಲಿ ಕಾಂ. **ಬಿ.ಕೆ. ಮೋಹನ್** ರವರಿಗೂ ಸನ್ಮಾನಿಸಲಾಗಿದೆ. ಸನ್ಮಾನಿತರ ಪಟ್ಟಿಯಲ್ಲಿ ಹೆಚ್.ಎಸ್. ಕೃಷ್ಣಮೂರ್ತಿ ಎಂದಾಗುವ ಬದಲು ಹೆಚ್. ಎಸ್.ವೆಂಕಟೇಶಮೂರ್ತಿ ಎಂದು ತಪ್ಪಾಗಿ ಮುದ್ರಣಗೊಂಡಿದೆ. ಇದಕ್ಕಾಗಿ ವಿಷಾದಿಸುತ್ತೇವೆ.


–ಸಂ.

ಕರ್ನಾಟಕದಲ್ಲಿ ಬಡತನ, ಹಸಿವು ಮತ್ತು ಅಪೌಷ್ಟಿಕತೆಯ ಅಟ್ಟಹಾಸ



ಪ್ರೊ. ಟಿ. ಆರ್. ಚಂದ್ರಶೇಖರ

ನೀತಿ ಆಯೋಗವು ಭಾರತದ 28 ರಾಜ್ಯಗಳು ಮತ್ತು ಅದರ ಜಿಲ್ಲೆಗಳು ಹಾಗೂ 8 ಕೇಂದ್ರಾಡಳಿತ ಪ್ರದೇಶಗಳ ಬಹುಮುಖಿ ಬಡತನ ಸೂಚ್ಯಂಕಗಳನ್ನು ಸಿದ್ಧಪಡಿಸಿರುವ ವರದಿಯನ್ನು ಬಿಡುಗಡೆ ಮಾಡಿದೆ. ಈ ಸೂಚ್ಯಂಕವು ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟ ಕ್ಷೇತ್ರಗಳ 12 ಸೂಚಿಗಳನ್ನು ಆಧರಿಸಿದ್ದಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕವು ದೇಶದ ಸಾಧನೆಯನ್ನು ಮಾಪನ ಮಾಡಿದರೆ ಬಹುಮುಖಿ ಬಡತನ ಸೂಚ್ಯಂಕವು ದೇಶದಲ್ಲಿನ ಜನರ ದುಸ್ಥಿತಿಯನ್ನು ಮಾಪನ ಮಾಡುವ ಕ್ರಮವಾಗಿದೆ. ಈ ಸೂಚ್ಯಂಕದ ಪ್ರಕಾರ ದೇಶದ 30 ರಾಜ್ಯಗಳ ಪೈಕಿ ಈ ಸೂಚ್ಯಂಕದಲ್ಲಿ ಕರ್ನಾಟಕದ ಸ್ಥಾನ 19 (ಶೇ.13.16). ಒಟ್ಟಾರೆ ಬಹುಮುಖಿ ಬಡತನಕ್ಕೆ ಆರೋಗ್ಯ ಕ್ಷೇತ್ರದಲ್ಲಿನ ಕೊರತೆಯ ಕಾಣಿಕೆಯು ಅತ್ಯಧಿಕವಾಗಿದೆ. ಈ ಕ್ಷೇತ್ರದಲ್ಲಿ ಪೌಷ್ಟಿಕತೆ ಕೊರತೆಯ ಕಾಣಿಕೆ ಶೇ. 28.1 ರಷ್ಟಿದ್ದರೆ ತಾಯಂದಿರ ಆರೋಗ್ಯದಲ್ಲಿನ ಕೊರತೆಯ ಕಾಣಿಕೆ ಶೇ. 10.4 ರಷ್ಟಿದೆ. ರಾಜ್ಯದ ಒಟ್ಟು ಜನಸಂಖ್ಯೆಯ ಶೇ. 61.3 ರಷ್ಟಿರುವ ಮಕ್ಕಳು ಮತ್ತು ಮಹಿಳೆಯರಲ್ಲಿನ ತೀವ್ರತರದ ಅನಿಮಿಯವು ಬಹುಮುಖಿ ಬಡತನಕ್ಕೆ ಒಂದು ಮುಖ್ಯ ಕಾರಣವಾಗಿದೆ. ಕರ್ನಾಟಕದ 30 ಜಿಲ್ಲೆಗಳಲ್ಲಿ ಒಟ್ಟಾರೆ ಬಹುಮುಖಿ ಬಡತನ ಎದುರಿಸುತ್ತಿರುವವರ ಪ್ರಮಾಣ ಶೇ. 20 ಕ್ಕಿಂತ ಅಧಿಕವಿರುವ 8 ಜಿಲ್ಲೆಗಳಲ್ಲಿ ಐದು ಕಲ್ಯಾಣ ಕರ್ನಾಟಕ ವಿಭಾಗದಲ್ಲಿದ್ದರೆ ಮೂರು ಬೆಳಗಾವಿ ವಿಭಾಗದಲ್ಲಿವೆ.




ಇಂದು ನಮ್ಮ ದೇಶದ ಆಳುವ ಪಕ್ಷಕ್ಕೆ ಬಡತನ, ಹಸಿವು, ಮಕ್ಕಳ ಮತ್ತು ಮಹಿಳೆಯರಲ್ಲಿನ ಅಪೌಷ್ಟಿಕತೆಗಳು ಸಮಸ್ಯೆಗಳಾಗಿ ಕಾಣುತ್ತಿಲ್ಲ. ಅಭಿವೃದ್ಧಿ ಎಂದರೆ ಜಿಎಸ್‌ಡಿಪಿ(ಜಿಡಿಪಿ), ಬಂಡವಾಳ, ಉತ್ಪಾದನೆ ಮತ್ತು ಮೂಲಸೌಕರ್ಯಗಳು ಎಂದು ಸರ್ಕಾರವು ಭಾವಿಸಿದೆ. ಆದರೆ ಇಂದು ಖಚಿತವಾಗಿರುವಂತೆ ಅಭಿವೃದ್ಧಿ ಎನ್ನುವುದು ಜನರ ಬದುಕಿಗೆ ಸಂಬಂಧಿಸಿದ್ದು ಎನ್ನುವುದಾಗಿದೆ. ಒಟ್ಟು ಜನಸಂಖ್ಯೆಯ ಶೇ. 37.79 ರಷ್ಟು ಜನರು ಬಹುಮುಖಿ ಬಡತನವನ್ನು ಎದುರಿಸುತ್ತಿರುವ ಮತ್ತು ದೇಶದಲ್ಲಿಯೇ 2019–2020ರಲ್ಲಿ ಅತ್ಯಂತ ಕೆಳಮಟ್ಟದ ತಲಾವರಮಾನ(ರೂ.70,419)ವಿರುವ ಉತ್ತರ ಪ್ರದೇಶದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಪ್ರಧಾನಮಂತ್ರಿಗೆ ಇಂದು ಅಭಿವೃದ್ಧಿಯ ಆದ್ಯತೆಯಾಗಿದೆ. ಹೀಗೆ ಇಂದು ದೇಶದಲ್ಲಿ ಅಭಿವೃದ್ಧಿಯ ಆದ್ಯತೆಗಳನ್ನು ವಿಕೃತಗೊಳಿಸಲಾಗುತ್ತಿದೆ. ಈ ಕಾರಣಕ್ಕೆ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ಸ್ಥಾನ 2020ರಲ್ಲಿ 94 ರಲ್ಲಿದ್ದುದು 2021ರಲ್ಲಿ 101ಕ್ಕಿಳಿದಿದೆ. ಇದೇ ರೀತಿಯಲ್ಲಿ ಹಸಿವನ್ನು ಸೂಚಿಸುವ ಮಕ್ಕಳು ಮತ್ತು ಮಹಿಳೆಯರಲ್ಲಿನ ಅನಿಮಿಯ(ಅಪೌಷ್ಟಿಕತೆ)ಭಾರತದಲ್ಲಿ 2015–16 ರಿಂದ 2019–2021ರ ನಡುವಿನ ಮೋದಿ ಪರ್ವದಲ್ಲಿ ತೀವ್ರ ಏರಿಕೆಯಾಗಿದೆ. ಭಾರತದಲ್ಲಿ 15 ರಿಂದ 49 ವರ್ಷಗಳ ವಯೋಮಾನದ ಒಟ್ಟು ಮಹಿಳೆಯಲ್ಲಿನ ಅನಿಮಿಯ ಎದುರಿಸುತ್ತಿರುವವರ ಪ್ರಮಾಣ 2015–16ರಲ್ಲಿ ಶೇ. 58.6 ರಷ್ಟಿದ್ದುದು 2019–2021ರಲ್ಲಿ ಶೇ. 67.1 ಕ್ಕೇರಿದೆ. ಭಾರತದಲ್ಲಿನ 6 ರಿಂದ 59 ತಿಂಗಳು ವಯೋಮಾನದ ಒಟ್ಟು ಮಕ್ಕಳಲ್ಲಿ ಅನಿಮಿಯ ಎದುರಿಸುತ್ತಿರುವವರ ಪ್ರಮಾಣ 2015–16ರಲ್ಲಿ ಶೇ. 54.1 ರಷ್ಟಿದ್ದುದು 2019–2021ರಲ್ಲಿ ಶೇ. 59ಕ್ಕೇರಿದೆ. ಒಟ್ಟು ಗರ್ಭಿಣಿ ಮಹಿಳೆಯರಲ್ಲಿನ ಅನಿಮಿಯ 2019–2021ರಲ್ಲಿ ಶೇ. 50.4 ರಷ್ಟಿದೆ (ಮೂಲ: ಭಾರತ ಸರ್ಕಾರದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 5).

ಇದೀಗ ನೀತಿ ಆಯೋಗವು ಭಾರತದ 28 ರಾಜ್ಯಗಳು ಮತ್ತು ಅದರ ಜಿಲ್ಲೆಗಳು ಹಾಗೂ 8 ಕೇಂದ್ರಾಡಳಿತ ಪ್ರದೇಶಗಳ ಬಹುಮುಖಿ ಬಡತನ ಸೂಚ್ಯಂಕಗಳನ್ನು 2015–16ರ ಎನ್.ಎಫ್.ಎಚ್.ಎಸ್–4 (ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ)ರ ಅಂಕಿಸಂಖ್ಯೆಗಳನ್ನು ಬಳಸಿಕೊಂಡು ಸಿದ್ಧಪಡಿಸಿರುವ ವರದಿಯನ್ನು ಬಿಡುಗಡೆ ಮಾಡಿದೆ. ಈ ಸೂಚ್ಯಂಕವು ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟ ಕ್ಷೇತ್ರಗಳ 12 ಸೂಚಿಗಳನ್ನು ಆಧರಿಸಿದ್ದಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕವು ದೇಶದ ಸಾಧನೆಯನ್ನು ಮಾಪನ ಮಾಡಿದರೆ ಬಹುಮುಖಿ ಬಡತನ ಸೂಚ್ಯಂಕವು ದೇಶದಲ್ಲಿನ ಜನರ ದುಸ್ಥಿತಿಯನ್ನು ಮಾಪನ ಮಾಡುವ ಕ್ರಮವಾಗಿದೆ. ಈ ಸೂಚ್ಯಂಕದ ಪ್ರಕಾರ ದೇಶದ 30 ರಾಜ್ಯಗಳ ಪೈಕಿ ಅತ್ಯಧಿಕ ಬಹುಮುಖಿ ಬಡತನದ ಸ್ಥಾನದಲ್ಲಿ ಬಿಹಾರವಿದ್ದರೆ(ಶೇ.51.91) ಮೂರನೆಯ ಅತಿ ಹೆಚ್ಚಿನ ಬಡವರ ಸ್ಥಾನದಲ್ಲಿ ಉತ್ತರ ಪ್ರದೇಶವಿದೆ(37.79). ಈ ಸೂಚ್ಯಂಕದಲ್ಲಿ ಕರ್ನಾಟಕದ ಸ್ಥಾನ 19(ಶೇ.13.16) ಮತ್ತು ಅತ್ಯಂತ ಕಡಿಮೆ ಬಡತನದರಾಜ್ಯದಲ್ಲಿ ಕೇರಳ(ಶೇ.0.71) ಮೊದಲನೆಯ ಸ್ಥಾನದಲ್ಲಿದೆ. **(ವಿವಿಧ ರಾಜ್ಯಗಳಬಡತನದ ಪ್ರಮಾಣವನ್ನು ಕೋಷ್ಟಕ–1 ರಲ್ಲಿ ಕೊಡಲಾಗಿದೆ.)**

ಕೋಷ್ಟಕ–1 :ಯಾವ ರಾಜ್ಯದಲ್ಲಿ ಎಷ್ಟು % ಬಡವರು

ರಾಜ್ಯ	%	ರಾಜ್ಯ	%	ರಾಜ್ಯ	%	ರಾಜ್ಯ	%	ರಾಜ್ಯ	%
ಬಿಹಾರ	51.9	ಛತ್ತಿಸಘಡ	29.9	ಗುಜರಾತ್	18.6	ಕರ್ನಾಟಕ	13.2	ಪಂಜಾಬ್	5.6
ಜಾರ್ಖಂಡ್	42.2	ರಾಜಸ್ಥಾನ	29.5	ಮಣಿಪುರ	17.9	ಜಮ್ಮು–ಕಾಶ್ಮೀರ	12.6	ತಮಿಳುನಾಡು	4.9
ಉತ್ತರ ಪ್ರದೇಶ	37.8	ಒಡಿಶಾ	29.4	ಉತ್ತರಾಖಂಡ	17.7	ಆಂಧ್ರ ಪ್ರದೇಶ	12.3	ದೆಹಲಿ	4.8
ಮಧ್ಯಪ್ರದೇಶ	36.7	ನಾಗಾಲ್ಯಾಂಡ್	25.2	ತ್ರಿಪುರಾ	16.7	ಹರಿಯಾಣ	12.3	ಸಿಕ್ಕಿಂ	3.8
ಮೇಘಾಲಯ	32.7	ಅರುಣಾಚಲ ಪ್ರ.	24.3	ಮಹಾರಾಷ್ಟ್ರ	14.9	ಮಿಜೋರಾಂ	9.8	ಗೋವಾ	3.8
ಆಸ್ಸಾಂ	32.7	ಪಶ್ಚಿಮ ಬಂಗಾಳ	21.4	ತೆಲಂಗಾಣ	13.7	ಹಿಮಾಚಲ ಪ್ರ.	7.6	ಕೇರಳ	0.7

ಈ ವರದಿಯಲ್ಲಿನ ಕರ್ನಾಟಕ ಮತ್ತು ಅದರ 30 ಜಿಲ್ಲೆಗಳಿಗೆ ಸಂಬಂಧಿಸಿದ ಬಹುಮುಖಿ ಬಡತನದ ಸ್ಥಿತಿಗತಿಯನ್ನು ವಿವರವಾಗಿ ಚರ್ಚಿಸೋಣ. ಈ ಸೂಚ್ಯಂಕದ ಪ್ರಕಾರ ಭಾರತದಲ್ಲಿ ಬಹುಮುಖಿ ಬಡತನ ಎದುರಿಸುತ್ತಿರುವವರ ಪ್ರಮಾಣ ಶೇ. 25.1 ರಷ್ಟಿದ್ದರೆ ಕರ್ನಾಟಕದಲ್ಲಿ ಇದು ಶೇ. 13.6. ಈ ಸೂಚ್ಯಂಕವು ಬಡತನವನ್ನು ಎದುರಿಸುತ್ತಿರುವವರ ಪ್ರಮಾಣವನ್ನು ತೋರಿಸುವುದಲ್ಲದೆ ಬಡವರು ಎದುರಿಸುತ್ತಿರುವ ಬಡತನದ ತೀವ್ರತೆಯನ್ನು ತೋರಿಸುತ್ತದೆ. ಉದಾ: ಭಾರತದಲ್ಲಿ ಬಹುಮುಖಿ ಬಡತನ ಒಳಗೊಳ್ಳುವ 12 ಸೂಚಿಗಳಲ್ಲಿನ ಒಟ್ಟು ಕೊರತೆಯ ಪ್ರಮಾಣ ಶೇ.47.13 ರಷ್ಟಿದ್ದರೆ ಕರ್ನಾಟಕದಲ್ಲಿ ಇದರ ಪ್ರಮಾಣ ಶೇ. 42.7. ಈಗಾಗಲೆ ಹೇಳಿರುವಂತೆ ಈ ಸೂಚ್ಯಂಕವನ್ನು ಆರೋಗ್ಯ ಕ್ಷೇತ್ರದ ಪೌಷ್ಟಿಕತೆ, ಹದಿಹರೆಯದ ಮಕ್ಕಳ ಮರಣ ಪ್ರಮಾಣ ಮತ್ತು ತಾಯಂದಿರ ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿನ ಪೂರೈಸಿದ ಶಾಲಾ ವರ್ಷಗಳು ಮತ್ತು ಶಾಲಾ ಹಾಜರಾತಿ ಹಾಗೂ ಜೀವನಮಟ್ಟಕ್ಕೆ ಸಂಬಂಧಿಸಿದ ಅಡುಗೆ ಇಂಧನ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸಂಪರ್ಕ, ವಸತಿ, ಆಸ್ತಿ ಮತ್ತು ಬ್ಯಾಂಕ್ ಖಾತೆಯಿರುವವರ ಪ್ರಮಾಣ ಎಂಬ ಒಟ್ಟು 12 ಸೂಚಿಗಳನ್ನು ಬಳಸಿ ಲೆಕ್ಕ ಹಾಕಲಾಗಿದೆ. ಈ 12 ಸೂಚಿಗಳಲ್ಲಿನ ಕೊರತೆಯನ್ನು ಗಣನೆ ಮಾಡಿ ಸೂಚ್ಯಂಕವನ್ನು ರೂಪಿಸಲಾಗುತ್ತದೆ. **(ಬಹುಮುಖಿ ಬಡತನದ ಪ್ರಮಾಣ, ತೀವ್ರತೆ ಮತ್ತು ಸೂಚ್ಯಂಕಗಳನ್ನು ಹೇಗೆ ಅಳೆಯಲಾಗುವುದು ಎಂಬುದನ್ನು 'ಬಹುಮುಖಿ ಬಡತನವನ್ನು ಹೇಗೆ ಅಳೆಯಲಾಗುತ್ತದೆ?' ಎಂಬ ಬಾಕ್ಸ್ ನಲ್ಲಿ ಕೊಡಲಾಗಿದೆ)**



ಬಹುಮುಖಿ ಬಡತನಕ್ಕೆ ಯಾವುದರ ಕಾಣಿಕೆ ಅಧಿಕ?

ಕರ್ನಾಟಕದಲ್ಲಿನ ಬಹುಮುಖಿ ಬಡತನಕ್ಕೆ ಮೂರು ಸೂಚಿಗಳನ್ನೊಳಗೊಂಡ ಆರೋಗ್ಯ ಕ್ಷೇತ್ರದ ಕಾಣಿಕೆಯು ಶೇ.39.8 ರಷ್ಟಿದ್ದರೆ ಎರಡು ಸೂಚಿಗಳನ್ನೊಳಗೊಂಡ ಶಿಕ್ಷಣದ ಕಾಣಿಕೆ ಶೇ. 22.5. ಈ ಬಡತನಕ್ಕೆ ಏಳು ಸೂಚಿಗಳನ್ನೊಳಗೊಂಡ ಜೀವನಮಟ್ಟದ ಕಾಣಿಕೆ ಶೇ. 37.5. ಒಟ್ಟಾರೆ ಬಹುಮುಖಿ ಬಡತನಕ್ಕೆ ಆರೋಗ್ಯ ಕ್ಷೇತ್ರದಲ್ಲಿನ ಕೊರತೆಯ ಕಾಣಿಕೆಯು ಅತ್ಯಧಿಕವಾಗಿದೆ. ಈ ಕ್ಷೇತ್ರದಲ್ಲಿ ಪೌಷ್ಟಿಕತೆ ಕೊರತೆಯ ಕಾಣಿಕೆ ಶೇ. 28.1 ರಷ್ಟಿದ್ದರೆ ತಾಯಂದಿರ ಆರೋಗ್ಯದಲ್ಲಿನ ಕೊರತೆಯ ಕಾಣಿಕೆ ಶೇ. 10.4 ರಷ್ಟಿದೆ. ಈ ಸೂಚ್ಯಂಕವು ತೋರಿಸುತ್ತಿರುವ ಫಲಿತಕ್ಕೂ ಮತ್ತು ಎನ್.ಎಫ್.ಎಚ್.ಎಸ್–5 ತೋರಿಸುತ್ತಿರುವ ಫಲಿತಕ್ಕೂ ನಡುವೆ ಸಂಬಂಧವಿದೆ. ರಾಜ್ಯದ ಒಟ್ಟು ಜನಸಂಖ್ಯೆಯ ಶೇ. 61.3 ರಷ್ಟಿರುವ ಮಕ್ಕಳು ಮತ್ತು ಮಹಿಳೆಯರಲ್ಲಿನ ತೀವ್ರತರದ ಅನಿಮಿಯವು ಬಹುಮುಖಿ ಬಡತನಕ್ಕೆ ಒಂದು ಮುಖ್ಯ ಕಾರಣವಾಗಿದೆ. ಈ ಫಲಿತಗಳ ನೀತಿನಿರೂಪಣಾ ನಿರ್ದೇಶನವು ಸ್ಪಷ್ಟವಾಗಿದೆ. ನಮ್ಮ ರಾಜ್ಯದಲ್ಲಿ ಪ್ರಧಾನವಾಗಿ ಆರೋಗ್ಯ ಸೇವೆ ಮತ್ತು ಅದರಲ್ಲಿ ಪೌಷ್ಟಿಕತೆ ಕಾರ್ಯಕ್ರಮ ಆದ್ಯತೆಯ ಕಾರ್ಯಕ್ರಮವಾಗಬೇಕು ಎಂಬುದು ಈ ಎಲ್ಲ ವರದಿಗಳ ಮತ್ತು ಅಧ್ಯಯನಗಳ ನಿರ್ದೇಶನವಾಗಿದೆ. ಆದರೆ ಈ ಸತ್ಯವು ಸರ್ಕಾರಕ್ಕೆ ತಿಳಿದಂತೆ ಕಾಣುವುದಿಲ್ಲ.

ಬಹುಮುಖಿ ಬಡತನದ ಪ್ರಾದೇಶಿಕ ಆಯಾಮ

ನೀತಿ ಆಯೋಗವು ಪ್ರಕಟಿಸಿರುವ ಭಾರತದಲ್ಲಿನ ಬಹುಮುಖಿ ಬಡತನ ಸೂಚ್ಯಂಕ ವರದಿಯು ರಾಜ್ಯಗಳ ಜಿಲ್ಲಾವಾರು ಬಡವರ ವಿವರಗಳನ್ನು ಒಳಗೊಂಡಿದೆ. **(ವಿವಿಧ ಜಿಲ್ಲೆಗಳ ಬಹುಮುಖಿ ಬಡತನದ ಪ್ರಮಾಣ ವನ್ನು ಕೋಷ್ಟಕ–2ರಲ್ಲಿ ಕೊಡಲಾಗಿದೆ)** ಕರ್ನಾಟಕದ 30 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಬಹುಮುಖಿ ಬಡತನ ಎದುರಿಸುತ್ತಿರುವವರ ಪ್ರಮಾಣವನ್ನು ವರದಿಯಲ್ಲಿ ನೀಡಲಾಗಿದೆ. ಇದರ ಪ್ರಕಾರ ಅತ್ಯಧಿಕ ಬಹುಮುಖಿ ಬಡತನ ಎದುರಿಸುತ್ತಿರುವವರ ಪ್ರಮಾಣ ಶೇ.41.67 ಯಾದಗಿರಿ ಜಿಲ್ಲೆಯಲ್ಲಿದ್ದರೆ, ಅತ್ಯಂತ ಕಡಿಮೆ ಪ್ರಮಾಣ ಶೇ. 2.31 ಬೆಂಗಳೂರು ನಗರ ಜಿಲ್ಲೆಯಲ್ಲಿದೆ. ಒಟ್ಟಾರೆ ಬಹುಮುಖಿ ಬಡತನ ಎದುರಿಸುತ್ತಿರುವವರ ಪ್ರಮಾಣ ಶೇ. 20 ಕ್ಕಿಂತ ಅಧಿಕವಿರುವ 8 ಜಿಲ್ಲೆಗಳಲ್ಲಿ ಐದು ಕಲ್ಯಾಣ ಕರ್ನಾಟಕ ವಿಭಾಗದಲ್ಲಿದ್ದರೆ ಮೂರು ಬೆಳಗಾವಿ ವಿಭಾಗದಲ್ಲಿವೆ. ಇದೇ ರೀತಿಯಲ್ಲಿ ಬಹುಮುಖಿ ಬಡತನ ಎದುರಿಸುತ್ತಿರುವವರ ಪ್ರಮಾಣ ಶೇ. 10 ಕ್ಕಿಂತ ಕಡಿಮೆಯಿರುವ 9 ಜಿಲ್ಲೆಗಳಲ್ಲಿ ಐದು ಮೈಸೂರು ವಿಭಾಗದಲ್ಲಿದ್ದರೆ ಮೂರು ಬೆಂಗಳೂರು ವಿಭಾಗದಲ್ಲಿವೆ ಮತ್ತು ಒಂದು ಜಿಲ್ಲೆ ಬೆಳಗಾವಿ ವಿಭಾಗದಲ್ಲಿದೆ.

ಈ ವಿವರದಿಂದ ಕರ್ನಾಟಕದಲ್ಲಿ ಬಡತನವು ಅತಿಯಾಗಿ ಕಲ್ಯಾಣ ಕರ್ನಾಟಕ ಮತ್ತು ಬೆಳಗಾವಿ ವಿಭಾಗದ ಜಿಲ್ಲೆಗಳಲ್ಲಿ ಮಡುಗಟ್ಟಿಕೊಂಡಿದ್ದರೆ, ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ಇದು ಕಡಿಮೆ ಪ್ರಮಾಣದಲ್ಲಿದೆ. ಇದೇ ರೀತಿಯಲ್ಲಿ ಎನ್.ಎಫ್.ಎಚ್.ಎಸ್–5 ರಲ್ಲಿನ ವರದಿಯಲ್ಲಿಯೂ ರಾಜ್ಯದ ಕಲ್ಯಾಣ ಕರ್ನಾಟಕದ ಜಿಲ್ಲೆಗಳಾದ ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಕಲಬುರಗಿಗಳಲ್ಲಿ 6 ರಿಂದ 59 ತಿಂಗಳು ವಯೋಮಾನದ ಮಕ್ಕಳಲ್ಲಿ ಅನಿಮಿಯ

ಪುಟ 10 ಕ್ಕೆ

ಕೋಷ್ಟಕ–2 :ಯಾವ ಜಿಲ್ಲೆಯಲ್ಲಿ ಎಷ್ಟು % ಬಡವರು

ಜಿಲ್ಲೆ	%	ಜಿಲ್ಲೆ	%	ಜಿಲ್ಲೆ	%	ಜಿಲ್ಲೆ	%	ಜಿಲ್ಲೆ	%
ಯಾದಗಿರ	41.7	ಗದಗ	20.3	ಚಿಕ್ಕಬಳ್ಳಾಪುರ	15.2	ಚಿಕ್ಕಮಗಳೂರು	11.2	ಬೆಂಗಳೂರು ಗ್ರಾ.	8.4
ರಾಯಚೂರು	32.1	ಬಾಗಲಕೋಟ	20.2	ತುಮಕೂರು	14.0	ಉಡುಪಿ	10.3	ಮೈಸೂರು	7.8
ಕೊಪ್ಪಳ	24.6	ಬೀದರ	19.4	ಉತ್ತರ ಕನ್ನಡ	13.2	ಕೋಲಾರ	10.3	ದಕ್ಷಿಣ ಕನ್ನಡ	6.7
ಬಳ್ಳಾರಿ	23.4	ಚಾಮರಾಜನಗರ	18.9	ಶಿವಮೊಗ್ಗ	12.7	ಧಾರವಾಡ	9.7	ಹಾಸನ	6.6
ಬಿಜಾಪುರ	22.4	ಚಿತ್ರದುರ್ಗ	15.8	ಬೆಳಗಾಂ	12.3	ರಾಮನಗರ	8.8	ಮಂಡ್ಯ	6.6
ಗುಲ್ಬರ್ಗಾ	21.8	ಹಾವೇರಿ	15.6	ದಾವಣಗೆರೆ	11.7	ಕೊಡಗು	8.7	ಬೆಂಗಳೂರು	2.3





ಸಂಸತ್ತಿಗೆ ಬಿಜೆಪಿಯ ತಿರಸ್ಕಾರ

ಯಾವುದೇ ವಿಷಯವನ್ನು ಚರ್ಚಿಸಲು ಹಾಗೂ ಪ್ರತಿಪಕ್ಷಗಳು ಎತ್ತುವ ಪ್ರಶ್ನೆಗಳಿಗೆ ಉತ್ತರಿಸಲು ಸರ್ಕಾರ ಸಿದ್ಧವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸಾರಿದ್ದಕ್ಕೆ ತದ್ವಿರುದ್ಧವಾಗಿ ಹೇಗೆ ತರಾತುರಿಯಲ್ಲಿ ಮೂರು ಕೃಷಿ ಕಾನೂನುಗಳನ್ನು ಅಂಗೀಕರಿಸುವಂತೆ ಮಾಡಿತ್ತೋ, ಅದೇ ರೀತಿಯಲ್ಲಿ ಕಾನೂನುಗಳ್ನು ವಾಪಸ್ ಪಡೆಯುವ ಪ್ರಕ್ರಿಯೆಯನ್ನೂ ಕೆಲವೇ ನಿಮಿಷಗಳಲ್ಲಿ ಮುಗಿಸಿ ಬಿಟ್ಟಿದೆ. ಇಬ್ಬರೂ ಸಭಾಧ್ಯಕ್ಷರುಗಳು ಸಂಸದೀಯ ಶಿಷ್ಟಾಚಾರಗಳಿಗೆ ಒಂದಿಷ್ಟೂ ಗೌರವ ತೋರಲಿಲ್ಲ. ಸಂಸತ್ ಸದಸ್ಯರು ಮತ್ತು ಪ್ರತಿಪಕ್ಷದ ಹಕ್ಕುಗಳ ಮೇಲಿನ ಈ ದಾಳಿಗಳನ್ನು ಪ್ರತಿಪಕ್ಷಗಳು ಒಗ್ಗಟ್ಟಿನಿಂದ ಪ್ರತಿಭಟಿಸುತ್ತಿವೆ. ಸಂಸತ್ತಿನ ಒಳಗಡೆ ನಿರ್ದಿಷ್ಟ ಪ್ರಶ್ನೆಗಳ ಮೇಲೆ ಈ ಒಗ್ಗಟ್ಟಿನ ಕಾರ್ಯಾಚರಣೆ ಒಂದು ಸಂಯುಕ್ತ ಪ್ರತಿರೋಧವನ್ನು ಹೇಗೆ ಕಟ್ಟಬಹುದು ಎಂಬುದಕ್ಕೆ ಮಾದರಿಯಂತಿದೆ.

*** ಪ್ರಕಾಶ್ ಕಾರಟ್**



ಸಂಸತ್ತು ಹಾಗೂ ಅದರ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ ಬಗ್ಗೆ ಸಾರಾಸಗಟು ತಿರಸ್ಕಾರ– ಇದು ಸಂಸತ್ತಿನ ಬಗ್ಗೆ ಮೋದಿ ಸರ್ಕಾರದ ಧೋರಣೆ ಎಂಬುದನ್ನು ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನವೇ ಪ್ರಕಟಗೊಳಿಸಿದೆ.

ಯಾವುದೇ ವಿಷಯವನ್ನು ಚರ್ಚಿಸಲು ಹಾಗೂ ಪ್ರತಿಪಕ್ಷಗಳು ಎತ್ತುವ ಪ್ರಶ್ನೆಗಳಿಗೆ ಉತ್ತರಿಸಲು ಸರ್ಕಾರ ಸಿದ್ಧವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸಾರಿದ್ದರು. ಆದರೆ ತದ್ವಿರುದ್ಧವಾಗಿ, ಮೂರು ಕೃಷಿ ಕಾನೂನುಗಳನ್ನು ವಾಪಸ್ ಪಡೆಯುವ ಹಾಗೂ ಅದಕ್ಕೆ ಸಂಬಂಧಿಸಿದ ವಿಚಾರಗಳ ಚರ್ಚೆಗೆ ಆಳುವ ಪಕ್ಷ ಅವಕಾಶವನ್ನು ನಿರಾಕರಿಸಿದೆ.

ಅಭಿನಂದನೆ–ಚರ್ಚೆಯನ್ನು ರದ್ದುಮಾಡುವ ಮಸೂದೆಯ ಬಗ್ಗೆ !



2020ರ ಸೆಪ್ಟೆಂಬರ್‌ನಲ್ಲಿ ಹೇಗೆ ತರಾತುರಿಯಲ್ಲಿ ಯಾವುದೇ ಚರ್ಚೆಯಿಲ್ಲದೆ, ಹಾಗೂ ಸಂಬಂಧಪಟ್ಟ ಸಂಸದೀಯ ಸಮಿತಿಯ ಪರಿಶೀಲನೆಗೆ ಒಳಪಡಿಸದೆ ಮೂರು ಕೃಷಿ ಕಾನೂನುಗಳನ್ನು ಅಂಗೀಕರಿಸುವಂತೆ ಸರ್ಕಾರ ಮಾಡಿತ್ತೋ, ಅದೇ ರೀತಿಯಲ್ಲಿ ಕಾನೂನುಗಳ್ನು ವಾಪಸ್ ಪಡೆಯುವ ಪ್ರಕ್ರಿಯೆಯನ್ನೂ ಕೆಲವೇ ನಿಮಿಷಗಳಲ್ಲಿ, ಯಾವುದೇ ಚರ್ಚೆಗೆ ಅವಕಾಶ ನಿರಾಕರಿಸುತ್ತಲೇ ಮುಗಿಸಿ ಬಿಟ್ಟಿದೆ. ಲೋಕಸಭಾಧ್ಯಕ್ಷರು ಮತ್ತು ರಾಜ್ಯಸಭೆಯ ಸಭಾಪತಿಗಳು ಸಂಸದೀಯ ಶಿಷ್ಟಾಚಾರಗಳಿಗೆ ಒಂದಿಷ್ಟೂ ಗೌರವ ತೋರಲಿಲ್ಲ.

ರಾಜ್ಯಸಭೆಯಲ್ಲಂತೂ ಸರ್ವಾಧಿಕಾರಶಾಹಿಯ ಅತ್ಯಂತ ಕೆಟ್ಟ ಪ್ರದರ್ಶನವಾಯಿತು. ರಾಜ್ಯಸಭೆಯಲ್ಲಿ ಎಲ್ಲ ಕಾನೂನುಗಳಿಗೆ ಬಹುಮತ ಪಡೆಯುವ ಬಗ್ಗೆ ಬಿಜೆಪಿಗೆ ಖಾತರಿಯಿಲ್ಲ. ಹಾಗಾಗಿ ಪ್ರತಿಪಕ್ಷದ ಧ್ವನಿಯನ್ನು ಅಡಗಿಸುವುದು ಸರ್ಕಾರ ಹಾಗೂ ಆಳುವ ಪಕ್ಷದ ಧೋರಣೆ ಎನ್ನುವುದು ಸುಸ್ಪಷ್ಟ. ಯಾವುದೇ ಪ್ರಮುಖ ಕಾನೂನನ್ನು ಜಂಟಿ ಆಯ್ಕೆ ಸಮಿತಿ ಪರಿಶೀಲನೆಗೆ ಒಪ್ಪಿಸಲು ನಿರಾಕರಣೆ, ಮಸೂದೆಗಳ ಮೇಲೆ ಸಮಗ್ರ ಚರ್ಚೆಗೆ ನಿರಾಕರಣೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಮತವಿಭಜನೆ ಮತ್ತು ಮತದಾನ ನಡೆಸಬೇಕೆಂದು ಕೇಳುವ ಸದಸ್ಯರ ಹಕ್ಕನ್ನು ನಿರಾಕರಿಸಿದ್ದು –ಇವೆಲ್ಲವೂ ಪ್ರತಿಪಕ್ಷದ ಧ್ವನಿ ಅಡಗಿಸುವ ಹುನ್ನಾರ.

ಅಧಿವೇಶನದ ಮೊದಲ ದಿನವೇ ರಾಜ್ಯಸಭೆಯಲ್ಲಿ 12 ಸಂಸದರನ್ನು ಇಡೀ ಅಧಿವೇಶನದಿಂದ ಅಮಾನತು ಮಾಡುವ ನಿರ್ಣಯವನ್ನು ಅಂಗೀಕರಿಸಲಾಯಿತು. ಈ 12 ಸದಸ್ಯರು ಸಂಸತ್ತಿನ ಹಿಂದಿನ ಅಧಿವೇಶನದ ವೇಳೆ ಆಗಸ್ಟ್ 11ರಂದು ಅಶಿಸ್ತಿನಿಂದ ಹಾಗೂ ಹಿಂಸಾತ್ಮಕವಾಗಿ ವರ್ತಿಸಿದರು ಎನ್ನುವುದು ಅವರ ವಿರುದ್ಧದ ಆರೋಪವಾಗಿದೆ. ಪ್ರತಿಪಕ್ಷಗಳು ಪ್ರತಿಕ್ರಿಯಿಸಿ ಪ್ರಚೋದನೆಗೆ ಒಳಗಾಗುವಂತೆ ಮಾಡುವುದು ಹಾಗೂ ಪ್ರತಿಪಕ್ಷದ ಹಾಜರಿಯಿಲ್ಲದೆ ಮಸೂದೆಗಳನ್ನು ಸರ್ಕಾರ ಅಂಗೀಕರಿಸಲು ಸಾಧ್ಯವಾಗುವ ಸನ್ನಿವೇಶ ನಿರ್ಮಿಸುವುದು ಈ ಪೂರ್ವನಿರ್ಧಾರಿತ ಪ್ರಚೋದನಾತ್ಮಕ ಕ್ರಮದ ಹಿಂದಿನ ಉದ್ದೇಶವಾಗಿತ್ತು.

ಸಾಮಾನ್ಯ ವಿಮೆಯನ್ನು (ಜನರಲ್ ಇನ್ಶೂರೆನ್ಸ್)

ಪುಟ 12 ನೋಡಿ



ತ್ರಿಪುರಾದಲ್ಲಿ ಮೋಸದ ಚುನಾವಣೆಯ ಪ್ರಹಸನ

ತ್ರಿಪುರಾದಲ್ಲಿ 20 ಪುರಸಭೆಗಳಲ್ಲಿ ಏಳನ್ನು ಯಾವುದೇ ಸ್ಪರ್ಧೆ ನಡೆಯದಂತೆ ಮಾಡಿ ಅವಿರೋಧವಾಗಿ 'ಗೆದ್ದರೆ', 'ಚುನಾವಣೆ' ನಡೆದ ಉಳಿದ 13ರಲ್ಲಿ 5 ಪುರಸಭೆ/ನಗರಸಭೆಗಳಲ್ಲಿ ಮತಗಟ್ಟೆ ವಶ ಸೇರಿದಂತೆ ಸಂಪೂರ್ಣವಾಗಿ ಮತ್ತು 8 ರಲ್ಲಿ ಭಾಗಶಃ ಚುನಾವಣಾ ಮೋಸ ನಡೆಸಿ ಬಿಜೆಪಿ ಭಾರೀ 'ಗೆಲುವು' ಪಡೆದಿದೆ! ಈ ಫಲಿತಾಂಶವನ್ನು ಉತ್ತಮ ಆಡಳಿತಕ್ಕೆ ಜನರ ಆದ್ಯತೆ ಎಂದು ನರೇಂದ್ರ ಮೋದಿ ಶ್ಲಾಘಿಸಿರುವುದು ಮತ್ತು ಅಮಿತ್ ಶಾ ಬಿಜೆಪಿಯ ಅಭಿವೃದ್ಧಿ ರಾಜಕಾರಣದಲ್ಲಿ ಜನಗಳಲ್ಲಿರುವ ಅಚಲ ನಂಬಿಕೆ ಎಂದು ಜೈಕಾರ ಹಾಕಿರುವುದು ಈ ಚುನಾವಣಾ ಮೋಸದ ಕಸರತ್ತಿಗೆ ಬಿಜೆಪಿಯ ಉನ್ನತ ನಾಯಕತ್ವದ ಆಶೀರ್ವಾದ ಇದೆ ಎಂಬುದನ್ನು ತೋರಿಸುತ್ತದೆ.

ತ್ರಿಪುರಾದಲ್ಲಿ ಮುನ್ಸಿಪಲ್ ಚುನಾವಣೆ ಎಂಬ ಹೆಸರಿನಲ್ಲಿ ನಡೆಸಿರುವ ಪ್ರಹಸನ ಬಿಜೆಪಿ ಅಗರ್ತಲಾ ಮಹಾನಗರ ಸಭೆ ಸೇರಿದಂತೆ 20 ನಗರಪ್ರದೇಶದ ಸ್ಥಳೀಯ ಸಂಸ್ಥೆಗಳಲ್ಲಿ 334 ಸ್ಥಾನಗಳಲ್ಲಿ 329 "ಗೆಲ್ಲಲು" ದಾರಿಮಾಡಿ ಕೊಟ್ಟಿದೆ. ಇವುಗಳಲ್ಲಿ 112 ಸ್ಥಾನಗಳನ್ನು ಅವಿರೋಧವಾಗಿ ಗೆದ್ದಿರುವುದರಿಂದ ಯಾವುದೇ ಸ್ಪರ್ಧೆಯಿಲ್ಲದೆ ಏಳು ಪುರಸಭೆಗಳನ್ನು ಸಂಸ್ಥೆಗಳನ್ನು ವಶಪಡಿಸಿಕೊಳ್ಳಲಾಯಿತು.

ಅಗರ್ತಲಾ ಕಾರ್ಪೊರೇಷನ್‌ಇತರ 13 ನಗರ ಸಂಸ್ಥೆಗಳಿಗೆ,ನವೆಂಬರ್ 25 ರಂದು ಚುನಾವಣೆಗಳು ನಡೆದವು. ಅದರಲ್ಲಿ ಕಂಡಿದ್ದು ವ್ಯಾಪಕ ಪ್ರಮಾಣದಲ್ಲಿ ಮತಗಟ್ಟೆ ವಶ, ವಿರೋಧ ಪಕ್ಷದ ಅಭ್ಯರ್ಥಿಗಳ ಪೋಲಿಂಗ್ ಏಜೆಂಟರ ಮೇಲೆ ಹಲ್ಲೆಗಳು ಮತ್ತುಮತ ಹಾಕಲು ಬಯಸುವ ಮತದಾರರನ್ನು ತಡೆಯುವುದು. ಇದರ ಫಲಿತಾಂಶವೆಂದರೆ, ಅಗರ್ತಲಾ ಕಾರ್ಪೊರೇಷನ್‌ನ ಎಲ್ಲಾ 51 ಸ್ಥಾನಗಳನ್ನು ಬಿಜೆಪಿ ಗೆದ್ದಿದೆ– ನಿಜವಾಗಿಯೂ ಒಂದು ಪರಿಪೂರ್ಣ ದಾಖಲೆ!

ಸಿಪಿಐ(ಎಂ) ಮತ್ತು ಎಡರಂಗ ಅಗರ್ತಲಾ ಕಾರ್ಪೊರೇಷನ್ ಮತ್ತು ಇತರ ನಾಲ್ಕು ಪುರಸಭೆಗಳ ಚುನಾವಣೆಗಳನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿವೆ. ಏಕೆಂದರೆ ಅಲ್ಲಿ ನಡೆದಿರುವುದು ಸಂಪೂರ್ಣವಾಗಿ ಮೋಸದ ಚುನಾವಣೆ. ಎಂಟು ಇತರ ಪುರಸಭೆಗಳಲ್ಲಿ ಮತಗಟ್ಟೆ ವಶಪಡಿಸಿಕೊಳ್ಳುವುದು ಹೆಚ್ಚಾಗಿ ಆಯ್ದ ಕಡೆಗಳಲ್ಲಿ ಮಾತ್ರ ನಡೆದಿದೆ. ಆದರೂ ಬೆದರಿಸುವ ತಂತ್ರಗಳು ಮತ್ತು ಮತದಾರರಿಗೆ ಅಡ್ಡಿಪಡಿಸುವುದು ಎಲ್ಲ ಕಡೆಗಳಲ್ಲಿ ನಡೆದಿದೆ.

ಈ ಫಲಿತಾಂಶವನ್ನು ಉತ್ತಮ ಆಡಳಿತಕ್ಕೆ ಜನರ ಆದ್ಯತೆ ಎಂದು ನರೇಂದ್ರ ಮೋದಿ ಶ್ಲಾಘಿಸಿರುವುದು ಮತ್ತು ಅಮಿತ್ ಶಾ ಬಿಜೆಪಿಯ ಅಭಿವೃದ್ಧಿ ರಾಜಕಾರಣದಲ್ಲಿ ಜನಗಳಲ್ಲಿರುವ ಅಚಲ ನಂಬಿಕೆ ಎಂದು ಜೈಕಾರ ಹಾಕಿರುವುದು ಈ ಚುನಾವಣಾ ಮೋಸದ ಕಸರತ್ತಿಗೆ ಬಿಜೆಪಿಯ ಉನ್ನತ ನಾಯಕತ್ವದ ಆಶೀರ್ವಾದ ಇದೆ ಎಂಬುದನ್ನು ತೋರಿಸುತ್ತದೆ.

ಸಿಪಿಐ(ಎಂ) ಅಭ್ಯರ್ಥಿಗಳು, ಕಾರ್ಯಕರ್ತರು ಮತ್ತು ಪೋಲಿಂಗ್ ಏಜೆಂಟ್‌ಗಳ ವಿರುದ್ಧ ಬೆದರಿಕೆಗಳು ಮತ್ತು ಹಿಂಸಾಚಾರ ನವೆಂಬರ್ 28 ರಂದು ಚುನಾವಣಾ ಫಲಿತಾಂಶದ ಪ್ರಕಟಣೆಯ ನಂತರವೂ ಮುಂದುವರೆದಿದೆ. ಇದು ಬಿಜೆಪಿ 2018ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಈ ರಾಜ್ಯದಲ್ಲಿ ಸ್ಥಾಪಿಸಿರುವ ಹಿಂಸಾಚಾರದ ಫ್ಯಾಸಿಸ್ಟ್ ತೆರನ ವಿಧಾನ. ಹಲವೆಡೆ ಸಿಪಿಐ(ಎಂ) ಕಾರ್ಯಕರ್ತರು ಮತ್ತು ಬೆಂಬಲಿಗರು ದಾಳಿಗಳನ್ನು ಎದುರಿಸಿ ನಿಂತರು, ತಮ್ಮ ಮತ ಹಾಕುವಲ್ಲಿ ಯಶಸ್ವಿಯಾದರು.

ಮಹಾ ಬಾಜಾಬಜಂತ್ರಿಯೊಂದಿಗೆ ಚುನಾವಣಾ ಕಣಕ್ಕೆ ಇಳಿದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಶ್ಚಿಮ ಬಂಗಾಲದಲ್ಲಿ ಕೊಡುತ್ತಿರುವ ಹಿಂಸಾಚಾರ ಮತ್ತು ಬೆದರಿಕೆಗಳಿಂದ ಚುನಾವಣೆಗಳನ್ನು ಹುಸಿಗೊಳಿಸುವ ತನ್ನದೇ ಕಹಿ ಔಷಧಿಯನ್ನು ಇಲ್ಲಿ ತಾನೂ ಸೇವಿಸಬೇಕಾಗಿ ಬಂದಿದೆ.

ಪುರಸಭಾ ಚುನಾವಣೆಗಳಲ್ಲಿ ಟಿಎಂಸಿ ಪ್ರಮುಖ ವಿರೋಧ ಪಕ್ಷವಾಗಿ ಹೊರಹೊಮ್ಮಿದೆ ಎಂಬ ಅದರ ದಾವೆಗೆ ಯಾವುದೇ ಆಧಾರವಿಲ್ಲ. ವಿಕೃತಗೊಂಡ ಫಲಿತಾಂಶಗಳು ಕೂಡ ಎಡರಂಗ 19.65% ರಷ್ಟು ಮತಗಳನ್ನು ಪಡೆದರೆ, ಟಿಎಂಸಿ 15.39% ಮತ ಪಡೆದಿದೆ. ಎಡರಂಗ 149 ವಾರ್ಡ್‌ಗಳಲ್ಲಿ ಎರಡನೇ ಸ್ಥಾನದಲ್ಲಿದ್ದರೆ, ಟಿಎಂಸಿ 56 ರಲ್ಲಿ ಎರಡನೆಯ ಸ್ಥಾನ ಪಡೆದಿದೆ.

ಬಿಪ್ಲಬ್ ದೇಬ್ ಸರ್ಕಾರದ ದುರಾಡಳಿತದಿಂದಾಗಿ ಜನಗಳಲ್ಲಿ ಪರಕೀಯ ಭಾವ ಹೆಚ್ಚುತ್ತಿರುವುದರಿಂದಾಗಿ, ಬಿಜೆಪಿ ತನ್ನ ಆಳ್ವಿಕೆಯನ್ನು ಉಳಿಸಿಕೊಳ್ಳಲು ಹೆಚ್ಚುಹೆಚ್ಚಾಗಿ ಹಿಂಸಾಚಾರ ಮತ್ತು ಚುನಾವಣಾ ಮೋಸವನ್ನೇ ಅವಲಂಬಿಸಬೇಕಾಗುತ್ತದೆ.

ಗಣತಂತ್ರ !



ರೈತ–ಕಾರ್ಮಿಕರ ಐಕ್ಯ ಹೋರಾಟದಿಂದ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ – ಕಾಂ.ಎಂ.ಎ.ಬೇಬಿ



ಸಮ್ಮೇಳನದ ಎರಡನೇ ದಿನ ಬೃಹತ್ ಬಹಿರಂಗ ಸಭೆಯನ್ನು ಯಲಹಂಕ ಉಪನಗರದಲ್ಲಿ ನಡೆಸಲಾಯಿತು. ಕೇರಳದ ಮಾಜಿ ಶಿಕ್ಷಣ ಸಚಿವರು ಹಾಗೂ ಸಿಪಿಐ(ಎಂ) ಪೊಲಿಟ್ ಬ್ಯೂರೊ ಸದಸ್ಯರಾದ ಕಾಂ.ಎಂ.ಎ.ಬೇಬಿಯವರು ಬಹಿರಂಗ ಸಭೆಯನ್ನು ಉದ್ಘಾಟಿಸಿದರು.

ಸಿಪಿಐ(ಎಂ) ಪಕ್ಷದ ರಾಜ್ಯ, ಜಿಲ್ಲಾ ಹಾಗೂ ಎಲ್ಲ ಶಾಖೆಗಳ ಸಮ್ಮೇಳನಗಳ ಸಂದರ್ಭದಲ್ಲಿ ಭಾರತದ ರೈತಾಪಿ ವರ್ಗ ಸ್ವತಂತ್ರ ಭಾರತದ ಚರಿತ್ರೆಯಲ್ಲಿ ಬಹುದೊಡ್ಡ ಹೋರಾಟದಲ್ಲಿ ವಿಜಯ ಸಾಧಿಸಿದೆ. ನರೇಂದ್ರ ಮೋದಿ ಸರ್ಕಾರ ಬಹುರಾಷ್ಟ್ರೀಯ ಮತ್ತು ದೇಶದ ದೊಡ್ಡ ಕಾರ್ಪೋರೇಟ್ ಕಂಪನಿಗಳ ಪರವಾಗಿ ತಂದ ಮೂರು ಕೃಷಿ ಮಸೂದೆಗಳನ್ನು ಹಿಂಪಡೆಯುವಂತೆ ಮಾಡಿದೆ. ರೈತರ ಜೊತೆಗೆ ದೇಶದ ಇಡೀ ದುಡಿಯುವ ವರ್ಗ ಕೈಜೋಡಿಸಿದೆ. ಇದರಿಂದ ನಾವು ಕಲಿಯಬೇಕಾದದ್ದು ತುಂಬಾ ಇದೆ. ಬದ್ಧತೆಯಿಂದ ಸದುದ್ದೇಶದ ಐಕ್ಯ ಚಳುವಳಿಯು ಎಂತಹ ಸ್ವಾರ್ಥಿ ಕಾರ್ಪೋರೇಟ್‌ಗಳ ನೀತಿಗಳನ್ನು ಹಿಮ್ಮೆಟ್ಟಿಸಬಹುದು ಎಂಬುದನ್ನು ದೇಶದ ರೈತಾಪಿ ವರ್ಗ ತೋರಿಸಿಕೊಟ್ಟಿದ್ದಾರೆ. ಸಿಪಿಐ(ಎಂ) ರಾಷ್ಟ್ರೀಯ ನೇತರರಾದ ಹನನ್ನ ಮೊಲ್ಲ, ವಿಜು ಕೃಷ್ಣನ್ ಮುಂತಾದವರು ರೈತ ಚಳುವಳಿ ಪ್ರಮುಖ ನೇತಾರರಾಗಿದ್ದು, ಇಂದಿನ ಗೆಲುವಿನಲ್ಲಿ ಕೆಂಬಾವುಟದ ಪಾತ್ರದ ಬಗ್ಗೆ ನಮಗೆ ಹೆಮ್ಮೆಯಿದೆ.

ನಾವು ಒಕ್ಕೂಟ ಸರ್ಕಾರದ ಕಾರ್ಮಿಕ ವಿರೋಧಿ ನಾಲ್ಕು ಸಂಹಿತೆಯ ವಾಪಸ್ಸಾತಿಗಾಗಿ, ವಿದ್ಯುಚ್ಛಕ್ತಿ ತಿದ್ದುಪಡಿ ಕಾಯ್ದೆ ಹಿಂಪಡೆಯಲು, ದೇಶದ ಸಂಪತ್ತು ಮಾರಾಟದ ನೀತಿ ಸೋಲಿಸಲು, ಕನಿಷ್ಟ ಬೆಂಬಲ ಬೆಲೆ ಖಾತ್ರಿ ಕಾನೂನಾತ್ಮಕ ಹಕ್ಕಿಗಾಗಿ, ಧರ್ಮದ ಆಧಾರದಲ್ಲಿ ದೇಶದ ಪೌರತ್ವ ನೀಡುವ ಕಾನೂನು ರದ್ದತಿಗಾಗಿ ದೇಶದ ದುಡಿಯುವ ವರ್ಗದ ನಿರಂತರವಾಗಿ ಹೋರಾಟ ಮುನ್ನಡೆಸಬೇಕಿದೆ.

ಒಕ್ಕೂಟ ಸರ್ಕಾರದ ನೀತಿ ಆಯೋಗದ ವರದಿಯೇ ಹೇಳುವಂತೆ, ಬಡತನ ನಿರ್ಮೂಲನೆಯಲ್ಲಿ ಕೇರಳದಲ್ಲಿನ ಸಿಪಿಐ(ಎಂ) ನೇತೃತ್ವದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರವು ಮುಂಚೂಣಿಯಲ್ಲಿದೆ. ಬಿಹಾರ್, ಉತ್ತರ ಪ್ರದೇಶದಲ್ಲಿ ಅದರ ಪ್ರಮಾಣ ಶೇ.40 ಇದೆ ಎಂಬುದು ಎಲ್.ಡಿ.ಎಫ್ ನ್ನು ಜನಪರ ಪರ್ಯಾಯ ನೀತಿಗಳಾಗಿ, ಸಮಾನ ಭೂಮಿ ಹಂಚಿಕೆ, ಗೌರವಯುತ ಬದುಕು, ಉಚಿತ ಶಿಕ್ಷಣ ನೀಡುವುದರ ಮೂಲಕ ಜನರು ಮತ್ತೊಮ್ಮೆ ಪುನರಾಯ್ಕೆ ಮಾಡಿದ್ದಾರೆ. ಮುಂಬರುವ ಫೆಬ್ರವರಿ 2022 ರಲ್ಲಿ ದೇಶದ ಜಂಟಿ ಕಾರ್ಮಿಕ ಸಂಘಟನೆಗಳು ಅಖಿಲ ಭಾರತ ಮುಷ್ಕರಕ್ಕೆ ಮುಂದಾಗಿದ್ದು, ಜನತೆ ಇದನ್ನು ಬೆಂಬಲಿಸಿ ಯಶಸ್ವಿಕೊಳಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳನ್ನು ರೈತ ಕಾರ್ಮಿಕರು, ಜನಸಾಮಾನ್ಯರ ಐಕ್ಯ ಹೋರಾಟದಿಂದ ಸೋಲಿಸಬೇಕೆಂದು ಕರೆ ನೀಡಿದರು.

40% ಭ್ರಷ್ಟಾಚಾರದ ಸರ್ಕಾರ :

ರಾಜ್ಯದಲ್ಲಿ ಗುತ್ತಿಗೆದಾರರ ಬಳಿ ಪ್ರತಿ ಗುತ್ತಿಗೆಯ ಸಂದರ್ಭದಲ್ಲೂ ಶೇ 40 ಕ್ಕೂ ಅಧಿಕ ಪ್ರಮಾಣದಲ್ಲಿ ಸಂಬಂದಿಸಿದ ಅಧಿಕಾರಿಗಳು, ಶಾಸಕರು ಮತ್ತು ಮಂತ್ರಿಗಳು ಲಂಚವನ್ನು ಪಡೆಯುತ್ತಿದ್ದು ಅದನ್ನು ತಡೆಯುವಂತೆ ಗುತ್ತಿಗೆದಾರರ ಸಂಘದವರು ಪ್ರಧಾನ ಮಂತ್ರಿಗಳಿಗೆ ಮನವಿ ಮಾಡಿದ್ದಾರೆ. ಗುತ್ತಿಗೆ ಕೆಲಸದಲ್ಲಿ ಗುತ್ತಿಗೆದಾರರಿಂದ ಇವರು ಲಂಚ ಪಡೆಯುತ್ತಿರುವುದು ಹೊಸದೇನಲ್ಲಾ!. ಆದರೇ ಗುತ್ತಿಗೆದಾರರೇ ದೂರು ನೀಡುವಷ್ಟು ಪರಿಸ್ಥಿತಿ ವಿಕೋಪಕ್ಕೆ ಹೋಗಿರುವುದನ್ನು ಇದು ಎತ್ತಿ ತೋರುತ್ತದೆ.ಈ ಕಾರಣ ಮತ್ತು ಗುತ್ತಿಗೆದಾರರ ಲಾಭಗಳೆಲ್ಲಾ ಸೇರಿದರೇ ಕಾಮಗಾರಿಯೆಂಬುದು ಶೇ 40 ಕ್ಕಿಂತಲೂ ಕಡಿಮೆ ಬಂಡವಾಳದಿಂದ ನಡೆಸಲ್ಪಡುತ್ತದೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದಲೇ ರಾಜ್ಯದ ರಸ್ತೆ, ಕಟ್ಟಡ ಮತ್ತಿತರೇ ನಿರ್ಮಾಣ ಕಾಮಗಾರಿಗಳು ಅತ್ಯಂತ ಕಳಪೆ ಗುಣಮಟ್ಟದಿಂದ ಕೂಡಿರುವುದು ಕಂಡು ಬರುತ್ತದೆ. ಸರಕಾರದ ಇಂತಹ ದೌರ್ಬಲ್ಯಗಳಿಂದಾಗಿಯೇ ಭಾರೀ ಲೂಟಿಗೊಳಪಡಿಸಲಾದ ಅಕ್ರಮ ಗಣಿಗಾರಿಕೆ ಮುಂತಾದ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ. ಸಾರ್ವಜನಿಕ ಸಂಪನ್ಮೂಲಗಳು ಲೂಟಿಗೊಳಪಡುತ್ತಿವೆ. ರಾಜ್ಯದಲ್ಲಿ ಈ ಕೂಡಲೇ ಸದರಿ ಭ್ರಷ್ಟಾಚಾರದ ವಿಚಾರಗಳನ್ನು ನ್ಯಾಯಾಂಗದ ಸುಪರ್ಧಿಯಲ್ಲಿ ಉನ್ನತ ನ್ಯಾಯಾಂಗದ ತನಿಖೆಗೆ ಒಳಪಡಿಸಬೇಕು ಹಾಗೂ ಈ ಎಲ್ಲದಕ್ಕೂ ತಮ್ಮದೇ ಸರಕಾರ ಮತ್ತು ಮಂತ್ರಿಮಂಡಲವೇ ನೇರ ಹೊಣೆಗಾರನಾಗಿರುವುದರಿಂದ ತಕ್ಷಣವೇ ರಾಜಿನಾಮೆ ನೀಡಿ ಜನರಿಂದ ಮರಳಿ ಆದೇಶ ಪಡೆಯಲು ಚುನಾವಣೆಗೆ ಮುಂದಾಗಬೇಕು ಎಂದು ಸಿಪಿಐಎಂ ರಾಜ್ಯ ಕಾರ್ಯದರ್ಶಿ ಯು.ಬಸವರಾಜ್ ರವರು ಸರ್ಕಾರವನ್ನು ಆಗ್ರಹಿಸಿದರು. ಸಿಪಿಐಎಂ ರಾಜ್ಯ ಮುಖಂಡರಾದ ಮೀನಾಕ್ಷಿ ಸುಂದರಂ, ಗೋಪಾಲಕೃಷ್ಣ ಹರಳ ಹಳ್ಳಿ, ಗೌರಮ್ಮ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹರವರು ವಹಿಸಿ ಮಾತನಾಡಿದರು. ಕಾರ್ಯಕ್ರಮವನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಹುಳ್ಳಿ ಉಮೇಶ್ ನಿರ್ವಹಿಸಿದರು. ಹನುಮಂತರಾವ್ ಹವಲ್ದಾರ್ ರವರು ಸ್ವಾಗತಿಸಿದರು. ವಲಯ ಮುಖಂಡರಾದ ಮಂಗಳಕುಮಾರಿ ವಂದಿಸಿದರು. ಸಿಪಿಐ(ಎಂ) ರಾಜ್ಯ ಮುಖಂಡರಾದ ಕೆ.ಎನ್. ಉಮೇಶ್, ಜಿಲ್ಲಾ ಮುಖಂಡರಾದ ಟಿ.ಲೀಲಾವತಿ, ಗೋಪಾಲಗೌಡ, ಎನ್.ನಾಗರಾಜ್, ಪಿ.ಮುನಿರಾಜ್, ಡಿ.ಚಂದ್ರಶೇಖರ್, ವಲಯ ಮುಖಂಡರಾದ ಗೋಪಿನಾಥ, ರೇಣುಕ, ಹರೀಶ್ ವೇದಿಕೆಯಲ್ಲಿದ್ದರು. ಬಹಿರಂಗ ಸಭೆಗೂ ಮುನ್ನ ಯಲಹಂಕದ ಎನ್.ಇ.ಎಸ್ ಬಸ್ ನಿಲ್ದಾಣದಿಂದ ಸಾವಿರಾರು ಜನರ ಆಕರ್ಷಕ ಮೆರವಣಿಗೆ ನಡೆಸಲಾಯಿತು.

ಬಂಡವಾಳಶಾಹಿ ವ್ಯವಸ್ಥೆ ಮನುಷ್ಯರ ಜೀವ ಮತ್ತು ಜೀವನವನ್ನು ಕಾಪಾಡುವುದಿಲ್ಲ–ಕೆ.ಎನ್. ಉಮೇಶ್

ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ 23ನೇ ಸಮ್ಮೇಳನವು ದಿನಾಂಕ 27–28, ನವೆಂಬರ್ 2021 ರಂದು ಯಲಹಂಕದ ಎಸ್ಕಾರ್ಟ್ಸ್ ಕಾರ್ಮಿಕರ ಭವನದಲ್ಲಿ ಯಶಸ್ವಿಯಾಗಿ ಜರುಗಿತು.

ಬಂಡವಾಳ ಶಾಹಿ ವ್ಯವಸ್ಥೆಯು ಸಾಂಕ್ರಾಮಿಕ ರೋಗಗಳಿಂದ ಜನರ ಜೀವ ಹಾಗೂ ಜೀವನ ಉಳಿಸಲು ವಿಫಲವಾಗಿದೆ ಎಂದು ಕೆ.ಎನ್ ಉಮೇಶ್ ರವರು ಬಂಡವಾಳಶಾಹಿ ವ್ಯವಸ್ಥೆಯ ವೈಫಲ್ಯವನ್ನು ಟೀಕಿಸಿದರು. ಯಲಹಂಕದಲ್ಲಿ ನಡೆಯುತ್ತಿರುವ ಸಿಪಿಐ(ಎಂ) ಬೆಂಗಳೂರು ಉತ್ತರ 23 ನೇ ಸಮ್ಮೇಳನದಲ್ಲಿ ಅವರು ಮಾತನಾಡುತ್ತಾ ಕೋವಿಡ್ ಸಾಂಕ್ರಾಮಿಕತೆ ಇಡೀ ಜಗತ್ತನ್ನು ಹಿಂಡಿ ಹಿಪ್ಪೆ ಮಾಡಿದೆ. ಕೋಟ್ಯಾಂತರ ಜನರು ತಮ್ಮ ಬದುಕನ್ನು ಕಳೆದುಕೊಂಡಿದ್ದಾರೆ. ಲಕ್ಷಾಂತರ ಜನ ಸೂಕ್ತ ವೈದ್ಯಕೀಯ ನೆರವು, ಚಿಕಿತ್ಸೆ, ಲಸಿಕೆ ಸಿಗದೇ ಸಾವಿಗೀಡಾದ್ದಾರೆ. ಕೋವಿಡ್ ಸಾಂಕ್ರಾಮಿಕತೆ ಹರಡದಂತೆ ತಡೆಯಲು, ಕೋವಿಡ್ ನಿಂದ ಜನರನ್ನು ರಕ್ಷಿಸಲು ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರತಿನಿಧಿಸುವ ಕೇಂದ್ರ ಹಾಗೂ ರಾಜ್ಯದ ಬಿಜೆಪಿ ಸರ್ಕಾರಗಳು ಮುಂದಾಗಲಿಲ್ಲ.

ಕೇರಳದ ಸಿಪಿಐ(ಎಂ) ನೇತೃತ್ವದ ಎಲ್.ಡಿ.ಎಫ್ ಸರ್ಕಾರ ಕೋವಿಡ್ ನಿಯಂತ್ರಣ ಹಾಗೂ ಜನರ ಜೀವ, ಜೀವನ ರಕ್ಷಿಸಿರುವ ರೀತಿಯನ್ನು ಇಡೀ ಜಗತ್ತು ಪ್ರಶಂಸಿದೆ. ಇಡೀ ದೇಶದಲ್ಲಿ ಕೋವಿಡ್ ಸಾಂಕ್ರಾಮಿಕತೆಯಿಂದ ಜನರ ಜೀವ ಹಾಗೂ ಜೀವನ ರಕ್ಷಿಸಲು ಕಮ್ಯುನಿಸ್ಟರು ಮುಂಚೂಣಿಯಲ್ಲಿ ನಿಂತಿದ್ದಾರೆ.

ದೃಢ ಹೋರಾಟದಿಂದ ಕೃಷಿ ಕಾಯ್ದೆಗಳ ವಾಪಸ್ಸು– ರೈತ ಕಾರ್ಮಿಕರ ಹೋರಾಟಕ್ಕೆ ಸಂದ ಜಯ



ದೆಹಲಿಯ ಗಡಿ ಭಾಗಗಳಲ್ಲಿ ರೈತರು ಕಳೆದ ಒಂದು ವರ್ಷದಿಂದ ನಡೆಸಿದ ದೀರ್ಘ, ದಿಟ್ಟ ಹೋರಾಟಕ್ಕೆ ಮಣಿದ ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವ ಘೋಷಣೆ ಮಾಡಿದೆ. ಇದು ದೇಶಾದ್ಯಂತ ರೈತ ಕಾರ್ಮಿಕರು ನಡೆಸಿದ ದಿಟ್ಟ ಹೋರಾಟಕ್ಕೆ ಸಿಕ್ಕ ಮೊದಲ ಜಯವಾಗಿದೆ. ದೇಶದ ಕಾರ್ಪೋರೇಟ್ ಕಂಪನಿಗಳ ಪರವಾಗಿ ರೈತರ ವಿರುದ್ಧ ತಂದಿದ್ದ ಮೂರು ಕರಾಳ ಕೃಷಿ ಕಾಯ್ದೆಗಳ ಈ ದೇಶದ ಕೃಷಿ ಬಿಕ್ಕಟ್ಟನ್ನ, ಆಹಾರದ ಅಭಾವವನ್ನು, ಬೆಲೆ ಏರಿಕೆಯನ್ನು ಹೆಚ್ಚಿಸಲು ಪೂರಕವಾಗಿದ್ದವು. ಇಂತಹ ಕಾಯ್ದೆಗಳನ್ನು ರದ್ದುಗೊಳಿಸಲು ನಡೆಸಿದ ಐತಿಹಾಸಿಕ ಹೋರಾಟವು ಈ ದೇಶಕ್ಕೆ ಮಾದರಿಯಾಗಿದೆ.


ಪ್ರತಾಪ್ ಸಿಂಹ್

ವೇದಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಮುಖಂಡರಾದ ಕಾಂ.ಮೀನಾಕ್ಷಿ ಸುಂದರಂ, ಕಾಂ. ಗೋಪಾಲಕೃಷ್ಣ ಹರಳಹಳ್ಳಿ, ಕಾಂ. ಗೌರಮ್ಮ, ವಲಯ ಸಮಿತಿ ಮುಖಂಡರಾದ ಮುಖಂಡರಾದ ಕಾಂ. ಹನುಮಂತರಾವ್ ಹವಲ್ದಾರ್, ಮಂಗಳ ಕುಮಾರಿ, ರೇಣುಕ, ಹರೀಶ್.ಕೆ ಉಪಸ್ಥಿತರಿದ್ದರು. ಪ್ರಾಸ್ತವಿಕವಾಗಿ ಜಿಲ್ಲಾ ಕಾರ್ಯದರ್ಶಿ ಕಾಂ. ಎನ್.ಪ್ರತಾಪ್ ಸಿಂಹರವರು ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಟಿ.ಲೀಲಾವತಿಯವರು ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಉತ್ತರ ವಲಯ ಕಾರ್ಯದರ್ಶಿ ಹುಳ್ಳಿ ಉಮೇಶ್ ಸ್ವಾಗತಿಸಿದರು. ಮುಖಂಡರಾದ ವಿಜಯಲಕ್ಷ್ಮಿ ನಿರ್ವಹಿಸಿದರು. ಉದ್ಘಾಟನೆಗೂ ಮುನ್ನ ಸಿಪಿಐ(ಎಂ) ಹಿರಿಯ ಮುಖಂಡರಾದ ಕಾಮ್ರೇಡ್ ಗೋಪಾಲಗೌಡ ಧ್ವಜಾರೋಹಣ ಮಾಡಿದರು.

ಪ್ರತಿನಿಧಿ ಅಧಿವೇಶನ

ಕಳೆದ ಸಮ್ಮೇಳನದಿಂದೀಚೆಗೆ ಅಗಲಿದ ಸಂಗಾತಿಗಳಿಗೆ ಸಮ್ಮೇಳನವು ಶ್ರದ್ಧಾಂಜಲಿಯನ್ನು ಸಲ್ಲಿಸಿತು. ಪ್ರತಿನಿಧಿ ಅಧಿವೇಶನದಲ್ಲಿ ವಿವಿಧ ಸಮಿತಿಗಳಿಗೆ ಅಂಗೀಕಾರ ಪಡೆಯಲಾಯಿತು. ಪಕ್ಷದ ಜಿಲ್ಲಾ ಕಾರ್ಯದರ್ಶಿಗಳಾದ ಕಾಂ.ಎನ್.ಪ್ರತಾಪ್ ಸಿಂಹ ಸಮ್ಮೇಳನದ ಮುಂದೆ ಕರಡು ವರದಿಯನ್ನು ಮಂಡಿಸಿದರು. ಪಕ್ಷದ ರಾಜ್ಯ ಕೇಂದ್ರದ ಸದಸ್ಯರಾದ ಕಾಂ.ಮೀನಾಕ್ಷಿ ಸುಂದರಂ ರವರು ವರದಿಯ ಮೇಲಿನ ಚರ್ಚೆಗೆ ಪೂರಕವಾಗಿ ಪಕ್ಷದ ಸಂಘಟನಾ ತತ್ವಗಳನ್ವಯ ಮಾರ್ಗದರ್ಶನ ನೀಡಿದರು. ಕರಡು ವರದಿಯ ಮೇಲೆ 26 ಜನ ಸಂಗಾತಿಗಳು ಸುಮಾರು 243 ನಿಮಿಷಗಳು (ನಾಲ್ಕು ಗಂಟೆ) ಚರ್ಚಿ ಸಿದರು. ಕರಡು ವರದಿಯ ಮೇಲಿನ ಚರ್ಚೆಗೆ ಕಾರ್ಯದರ್ಶಿಗಳು ಉತ್ತರ ನೀಡಿ, ಪ್ರತಿನಿಧಿಗಳ ಬಹುಮತದೊಂದಿಗೆ ವರದಿ ಅಂಗೀಕಾರವಾಯಿತು.

ನೂತನ ಜಿಲ್ಲಾ ಸಮಿತಿ:

03 ಖಾಯಂ ಆಹ್ವಾನಿತರು ಮತ್ತು 01 ವಿಶೇಷ ಆಹ್ವಾನಿತರನ್ನಾಗಿ ಒಟ್ಟು 17 ಜನರ ಜಿಲ್ಲಾ ಸಮಿತಿಯನ್ನು ಸಮ್ಮೇಳನವು ಆಯ್ಕೆ ಮಾಡಿತು. ನೂತನ ಜಿಲ್ಲಾ ಸಮಿತಿಯು ಕಾಂ.ಎನ್.ಪ್ರತಾಪ್ ಸಿಂಹ ರವರನ್ನು ಜಿಲ್ಲಾ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತು. ಅಂತೆಯೇ ಕಾಂ.ಗೌರಮ್ಮ, ಕಾಂ.ಟಿ.ಲೀಲಾವತಿ, ಕಾಂ.ಪಿ.ಮುನಿರಾಜ್ ಮತ್ತು ಕಾಂ.ಹುಳ್ಳಿ ಉಮೇಶ್ ರವರನ್ನು ಒಳಗೊಂಡ ಐದು ಜನರ ಕಾರ್ಯದರ್ಶಿ ಮಂಡಳಿಯನ್ನು, ಕಾಂ.ಎನ್.ನಾಗರಾಜ್, ಕಾಂ. ಹನುಮಂತ ರಾವ್ ಹವಾಲ್ದಾರ್, ಕಾಂ. ಹೆಚ್.ವಿ.ರಾಮಚಂದ್ರ ರೆಡ್ಡಿ, ಕಾಂ.ಕೆ.ಗೋಪಾಲ್, ಕಾಂ.ಡಿ. ಚಂದ್ರಶೇಖರ್, ಕಾಂ.ಲಲಿತಾ ಶೆಣೈ, ಕಾಂ.ಎನ್.ರಾಜಣ್ಣ, ಕಾಂ.ಎಂ.ನಂಜೇಗೌಡ ಜಿಲ್ಲಾ ಸಮಿತಿ ಸದಸ್ಯರು ಕೂಡ ಸರ್ವಾನುಮತದೊಂದಿಗೆ ರಚಿಸಲಾಯಿತು. ಕಾಂ.ಸಿ.ಎನ್.ಶ್ರೀನಿವಾಸ್, ಕಾಂ. ಕೆ.ಹರೀಶ್, ಕಾಂ.ಮಂಗಳಕುಮಾರಿ ಖಾಯಂ ಆಹ್ವಾನಿತರು, ಕಾಂ. ಹೆಚ್.ಎನ್. ಗೋಪಾಲ ಗೌಡರವರನ್ನು ವಿಶೇಷ ಆಹ್ವಾನಿತರಾಗಿ

ಪುಟ 10 ಕ್ಕೆ



ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನಕ್ಕೆ ಸಜ್ಜಾಗುತ್ತಿದೆ ಗಂಗಾವತಿ


ಭತ್ತದ ಕಣಜವೆಂದೇ ಹೆಸರುವಾಸಿಯಾಗಿರುವ ಪಟ್ಟಣ ಗಂಗಾವತಿ. ತುಂಗಭದ್ರಾ ನದಿಯ ದಡದಲ್ಲಿ, ಬೆಟ್ಟ ಗುಡ್ಡಗಳಿಂದ ಆವರಿಸಿಕೊಂಡು ಕಂಗೊಳಿಸುತ್ತಿರುವ ನಾಡು ಗಂಗಾವತಿ. ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಪ್ರೇಕ್ಷಣೀಯ ಸ್ಥಳ. ಬೇಸಾಯ ಇಲ್ಲಿಯ ಜನರ ಮುಖ್ಯ ಕಸಬು. ಭೂರಹಿತ ಬಡ ಕುಟುಂಬಗಳ ಸಂಖ್ಯೆ ಗಣನೀಯವಾಗಿದ್ದು ಹೊಟ್ಟೆಪಾಡಿಗಾಗಿ ಅವರು ಕೃಷಿ ಕೂಲಿಕಾರರಾಗಿ ಕೆಲಸ ಮಾಡುತ್ತಾರೆ. ಮಳೆ ಕೈಕೊಟ್ಟು ಬರಗಾಲ ಆವರಿಸಿದಾಗ ಇವರು ದೂರದ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಕೃಷಿಯಲ್ಲಿ ಯಂತ್ರಗಳ ಬಳಕೆ ಹೆಚ್ಚುತ್ತಿದ್ದು ಕೃಷಿ ರಂಗದಲ್ಲಿ ಕೆಲಸ ಮಾಡುತ್ತಿರುವವರಿಗೆ ಜೀವನ ನಿರ್ವಹಣೆ ಕಷ್ಟಕರವಾಗುತ್ತಿರುತ್ತದೆ.

ಗಂಗಾವತಿಯಲ್ಲಿ ಕೈಗಾರಿಕೆಗಳು ಬಹಳ ವಿರಳ. ಭತ್ತದ ಗಿರಣಿಗಳನ್ನು ಬಿಟ್ಟರೆ ಇಲ್ಲಿ ಬೇರೆ ಕೈಗಾರಿಕೆಗಳಿಲ್ಲ. ಎಪಿಎಂಸಿಗಳಲ್ಲಿ ಕೆಲಸವನ್ನು ಅವಲಂಭಿಸಿರುವ ಹಮಾಲಿ ಕಾರ್ಮಿಕರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಬಹಳಷ್ಟು ಯುವಜನರು ಹಮಾಲಿ ಕೆಲಸಮಾಡಿ ಜೀವನ ಸಾಗಿಸುತ್ತಾರೆ. ತಲೆಯ ಮೇಲೆ ತರಕಾರಿ, ಹಣ್ಣು ಹಂಪಲು ಹೊತ್ತು ಮಾರುವವರು, ಬೀದಿ ಬದಿಯ ವ್ಯಾಪಾರಸ್ಥರು, ಅಗಸರು, ಬೆಸ್ತರು, ಕಾರ್ಮಿಕರು, ಪುರಸಭಾ ನೌಕರರು ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಾ ಅತ್ಯಂತ ಕಡಿಮೆ ಆದಾಯ ಸಂಪಾದಿಸುವವರೂ ಇದ್ದಾರೆ. ಕಳೆದ ಕೆಲವು ವರ್ಷಗಳಿಂದ ಆರಂಭವಾಗಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಕೆಲಸಕ್ಕೆ ಹೋಗುತ್ತಿರುತ್ತಾರೆ.

ಇಲ್ಲಿ ಎಲ್ಲ ಜಾತಿ, ಮತಧರ್ಮಗಳಿಗೆ ಸೇರಿದ ಜನರಿದ್ದಾರೆ. ಇಲ್ಲಿನ ಅನೇಕ ಮಠಗಳು, ದೇವಸ್ಥಾನಗಳು, ಮಸೀದಿಗಳು ಹಾಗೂ ಚರ್ಚುಗಳು ಮತೀಯ ಸಾಮರಸ್ಯವನ್ನು ಸಾರುತ್ತಿರುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಇಲ್ಲಿ ಸಂಘ ಪರಿವಾರದ ಕೆಲವು ಪೂರ್ಣಕಾಲದ ಕಾರ್ಯಕರ್ತರು ಬಂದು ನೆಲೆಸಿದ್ದು ಸಮಾಜದಲ್ಲಿ ಧಾರ್ಮಿಕ ದ್ವೇಷವನ್ನು ಹರಡಲು ಪ್ರಯತ್ನಿಸುತ್ತಿದ್ದಾರೆ. ದಲಿತರ ಮೇಲೆ, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳು ಹೆಚ್ಚತೊಡಗಿವೆ. ಇಂತಹ ಸಂದರ್ಭಗಳಲ್ಲೆಲ್ಲ ಸಿಪಿಐ(ಎಂ) ಮಧ್ಯಪ್ರವೇಶ ಮಾಡಲು ಹಿಂಜರಿಯುವುದಿಲ್ಲ.

ಗಂಗಾವತಿ ಪಟ್ಟಣದಲ್ಲಿ ಮತ್ತು ಸುತ್ತಮುತ್ತ ಅನೇಕ ಐತಿಹಾಸಿಕ ಸ್ಥಳಗಳು ಕಂಡು ಬರುತ್ತವೆ. ಆನೆಗುಂದಿ, ಹಿರೇ ಬೆಣಕಲ್ ಮೋರೇರ ಗುಡ್ಡ, ಗಂಡುಗಲಿ ಕುಮಾರರಾಮ ಬೆಟ್ಟ, ಜೈನ ಬಸದಿಗಳು, ಕೊಪ್ಪಳದ ಗವಿಸಿದ್ದೇಶ್ವರ ಮಠ, ಕನಕಗಿರಿಯ ಕನಕಾಚಲಪತಿ ದೇವಸ್ಥಾನ, ಪುರದ ಕೋಟಿ ಲಿಂಗಗಳು ಮೊದಲಾದ ಅನೇಕ ಪ್ರವಾಸಿ ತಾಣಗಳು ಇಲ್ಲಿವೆ. ಗಂಗಾವತಿಯಿಂದ ಸುಮಾರು 12 ಕಿ.ಮೀ. ದೂರದಲ್ಲಿ ಇತಿಹಾಸ ಪ್ರಸಿದ್ಧ ಹಂಪಿ ಪ್ರತಿದಿನ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತದೆ. ಹಿರೇ ಬೆಣಕಲ್ ಮೋರೇರ ಬೆಟ್ಟ ಇನ್ನೇನು ಸ್ವಲ್ಪವೇ ದಿನಗಳಲ್ಲಿ ಯುನೆಸ್ಕೋ ಪಟ್ಟಿಯನ್ನು ಸೇರಲಿದೆ. ಇಲ್ಲಿ ಹಳೆಯ ಶಿಲಾಯುಗದ ಕುರುಹುಗಳು ಕಂಡುಬರುತ್ತವೆ.

ಬಹಳ ವಿಶಿಷ್ಟವಾದ ಈ ಪಟ್ಟಣವು ಶೀಘ್ರವಾಗಿ ನಗರ ಪ್ರದೇಶವಾಗಿ ಬೆಳೆಯುವ ಎಲ್ಲಾ ಲಕ್ಷಣಗಳು ಕಂಡು ಬರುತ್ತವೆ. ಇಲ್ಲಿಂದ ರಾಜ್ಯದ ಎಲ್ಲಾ ಕಡೆಗಳಿಗೂ ಬಸ್ ಸೌಕರ್ಯವಿದೆ. ಇತ್ತೀಚೆಗೆ ರೈಲು ಮಾಗವೂ ಅಭಿವೃದ್ಧಿ ಆಗಿದ್ದು ರೈಲು ಪ್ರಯಾಣ ಸಾಧ್ಯವಾಗಿದೆ. ವ್ಯಾಪಾರ ವಹಿವಾಟು ವೇಗವಾಗಿ ಬೆಳೆಯುತ್ತಿದೆ. ಇಲ್ಲಿ ರಾಜಕೀಯವಾಗಿ ಸಿಪಿಐ(ಎಂ) ದುಡಿಯುವ ಜನ ಸಮುದಾಯಗಳ ನಡುವೆ ತನ್ನ ಪ್ರಭಾವವನ್ನು ಗಮನಾರ್ಹವಾಗಿ ವಿಸ್ತರಿಸತೊಡಗಿದೆ. 3 ವರ್ಷಗಳಿಗೊಮ್ಮೆ ನಡೆಯುವ ಸಿಪಿಐ(ಎಂ) ರಾಜ್ಯ ಸಮ್ಮೇಳನವನ್ನು ಈ ಬಾರಿ ಗಂಗಾವತಿಯಲ್ಲಿ ನಡೆಸಲು ನಿರ್ಧರಿಸಿರುವುದು ಹೆಮ್ಮೆಯ ವಿಷಯವಾಗಿದೆ.



ಪಕ್ಷದ 23ನೇ ರಾಜ್ಯ ಸಮ್ಮೇಳನಕ್ಕಾಗಿ ಗಂಗಾವತಿ ಸಜ್ಜಾಗುತ್ತಿದೆ. ಜನವರಿ 2 ರಿಂದ 4 ರ ವರೆಗೆ ನಡೆಯುವ ಈ ಸಮ್ಮೇಳನ ಬೃಹತ್ ಮೆರವಣಿಗೆ ಹಾಗೂ ಬಹಿರಂಗ ಸಭೆಯೊಂದಿಗೆ ಆರಂಭವಾಗಲಿದೆ. ಬಹಿರಂಗ ಸಭೆಯಲ್ಲಿ 5000 ಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ. ಪ್ರತಿನಿಧಿಗಳ ಅಧಿವೇಶನ ಗಂಗಾವತಿಯ ಅಮರ ಜ್ಯೋತಿ ಕನ್‌ವೆನ್‌ಶನ್ ಹಾಲ್‌ನಲ್ಲಿ ನಡೆಯಲಿದ್ದು ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 500 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ಸೀತಾರಾಮ್ ಯೆಚುರಿ ಸಮ್ಮೇಳನವನ್ನು ಉದ್ಘಾಟಿಸಲಿದ್ದು ಪೊಲಿಟ್ ಬ್ಯೂರೊ ಸದಸ್ಯರಾದ ಕಾ. ಎಂ.ಎ. ಬೇಬಿ, ಕಾ. ಬಿ.ವಿ. ರಾಘವಲು ಮೊದಲಾದ ಮುಖಂಡರು ಭಾಗವಹಿಸಲಿರುವರು. ಸಮ್ಮೇಳನದ 3 ದಿನಗಳ ಖರ್ಚು ವೆಚ್ಚಗಳಿಗೆ ದೊಡ್ಡ ಮೊತ್ತದ ಹಣ ಬೇಕಾಗಿದ್ದು ಪಕ್ಷದ ಹಿತೈಷಿಗಳಿಂದ ಹಾಗೂ ದಾನಿಗಳಿಂದ ನಿಧಿ ಸಂಗ್ರಹ ಮಾಡಲಾಗುವುದು. ಕಾರ್ಮಿಕ, ರೈತ, ಕೂಲಿಕಾರ, ಮಹಿಳಾ, ವಿದ್ಯಾರ್ಥಿ ಯುವಜನ ಸದಸ್ಯರ ಪ್ರತಿಯೊಂದು ಕುಟುಂಬದಿಂದ ತಲಾ ಒಂದು ನೂರು ರೂ. ಸಂಗ್ರಹಿಸಲು ನಿರ್ಧರಿಸಲಾಗಿದ್ದು ಕಾರ್ಯಕರ್ತರು ಜಿಲ್ಲೆಯಾದ್ಯಂತ ಉತ್ಸಾಹದಿಂದ ಕಾರ್ಯೋನ್ಮುಖರಾಗಿದ್ದಾರೆ.



ಸಿಪಿಐ(ಎಂ) ಉಡುಪಿ ಜಿಲ್ಲಾ 7ನೇ ಸಮ್ಮೇಳನ

ಸಿಪಿಐ(ಎಂ) ಉಡುಪಿ ಜಿಲ್ಲಾ 7 ನೇ ಸಮ್ಮೇಳನವು 28,29 ನವಂಬರ್ 2021 ರಂದು ಉಡುಪಿಯ ಕಾ.ವಿಠಲ್ ಪೂಜಾರಿ ನಗರದಲ್ಲಿ, ಕಾ.ಜಿ. ಭಾಸ್ಕರ ಮಯ್ಯ ಸಭಾಂಗಣದ ಕಾ.ಬಿ. ಮಾಧವ ವೇದಿಕೆಯಲ್ಲಿ ಯಶಸ್ವಿಯಾಗಿ ಜರುಗಿತು. ಸಮ್ಮೇಳನದ ಆರಂಭದ ದಿನ ಉಡುಪಿ ನಗರದ ಬೋರ್ಡ್ ಹೈಸ್ಕೂಲ್ ವಠಾರದಿಂದ ಸಹಸ್ರಾರು ಸಂಖ್ಯೆಯ ರೈತ, ಕಾರ್ಮಿಕರು ವರ್ಣರಂಜಿತ ಬೃಹತ್ ಮೆರವಣಿಗೆ ಹೊರಟು ಬ್ರಹ್ಮಗಿರಿಯ ಲಯನ್ಸ್ ಭವನದ ಬಳಿ ಬಹಿರಂಗ ಸಭೆ ನಡೆಯಿತು. ಮಹಿಳೆಯರೊಡಗೂಡಿದ್ದ ಲಯಬದ್ಧ ಚಂಡೆವಾದನ ಮೆರವಣಿಗೆಗೆ ಹೆಚ್ಚಿನ ಮೆರುಗು ನೀಡಿತು. ನಗರದ ರಸ್ತೆಯ ಉದ್ದಗಲಕ್ಕೂ ನೆರೆದ ನಾಗರಿಕರನ್ನು ಆಕರ್ಷಿಸಿತು. ಸಿಪಿಐ(ಎಂ) ಪಕ್ಷದ ರಾಜ್ಯ ಕೇಂದ್ರ ಸದಸ್ಯ ಮಂಗಳೂರಿನ ವಸಂತ ಆಚಾರಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸ್ವಾತಂತ್ರ್ಯ ಹೋರಾಟದ ಆಶಯಗಳಿಗೆ ತಿಲಾಂಜಲಿ ಇಡುತ್ತಿರುವ ಕೇಂದ್ರ ಸರಕಾರ, ದೇಶದ ಪ್ರತಿಯೊಬ್ಬರ ಮೇಲೂ ಪರಿಣಾಮ ಬೀರುವ ಪೆಟ್ರೋಲ್, ಡೀಸೆಲ್ ಬೆಲೆ ಲೀಟರ್ ಗೆ ರೂಪಾಯಿ 100 ಗಡಿ ದಾಟಿದೆ, ಅಗತ್ಯ ವಸ್ತುಗಳ ಬೆಲೆ ಏರಿದ್ದು ಜನ ಸಾಮಾನ್ಯರು ತೊಂದರೆ ಅನುಭವಿಸುವಂತಾಗಿದೆ. ನರೇಂದ್ರ ಮೋದಿ ನೇತೃತ್ವದ ಒಕ್ಕೂಟ ಸರಕಾರವೇ ನೇರ ಕಾರಣ ಎಂದು ಅವರು ಆರೋಪಿಸಿದರು. ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಎ.ಎಸ್. ಆಚಾರ್ಯ, ಕಾರ್ಯದರ್ಶಿ ಶಶಿಧರ ಗೊಲ್ಲ, ಕೋಶಾಧಿಕಾರಿ ಕವಿರಾಜ್ ಎಸ್. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಮಹಾಬಲ ವಡೇರಹೊಬಳಿ, ಎಚ್. ನರಸಿಂಹ, ಸುರೇಶ್ ಕಲ್ಲಾಗರ್ ವೇದಿಕೆಯಲ್ಲಿದ್ದರು. ಕೆ. ಶಂಕರ್ ಅಧ್ಯಕ್ಷತೆ ವಹಿಸಿದ್ದರು, ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ವೆಂಕಟೇಶ್ ಕೋಣಿ ಕಾರ್ಯಕ್ರಮ ನಿರೂಪಿಸಿದರು. ಪ್ರಶಾಂತ್ ಭೀರ್ತಿ ತಂಡದವರು ಹೋರಾಟದ ಹಾಡು, ಕ್ರಾಂತಿ ಗೀತೆ ಹಾಡಿ ಸಭಿಕರನ್ನು ರಂಜಿಸಿದರು. ಪಕ್ಷದ ಹಿರಿಯ ಸಂಗಾತಿ ರಾಜು ಪೂಜಾರಿ ಪ್ರತಿನಿಧಿ ಅಧಿವೇಶನದ ಉದ್ಘಾಟನೆ ಸಂದರ್ಭದಲ್ಲಿ ಧ್ವಜಾರೋಹಣ ನೆರವೇರಿಸಿದರು. ಸಂಗಾತಿ ವಸಂತ್ ಆಚಾರಿ ಪ್ರತಿನಿಧಿ ಅಧಿವೇಶನ ಉದ್ಘಾಟಿಸಿದರು. ಹಿರಿಯ ಸಂಗಾತಿ ಪಿ. ವಿಶ್ವನಾಥ ರೈ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಕಲಾಪ ನಡೆಸಲು ಮಹಾಬಲ ವಡೇರಹೋಬಳಿ, ಶಶಿಧರ ಗೊಲ್ಲ, ನಾಗರತ್ನ ನಾಡ ರವರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ಆಯ್ಕೆ ಮಾಡಲಾಯಿತು.

ಕಳೆದ ನಾಲ್ಕು ವರ್ಷಗಳ ಚಟುವಟಿಕೆ ವರದಿಯನ್ನು ಪಕ್ಷದ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಂಡಿಸಿದರು. ವರದಿಯ ಮೇಲೆ ಮೂರು ಸಮಿತಿಗಳ ಪ್ರತಿನಿಧಿ ಸಂಗಾತಿಗಳು ಪ್ರತ್ಯೇಕವಾಗಿ ಗುಂಪು ಚರ್ಚೆಯಲ್ಲಿ ಭಾಗವಹಿಸಿದ್ದರು. 3 ಗುಂಪುಗಳಿಂದ 10 ಸಂಗಾತಿಗಳು 90 ನಿಮಿಷಗಳ ಕಾಲ ಮಾತನಾಡಿದ ಬಳಿಕ ಜಿಲ್ಲಾ ಸಮಿತಿ ಸೇರಿ ಚರ್ಚೆಗೆ ಉತ್ತರ ನೀಡಿದರು. ನಂತರ ವರದಿಯನ್ನು ಅಂಗೀಕರಿಸಲಾಯಿತು. ಈ ಸಂದರ್ಭದಲ್ಲಿ ಜೀವನ ಪರ್ಯಂತ ಪಕ್ಷಕ್ಕಾಗಿ ದುಡಿದ ಹಿರಿಯ ಮುಖಂಡರಾದ ಯು. ದಾಸ ಭಂಡಾರಿ, ಕೆ.ಶಂಕರ್, ಮಹಾಬಲ ವಡೇರಹೋಬಳಿ ಹೋಬಳಿ ಹಾಗೂ ರಾಜು ಪೂಜಾರಿಯವರನ್ನು ಸಮ್ಮೇಳನದಲ್ಲಿ ಆತ್ಮೀಯವಾಗಿ ಸನ್ಮಾನಿಸಿ, ಗೌರವಿಸಲಾಯಿತು.


ಬಾಲಕೃಷ್ಣ ಶೆಟ್ಟಿ

ದಲಿತರ ಮೇಲಿನ ಪೋಲೀಸ್ ದೌರ್ಜನ್ಯವನ್ನು ಬಿಂಬಿಸುವ, ಅದರ ವಿರುದ್ಧ ಹೋರಾಡುವ "ಜೈ ಭೀಮ್" ಚಲನಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಸಮ್ಮೇಳನದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ವಿರುದ್ಧ, ರೈತರ ಹೋರಾಟಕ್ಕೆ ಬೆಂಬಲ, ಕಾರ್ಮಿಕರ ಕಾನೂನು ತಿದ್ದುಪಡಿ ವಿರೋಧಿಸಿ, ಜಿಲ್ಲೆಗೆ ಸರಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ, ವರಾಹಿ ನೀರಾವರಿ ಯೋಜನೆ ತ್ವರಿತವಾಗಿ ಸಂಪೂರ್ಣಗೊಳಿಸಲು, ದಿನಬಳಕೆ ಆಹಾರ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ, ಮನೆ, ನಿವೇಶನ ರಹಿತರಿಗೆ ನಿವೇಶನ ಸ್ಥಳ, ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗೆ, ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆ ಪುನರಾರಂಭಕ್ಕೆ, ಮೀನುಗಾರರ ಮತ್ತು ಮೀನು ಕಾರ್ಮಿಕರ ಸಮಸ್ಯೆ ಪರಿಹರಿಸಲು, ಸರಕಾರಿ ಆಸ್ಪತ್ರೆಗಳನ್ನು ಉನ್ನತೀಕರಣಕ್ಕೆ ಆಗ್ರಹಿಸಿ ಠರಾವುಗಳನ್ನು ಅಂಗೀಕರಿಸಲಾಯಿತು. ಮುಂದಿನ ಅವಧಿಗೆ ನೂತನ ಜಿಲ್ಲಾ ಸಮಿತಿ ಆಯ್ಕೆ ಮಾಡಿತು.

ಜಿಲ್ಲಾ ಸಮಿತಿ ಆಯ್ಕೆ

ರೈತ, ಕೃಷಿ ಕೂಲಿ ಕಾರ್ಮಿಕರ ಹಾಗೂ



ದುಡಿಯುವ ಜನರ ಹಕ್ಕುಗಳಿಗಾಗಿ ಜನ ಚಳುವಳಿಯ ಹೋರಾಟ ಬಲಗೊಳಿಸಿ, ಸಿಪಿಐ(ಎಂ) ಪಕ್ಷ ಸಂಘಟನೆ ವಿಸ್ತರಣೆಗೆ ನಾಯಕತ್ವ ಕೊಡಲು ಉಡುಪಿ ಜಿಲ್ಲಾ ಸಮಿತಿಗೆ ಸರ್ವಾನುಮತದಿಂದ ಈ ಕೆಳಗಿನ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಬಾಲಕೃಷ್ಣ ಶೆಟ್ಟಿ (ಕಾರ್ಯದರ್ಶಿ) ಎಚ್.ನರಸಿಂಹ, ಸುರೇಶ ಕಲ್ಲಾಗರ್, ಕೋಣಿ ವೆಂಕಟೇಶ್ ನಾಯಕ್, ನಾಗರತ್ನ ನಾಡ (ಮಹಿಳೆ)(ಕಾರ್ಯದರ್ಶಿ ಮಂಡಳಿ ಸದಸ್ಯರು) ಶಶಿಧರ ಗೊಲ್ಲ, ರಾಜೀವಪಡುಕೋಣೆ, ಬಲ್ಕೀಸ್ (ಮಹಿಳೆ) ಜೆ.ಡಿ. ಪಂಜು, ಉಮೇಶ್ ಕುಂದರ್, ಕವಿರಾಜ್‌ಎಸ್., ರಾಮ ಕಾರ್ಕಡ, ರಮೇಶ್ ಪೂಜಾರಿ ಗುಲ್ವಾಡಿ, ರವಿ ವಿ.ಎಂ., ರಾಜು ದೇವಾಡಿಗ(ಸದಸ್ಯರು) ಮಹಿಳೆಯರಿಗಾಗಿ 2 ಸ್ಥಾನ ಕಾದಿರಿಸಲಾಗಿದೆ.

ರಾಜ್ಯ ಸಮಿತಿ ನಿರ್ಧಾರದಂತೆ, 70 ವರ್ಷ ದಾಟಿದ ಮೂವರು ಹಿರಿಯ ಸಂಗಾತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು ಹಾಗೂ ಜಿಲ್ಲಾ ಸಮಿತಿಗೆ ಖಾಯಂ ಆಹ್ವಾನಿತರನ್ನಾಗಿ ಆಯ್ಕೆ ಮಾಡಲಾಯಿತು.

ಕರ್ನಾಟಕದಲ್ಲಿ ಬಡತನ, ಹಸಿವು....ಅಪೌಷ್ಟಿಕತೆಯ ಅಟ್ಟಹಾಸ......

ಪುಟ 6 ರಿಂದ

ಎದುರಿಸುತ್ತಿರುವವರ ಪ್ರಮಾಣ ಶೇ. 70 ಕ್ಕಿಂತ ಅಧಿಕವಾಗಿದೆ. ಆರೋಗ್ಯಶಾಸ್ತ್ರ ತೋರಿಸುತ್ತಿರುವಂತೆ ಮಕ್ಕಳ ಮೊದಲ ಐದು ವರ್ಷ ವಯಸ್ಸಿನಲ್ಲಿ ಅವರ ಮೆದುಳು ಶೇ. 90 ರಷ್ಟು ಬೆಳವಣಿಗೆಯಾಗುತ್ತದೆ. ಅಂದಮೇಲೆ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿನ ಮಕ್ಕಳ ಬೌದ್ಧಿಕ ಬೆಳವಣಿಗೆಯು ಯಾವ ಪ್ರಮಾಣದಲ್ಲಿ ಕುಂಠಿತಗೊಳ್ಳುತ್ತದೆ ಎಂಬುದು ಮೇಲಿನ ವರದಿಗಳಿಂದ ಸ್ಪಷ್ಟವಾಗುತ್ತದೆ.

ಅಪೌಷ್ಟಿಕತೆಯು ಅಂತರ ತಲೆಮಾರು ಆಯಾಮ

ತಾಯಂದಿರಲ್ಲಿನ ಅಪೌಷ್ಟಿಕತೆಗೆ ಅಂತರ ತಲೆಮಾರು ಆಯಾಮವೂ ಇದೆ. ಅಪೌಷ್ಟಿಕತೆ ಎದುರಿಸುತ್ತಿರುವ ಮಹಿಳೆಯರು ಅಪೌಷ್ಟಿಕ ತಾಯಂದಿರಾಗುತ್ತಾರೆ. ಈ ತಾಯಂದಿರುವ ಜನ್ಮ ನೀಡುವ ಮಕ್ಕಳು ಸಹ ಅಪೌಷ್ಟಿಕತೆ ಎದುರಿಸುತ್ತಿರುತ್ತಾರೆ. ಇದರಿಂದ ಹುಟ್ಟುವ ಮಕ್ಕಳು ವಯಸ್ಸಿಗೆ ಅನುಗುಣವಾದ ಎತ್ತರವಿಲ್ಲದ ಸಮಸ್ಯೆಗೆ (ಸ್ಟಂಟಿಂಗ್) ಮತ್ತು ಅಪೌಷ್ಟಿಕತೆ ಎದುರಿಸುತ್ತಿರುವ ತಾಯಂದಿರಿಗೆ ಹುಟ್ಟುವ ಮಕ್ಕಳು ಎತ್ತರಕ್ಕೆ ಅನುಗುಣವಾದ ತೂಕವಿಲ್ಲದ ಸಮಸ್ಯೆಗೆ ಬಲಿಯಾಗುತ್ತಾರೆ. ಅಪೌಷ್ಟಿಕತೆ ಎನ್ನುವುದು ಒಂದು ರೀತಿಯಲ್ಲಿ ವಿಷಚಕ್ರವಿದ್ದಂತೆ. ಈ ಎಲ್ಲ ಕಾರಣಗಳಿಂದ ಅಪೌಷ್ಟಿಕತೆಗೆ ಸಾಮಾಜಿಕ-ಆರ್ಥಿಕ ಆಯಾಮವೂ



ಇದೆ. ಮಕ್ಕಳು ಮತ್ತು ಮಹಿಳೆಯರ ಆರೋಗ್ಯದ ಮೇಲೆ ಸರ್ಕಾರವು ಬಂಡವಾಳ ಹೂಡದಿದ್ದರೆ ಇದರಿಂದ ಅಭಿವೃದ್ಧಿಯು ಕುಂಠಿತಗೊಳ್ಳುತ್ತದೆ. ಅಭಿವೃದ್ಧಿಯ ದೃಷ್ಟಿಯಿಂದ ಅಪೌಷ್ಟಿಕತೆಯ ಎರಡು ಪರಿಣಾಮಗಳನ್ನು ನಾವು ಗಮನಿಸಬೇಕಾಗುತ್ತದೆ. (1). ದುಡಿಯುವ ಮಹಿಳೆಯರು ಮತ್ತು ಪುರುಷರ ಆರ್ಥಿಕ ಕಾರ್ಯಕ್ಷಮತೆಯು ಕುಸಿಯುತ್ತದೆ (2). ಇದರಿಂದ ಆರ್ಥಿಕತೆಯಲ್ಲಿ ಆರೋಗ್ಯ ವೆಚ್ಚವು ಅಧಿಕವಾಗುತ್ತದೆ.

ಒಟ್ಟಾರೆ, ಈ ಎಲ್ಲ ವರದಿಗಳು ಮತ್ತು ಅವುಗಳಲ್ಲಿನ ವಿವರಗಳು ಸ್ಪಷ್ಟವಾಗಿ ಕರ್ನಾಟಕವು ಆರೋಗ್ಯಕ್ಕೆ ಸಂಬಂಧಿಸಿದಂತೆ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತದೆ ಎಂಬುದನ್ನು ತೋರಿಸುತ್ತಿವೆ. ಈ ಸಮಸ್ಯೆಯಲ್ಲಿ ತೀವ್ರ ಪ್ರಾದೇಶಿಕ ಅಸಮಾನತೆಗಳಿವೆ. ಇಲ್ಲಿ ಗಮನಿಸಬೇಕಾದುದು ಎನ್.ಎಫ್.ಎಚ್.ಎಸ್-5 ಮತ್ತು ನೀತಿ ಆಯೋಗದ ಬಹುಮುಖಿ ಬಡತನ ಸೂಚ್ಯಂಕದ ಸಮೀಕ್ಷೆಗಳು ಕೊರೊನಾ ಮಹಾರೋಗ ಆರಂಭವಾಗುವುದಕ್ಕೆ ಮುಂಚಿನ ಕಾಲದ್ದಾಗಿವೆ. ಅಂದಮೇಲೆ ಕೊವಿಡ್‌ನಿಂದಾಗಿ ರಾಜ್ಯದಲ್ಲಿನ ಅಪೌಷ್ಟಿಕತೆ ಸಮಸ್ಯೆಯು ಮತ್ತಷ್ಟು ಉಲ್ಬಣಗೊಂಡಿರುವ ಸಾಧ್ಯತೆಯಿದೆ. ಆದ್ದರಿಂದ ಸರ್ಕಾರವು ಬಂಡವಾಳ ಹೂಡಿಕೆ, ಮೂಲಸೌಕರ್ಯಗಳಾದ ಎರಡು-ಮೂರು ಲೇನ್ ರಸ್ತೆಗಳು, ವಿದೇಶಿ ಬಂಡವಾಳ ಸಮಾವೇಶ ಮುಂತಾದವುಗಳಿಗೆ ನೀಡಿದಷ್ಟೆ ಗಮನವನ್ನು ಆರೋಗ್ಯ ಕ್ಷೇತ್ರಕ್ಕೆ, ಅದರಲ್ಲೂ ಮಕ್ಕಳು ಮತ್ತು ಮಹಿಳೆಯರ ಸಂತಾನೋತ್ಪತ್ತಿ ಆರೋಗ್ಯಕ್ಕೆ ನೀಡುವುದು ಅಗತ್ಯ. ಈ ವಿಷಯದಲ್ಲಿನ ಪ್ರಾದೇಶಿಕ ಅಸಮಾನತೆಯನ್ನು ಸರ್ಕಾರವು ನಿರ್ಲಕ್ಷಿಸುತ್ತಿದೆ. ಇದು ಸಲ್ಲ. ಕೊನೆಯದಾಗಿ, ಈ ಪ್ರಬಂಧದಲ್ಲಿ ಬಳಸಿರುವ ಅಂಕಿಸಂಖ್ಯೆಗಳೆಲ್ಲವೂ ಸರ್ಕಾರವೇ ಪ್ರಕಟಿಸಿರುವ ವರದಿಗಳಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರ ಬಗ್ಗೆ ಅನುಮಾನದ ಅಗತ್ಯವಿಲ್ಲ.

ಬಹುಮುಖಿ ಬಡತನ ಸೂಚ್ಯಂಕವನ್ನು ಹೇಗೆ ಅಳೆಯಲಾಗುತ್ತದೆ?

ಒಂದು ಕುಟುಂಬದ ಕೊರತೆ ಇರುವ ಎಲ್ಲ ಸೂಚಕಗಳ ಸೂಚ್ಯಂಕ ಪಾಲನ್ನು ಕೂಡಿಸಿದಾಗ ಅದು 0.33 (ಅಥವಾ 33%)ಕ್ಕಿಂತ ಹೆಚ್ಚು ಬಂದರೆ ಅದನ್ನು ಬಡ ಕುಟುಂಬ ಮತ್ತು ಆ ಕುಟುಂಬದ ಎಲ್ಲರನ್ನು ಬಡವರು ಎಂದು ಪರಿಗಣಿಸಲಾಗುತ್ತದೆ. ಉದಾಹರಣೆಗೆ ಗರ್ಭಿಣಿಯ ಆರೈಕೆ (8.335%), ಶಾಲಾ ಹಾಜರಾತಿ (16.67%), ಅಡುಗೆ ಇಂಧನ (4.76), ಶೌಚಾಲಯ (4.76%), ಕುಡಿಯುವ ನೀರು (4.76%) – ಈ ಸೂಚಕಗಳಲ್ಲಿ ಒಂದು ಕುಟುಂಬಕ್ಕೆ ಕೊರತೆ ಇದ್ದರೆ, ಅವುಗಳನ್ನು ಕೂಡಿಸಿದಾಗ ಬರುವ ಸೂಚ್ಯಂಕ 0.39 (39.21%) ಆಗಿದ್ದು, ಅದು 0.33(33.33%) ಕ್ಕಿಂತ ಹೆಚ್ಚಿರುವುದರಿಂದ ಆ ಕುಟುಂಬವನ್ನು ಬಡ ಕುಟುಂಬವೆಂದೂ, ಆ ಕುಟುಂಬದಲ್ಲಿ ಇರುವ ಎಲ್ಲರನ್ನು (ಉದಾಹರಣೆಗೆ 5 ಸದಸ್ಯರಿದ್ದರೆ) ಐವರನ್ನೂ ಬಡವರು ಎಂದು ಪರಿಗಣಿಸಲಾಗುತ್ತದೆ. 0.39 ನ್ನು **ಬಡತನದ ತೀವ್ರತೆ** ಎಂದೂ ಪರಿಗಣಿಸಲಾಗುತ್ತದೆ.

ಒಂದು ರಾಜ್ಯ/ಜಿಲ್ಲೆಯ ಜನಸಂಖ್ಯೆಯಲ್ಲಿ ಹೀಗೆ ಲೆಕ್ಕ ಹಾಕಲಾದ ಎಲ್ಲ ಬಡವರ ಪ್ರಮಾಣ (ಅಂದರೆ ಬಡವರು/ಒಟ್ಟು ಜನಸಂಖ್ಯೆ) ವನ್ನು **ಬಡತನದ ಪ್ರಮಾಣ** ಎಂದು ಕರೆಯಲಾಗುತ್ತದೆ. ಬಡವರೆಂದು ಪರಿಗಣಿಸಲಾದ ಎಲ್ಲ ಬಡವರ ತೀವ್ರತೆಯ ಸರಾಸರಿಯನ್ನು ಆ ರಾಜ್ಯ/ಜಿಲ್ಲೆಯ **ಬಡತನದ ತೀವ್ರತೆ** ಎಂದು ಪರಿಗಣಿಸಲಾಗುತ್ತದೆ. **ಬಡವರ ಪ್ರಮಾಣ ಮತ್ತು ಬಡತನದ ತೀವ್ರತೆಯನ್ನು ಗುಣಿಸಿದರೆ ಬರುವ ಸಂಖ್ಯೆಯನ್ನು ಬಡತನದ ಸೂಚ್ಯಂಕ ಎಂದು ಕರೆಯಲಾಗುತ್ತದೆ.** 2015-16ರ ಎನ್.ಎಫ್.ಎಚ್.ಎಸ್-4 (ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ) ರ ಅಂಕಿಸಂಖ್ಯೆಗಳನ್ನು ಬಳಸಿಕೊಂಡು, ನೀತಿ ಆಯೋಗದ ವರದಿಯಲ್ಲಿ ಬಡತನದ ಪ್ರಮಾಣ, ತೀವ್ರತೆ ಮತ್ತು ಸೂಚ್ಯಂಕಗಳನ್ನು ಲೆಕ್ಕ ಹಾಕಲಾಗಿದೆ.

ಬಡತನದ ಮುಖ	ಸೂಚ್ಯಂಕ ದಲ್ಲಿ ಪಾಲು	ಬಡತನದ ಮುಖದ ಸೂಚಕ	ಸೂಚ್ಯಂಕದಲ್ಲಿ ಪಾಲು	ಬಡತನ ಸೂಚಿಸುವ ಕೊರತೆ (ಅಥವಾ ದುಸ್ಥಿತಿ)
ಆರೋಗ್ಯ	1/3	ಪೌಷ್ಟಿಕತೆ	1/6 (16.67%)	ಕುಟುಂಬದ ಯಾವುದೇ 0-59 ತಿಂಗಳವರೆಗಿನ ಮಗು, 15-49 ವರ್ಷದೊಳಗಿನ ಮಹಿಳೆ, 15-54 ವರ್ಷದೊಳಗಿನ ಪುರುಷ ಅಪೌಷ್ಟಿಕವಾಗಿದ್ದರೆ
		ಮಕ್ಕಳ ಮರಣ	1/12 (8.335%)	ಸಮೀಕ್ಷೆಯ ಮೊದಲಿನ ಕುಟುಂಬದ 5 ವರ್ಷದಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗು/ಹದಿಹರೆಯದ ಹುಡುಗ/ಹುಡುಗಿ ನಿಧನ ಹೊಂದಿದ್ದರೆ
		ಗರ್ಭಿಣಿಯ ಆರೈಕೆ	1/12 (8.335%)	ಸಮೀಕ್ಷೆಯ ಮೊದಲಿನ 5 ವರ್ಷದಲ್ಲಿ ಕುಟುಂಬದ ಯಾವುದೇ ಮಹಿಳೆಯ ಇತ್ತೀಚಿನ ಗರ್ಭಧಾರಣೆಯಲ್ಲಿ ಕನಿಷ್ಟ 4 ಪ್ರಸವ-ಪೂರ್ವ ಗರ್ಭಿಣಿ ಆರೈಕೆಯ ಭೇಟಿ ದೊರೆಯದಿದ್ದರೆ ಅಥವಾ ಇತ್ತೀಚಿನ ಮಗುವಿನ ಜನನದ ಸಮಯದಲ್ಲಿ ತರಬೇತಿ ಪಡೆದ ವೈದ್ಯಕೀಯ ಸಿಬ್ಬಂದಿಯ ನೆರವು ಸಿಕ್ಕಿರದಿದ್ದರೆ
ಶಿಕ್ಷಣ	1/3	ಶಾಲಾ ವರ್ಷಗಳು	1/6 (16.67%)	ಕುಟುಂಬದ 10 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಒಬ್ಬ ಸದಸ್ಯನೂ 6 ವರ್ಷಗಳ ಶಾಲಾಶಿಕ್ಷಣ ಪಡೆದಿರದಿದ್ದರೆ
		ಶಾಲಾ ಹಾಜರಾತಿ	1/6 (16.67%)	ಕುಟುಂಬದ 8ನೆಯ ತರಗತಿಯಲ್ಲಿ ಓದುವ ವಯಸ್ಸಿನ ಒಳಗಿನ ಯಾವುದೇ ಮಗು ಶಾಲೆಗೆ ಹೋಗುತ್ತಿಲ್ಲವಾದರೆ
ಜೀವನಮಟ್ಟ	1/3	ಅಡುಗೆ ಇಂಧನ	1/21 (4.76%))	ಒಣಗಿಸಿದ ಸಗಣಿ, ಪೊದೆ, ಕೃಷಿ ಬೆಳೆಗಳುವ, ಮರ, ಕಲ್ಲಿದ್ದಲು ಅಥವಾ ಇದ್ದಲನ್ನು ಅಡುಗೆಗೆ ಇಂಧನವಾಗಿ ಉಪಯೋಗಿಸಿದರೆ
		ಶೌಚಾಲಯ	1/21 (4.76%))	ಕುಟುಂಬದ ಬಳಿ ಶೌಚಾಲಯವಿಲ್ಲ ಅಥವಾ ಅದು ಇತರ ಕುಟುಂಬಗಳೊಂದಿಗೆ ಶೌಚಾಲಯವನ್ನು ಹಂಚಿಕೊಂಡಿದೆ
		ಕುಡಿಯುವ ನೀರು	1/21 (4.76%))	ಕುಟುಂಬಕ್ಕೆ ಸುಧಾರಿತ ಕುಡಿಯುವ ನೀರಿನ ಪೂರೈಕೆಯಿಲ್ಲ ಅಥವಾ ಶುದ್ಧ ಕುಡಿಯುವ ನೀರು ತರಲು ಕನಿಷ್ಠ 30 ನಿಮಿಷದ ಒಟ್ಟು ದಾರಿಯಿದೆ.
		ವಿದ್ಯುತ್	1/21 (4.76%))	ಕುಟುಂಬಕ್ಕೆ ವಿದ್ಯುತ್ ಪೂರೈಕೆಯಿಲ್ಲ
		ಮನೆ	1/21 (4.76%))	ಕುಟುಂಬಕ್ಕೆ ಬೇಕಾದಷ್ಟು ಗಾತ್ರದ ಮನೆಯಿಲ್ಲ, ಮನೆಯನ್ನು ಕಚ್ಚಾ ಸಾಮಗ್ರಿಗಳಿಂದ ಮಾಡಲಾಗಿದೆ.
		ಆಸ್ತಿ	1/21 (4.76%))	ರೇಡಿಯೊ, ಟಿವಿ, ಫೋನ್, ಪ್ರಾಣಿ ಎಳೆಯುವ ಗಾಡಿ, ಸೈಕಲ್, ಮೋಟಾರ್ ಬೈಕ್, ಫ್ರಿಜ್, ಕಾರು ಟ್ರಕ್ – ಇವುಗಳಲ್ಲಿ ಒಂದಕ್ಕಿಂತ ಹೆಚ್ಚು ಆಸ್ತಿಯನ್ನು ಹೊಂದಿಲ್ಲ
		ಬ್ಯಾಂಕ್ ಅಕೌಂಟು	1/21 (4.76%))	ಕುಟುಂಬದ ಯಾವುದೇ ಸದಸ್ಯ ಬ್ಯಾಂಕ್ ಅಥವಾ ಪೋಸ್ಟಾಫೀಸು ಅಕೌಂಟು ಹೊಂದಿಲ್ಲ.
			100%	

ಬಂಡವಾಳಶಾಹಿ ವ್ಯವಸ್ಥೆ ಮನುಷ್ಯರ......

ಪುಟ 8 ರಿಂದ

ಆಯ್ಕೆಮಾಡಲಾಯಿತು.

ಕಮ್ಯುನಿಸ್ಟರಿಲ್ಲದ ದೇಶಕ್ಕೆ ಭವಿಷ್ಯವಿದೆಯೇ....?

ಸಿಪಿಐ(ಎಂ) ರಾಜ್ಯ ಮುಖಂಡರಾದ ಕಾಮ್ರೇಡ್ ಮೀನಾಕ್ಷಿ ಸುಂದರಂ ರವರು ಸಮ್ಮೇಳನದ ಸಮಾರೋಪ ಭಾಷಣ ಮಾಡುತ್ತಾ ದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಕಮ್ಯುನಿಸ್ಟರ ಮೇಲೆ ತೀವ್ರತರ ಸೈದ್ಧಾಂತಿಕ ಹಾಗೂ ರಾಜಕೀಯ ಧಾಳಿ ಹೆಚ್ಚಾಗಿದೆ. ಬಂಡವಾಳಶಾಹಿ ಮಾಧ್ಯಮವೂ ಸೇರಿದಂತೆ ನಮ್ಮ ರಾಜಕೀಯ ವಿರೋಧಿಗಳು "ಕಮ್ಯುನಿಸ್ಟರಿಗೆ ಈ ದೇಶದಲ್ಲಿ ಭವಿಷ್ಯವಿಲ್ಲ, ಇಡೀ ದೇಶದಲ್ಲಿ ಕಮ್ಯುನಿಸ್ಟರ ಕಾಲ ಮುಗಿಯಿತು. . . ಹೀಗೆ ಹಲವು ರೀತಿಯ ಚರ್ಚೆಗಳನ್ನು ಹರಿಯ ಬಿಟ್ಟಿದ್ದಾರೆ. ಆದರೆ ಅಂಥವರಿಗೆ ನಮ್ಮ ನೇರ ಪ್ರಶ್ನೆ "ಕಮ್ಯುನಿಸ್ಟರಿಲ್ಲದೇ ಈ ದೇಶಕ್ಕೆ ಭವಿಷ್ಯವಿದೆಯೇ ಎಂಬುದು". ಈ ದೇಶದ ಸ್ವಾತಂತ್ರ್ಯ ಚಳುವಳಿಯಿಂದ ಹಿಡಿದು ಇಲ್ಲಿಯತನಕ ಕಮ್ಯುನಿಸ್ಟರು ಈ ದೇಶದ ರೈತ-ಕಾರ್ಮಿಕರ, ವಿದ್ಯಾರ್ಥಿ-ಯುವಜನ-ಮಹಿಳೆಯರ ಹಕ್ಕುಗಳಿಗಾಗಿ, ಈ ದೇಶದ ಉಳಿವಿಗಾಗಿ, ಸೌಹಾರ್ದತೆಗಾಗಿ ಹೋರಾಡುತ್ತಾ ಪ್ರಾಣ ತ್ಯಾಗ ಮಾಡಿದ ಪರಂಪರೆ ಇದೆ. ಅಂತಹ ಪರಂಪರೆಯನ್ನು ಮುಂದಕ್ಕೊಯ್ಯುವ ಹಾಗೂ ಜನ ಚಳುವಳಿಗಳನ್ನು ಮುನ್ನಡೆಸುವ ಬದ್ಧತೆ ಕಮ್ಯುನಿಸ್ಟರಿಗಿದೆ.

ಮೋದಿ ನೇತೃತ್ವದ ಬಿ.ಜೆ.ಪಿ ಸರ್ಕಾರವು ದೇಶದ ಸಾರ್ವಜನಿಕ ಆಸ್ತಿಗಳನ್ನು ಮಾರುವುದರ ಮೂಲಕ ಈ ದೇಶವನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ಒತ್ತೆ ಇಡಲು ಮುಂದಾಗುತ್ತಿದೆ. ರಾಜ್ಯದಲ್ಲಿ ನಡೆಯುತ್ತಿರುವ 40% ಭ್ರಷ್ಟಾಚಾರದ ಬಗ್ಗೆ ಮೋದಿಯವರು ಮಾತನಾಡುತ್ತಿಲ್ಲ. ಇದರ ವಿರುದ್ಧ ಸಿಪಿಐಎಂ ಪಕ್ಷ ಹಾಗೂ ಕಾರ್ಮಿಕ ವರ್ಗ ನಿರಂತರ ಹೋರಾಟದಲ್ಲಿದೆ ಮತ್ತು ಅಂತಹ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಿದೆ. ಬೆಂಗಳೂರು ನಗರದಲ್ಲಿ ಪಕ್ಷವನ್ನು ಇನ್ನಷ್ಟು ವಿಸ್ತಾರಗೊಳಿಸಲು ಜನಚಳುವಳಿಗಳನ್ನು ಕಟ್ಟಲು ಈ ಸಮ್ಮೇಳನ ದೃಢ ನಿರ್ಧಾರ ಕೈಗೊಂಡಿದೆ. ಬೆಂಗಳೂರಿನಲ್ಲಿ ನಮ್ಮ ಪಕ್ಷವನ್ನು ಜನ ಸಮುದಾಯಗಳ ಮಧ್ಯೆ ಇನ್ನಷ್ಟು ನೆಲೆಗೊಳಿಸಲು ದೃಢ ಹೆಜ್ಜೆಗಳೊಂದಿಗೆ ಮುಂದೆ ಸಾಗುವ ತುರ್ತು ಅಗತ್ಯವಿದೆ ಎಂದು ತಿಳಿಸಿದರು. ಬಿಬಿಎಂಪಿ ಪುನರ್ ರಚನೆ ಹಾಗೂ ಬೆಂಗಳೂರಿನಲ್ಲಿ ನಾಗರಿಕ ಹಕ್ಕುಗಳಿಗಾಗಿ ಸೇರಿದಂತೆ 13 ಮಹತ್ವದ ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿತು.

ಸಮ್ಮೇಳನದ ಕಾರ್ಯ ಕಲಾಪಗಳನ್ನು ಕಾಂ. ಹೆಚ್.ಎನ್. ಗೋಪಾಲಗೌಡ, ಕಾಂ. ಗೋಪಾಲ ಕೃಷ್ಣ ಹರಳಹಳ್ಳಿ ಹಾಗು ಕಾಂ. ಟಿ. ಲೀಲಾವತಿ ರವರುಗಳ ಅಧ್ಯಕ್ಷೀಯ ಮಂಡಳಿಯು ಅಚ್ಚುಕಟ್ಟಾಗಿ ನಡೆಸಿಕೊಟ್ಟಿತು.

ಕೇರಳದಲ್ಲಿ ದಶಕಗಳಿಂದ ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ಶಿಕ್ಷಣ, ಗ್ರಾಮೀಣ ಮೂಲಸೌಕರ್ಯ ಮತ್ತು ಸಾಮಾನ್ಯ ಯೋಗಕ್ಷೇಮದಲ್ಲಿ ಗಣನೀಯ ಸುಧಾರಣೆಗೆ ಪ್ರಮುಖ ಕಾರಣಗಳಲ್ಲಿ ಒಂದು 1996ರಲ್ಲಿ ಅಲ್ಲಿ ಆರಂಭಿಸಿದ 'ಜನತಾ' ಯೋಜನೆ' ಎಂದು ಈ ಕ್ಷೇತ್ರಗಳ ಎಲ್ಲ ಪರಿಣಿತರೂ ಒಪ್ಪುತ್ತಾರೆ. ಅಭಿವೃದ್ಧಿಗೆ ಉದಾರೀಕರಣ-ಖಾಸಗೀಕರಣ-ಜಾಗತೀಕರಣದ ದಾರಿಯಲ್ಲದೆ ಬೇರೇನೂ ದಾರಿಯಿಲ್ಲ ಎಂದು ನಮ್ಮ ಆಳರಸರು ಬಿಂಬಿಸುತ್ತಿದ್ದ ಸಮಯದಲ್ಲೇ, ಜನರು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಭಾಗವಹಿಸುವ ಆಧಾರದ ಮೇಲೆ ಆಮೂಲಾಗ್ರ ಪರ್ಯಾಯವನ್ನು ನೀಡುವ ಮೂಲಕ ಒಂದು ಉತ್ತಮ ಜಗತ್ತು ಸಾಧ್ಯವಿದೆ ಎಂದು ಕೇರಳ ಸಾಬೀತುಪಡಿಸಿತು.



ಪ್ರಭುತ್ವವನ್ನು ಜನರ ಬಳಿ ತರುವ ಕೇರಳದ "ಜನತಾ ಯೋಜನೆ"ಗೆ 25 ವರ್ಷಗಳು

ವೈಶಾಖ ಥಾಲಿಯಿಲ್
ಕೃಪೆ: 'ಪೀಪಲ್ಸ್ ಡಿಸ್ಪ್ಯಾಚ್'
ಅನು: ರಾಮು ಕೆ.ಎಸ್.

ಕೇರಳದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಈ ವರ್ಷದ ಏಪ್ರಿಲ್‌ನಲ್ಲಿ, ರಾಜ್ಯ ವಿಧಾನಸಭೆಯ 140 ಸ್ಥಾನಗಳಲ್ಲಿ 99 ಸ್ಥಾನಗಳನ್ನು ಗಳಿಸಿ ಸತತ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದಿತು. ಈ ಗೆಲುವು ಅಧಿಕಾರದಲ್ಲಿರುವವರು ಚುನಾವಣೆಯಲ್ಲಿ ಸೋಲುವ 40 ವರ್ಷಗಳ ಹಿಂದಿನ ಟ್ರೆಂಡ್ ಅನ್ನು ಮುರಿಯಿತು. ಈ ವಿಜಯದ ಹಿಂದಿನ ಪ್ರಮುಖ ಅಂಶಗಳಲ್ಲಿ ಒಂದೆಂದರೆ, ಪ್ರವಾಹಗಳು ಮತ್ತು ಕೊವಿಡ್–19 ಸಾಂಕ್ರಾಮಿಕದಂತಹ ನೈಸರ್ಗಿಕ ವಿಕೋಪಗಳಿಗೆ ಸರ್ಕಾರ ಯಶಸ್ವಿಯಾಗಿ ಸ್ಪಂದಿಸಿದ್ದು. ಈ ಸ್ಪಂದನೆಯ ಪ್ರಮುಖ ಅಂಶವೆಂದರೆ ಆಮೂಲಾಗ್ರ ಜನ ಭಾಗವಹಿಸುವಿಕೆಯಿರುವ ಸಮುದಾಯ–ಕೇಂದ್ರಿತ ನಿಲುವು.

ರಾಜ್ಯದ ಇತರ ಹಲವು ಪ್ರಮುಖ ಉಪಕ್ರಮಗಳಲ್ಲಿಯೂ ಜನರ ಸಹಭಾಗಿತ್ವವು ಒಂದು ವೈಶಿಷ್ಟ್ಯವಾಗಿದೆ. "ಸಾರ್ವಜನಿಕ ಗ್ರಂಥಾಲಯ ಆಂದೋಲನ"ವು ವಾಚನಾಲಯಗಳು ಮತ್ತು ಪುಟ್ಟ ಗ್ರಂಥಾಲಯಗಳನ್ನು ಸ್ಥಾಪಿಸಲು ಸಹಾಯ ಮಾಡಿದರೆ "ಸಾಕ್ಷರತಾ ಆಂದೋಲನ"ವು ಕೇರಳವು ದೇಶದ ಅತ್ಯಂತ ಸಾಕ್ಷರ ರಾಜ್ಯವಾಗಲು ಕೊಡುಗೆ ನೀಡಿತು. ಈ ವರ್ಷ ತನ್ನ ಬೆಳ್ಳಿಹಬ್ಬವನ್ನು ಆಚರಿಸುತ್ತಿರುವ "ಜನತಾ ಯೋಜನೆ ಅಭಿಯಾನ" ಇನ್ನೊಂದು ಐತಿಹಾಸಿಕ ಉದಾಹರಣೆಯಾಗಿದೆ.

ಇ ಕೆ ನಾಯನಾರ್ ನೇತೃತ್ವದ ಎಲ್‌ಡಿಎಫ್ ಸರ್ಕಾರವು ಆಗಸ್ಟ್ 25, 1996 ರಂದು ಪ್ರಾರಂಭಿಸಿದ "ಜನತಾ ಯೋಜನೆ ಅಭಿಯಾನ"ವು ಸರ್ಕಾರ ಮತ್ತು ಆಡಳಿತವನ್ನು ಜನರಿಗೆ ಹತ್ತಿರ ತರುವ ಪ್ರಕ್ರಿಯೆಯ ಮೂಲಕ ವಿಕೇಂದ್ರೀಕರಣದತ್ತ ಗಮನ ಕೇಂದ್ರೀಕರಿಸಿತು. ನಿರ್ಧಾರ ಕೈಗೊಳ್ಳುವಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಯೋಜನೆಯ ಕೇಂದ್ರ ಬಿಂದು. ಬಡತನವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಶಿಕ್ಷಣ, ಆರೋಗ್ಯ, ಸ್ಥಳೀಯ ಮೂಲಸೌಕರ್ಯ ಮತ್ತು ಮುಂತಾದ ನಿರ್ಣಾಯಕ ಕ್ಷೇತ್ರಗಳಲ್ಲಿ ಕೇರಳ ಸಾಧಿಸಿದ ಪ್ರಗತಿಗೆ "ಜನತಾ ಯೋಜನೆ" ನೀಡಿದ ಕೊಡುಗೆಯನ್ನು ತಜ್ಞರು ಶ್ಲಾಘಿಸುತ್ತಾರೆ. ಭೂಸುಧಾರಣೆಯ ನಂತರ ಇದನ್ನು "ಮುಂದಿನ ದೊಡ್ಡ ವಿಷಯ" ಎಂದು ಕರೆದ ಕೇರಳದ ಮೊದಲ ಮುಖ್ಯಮಂತ್ರಿ ಮತ್ತು ಕಮ್ಯುನಿಸ್ಟ್ ಸಿದ್ಧಾಂತಿ ಇಎಂಎಸ್ ನಂಬೂದರಿಪಾಡ್ ಅವರ ಮೆದುಳಿನ ಕೂಸು ಇದು ಎಂದು ಪರಿಗಣಿಸಲಾಗಿದೆ, ಈ ಅಭಿಯಾನವು ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಲ್ಲಿ ರಾಜ್ಯ ಸರ್ಕಾರಕ್ಕೆ ಸಹಾಯ ಮಾಡುವ ಸ್ವಾಯತ್ತ ಸಂಸ್ಥೆಯಾದ, ರಾಜ್ಯ ಯೋಜನಾ ಮಂಡಳಿಯ (ಎಸ್‌ಪಿಬಿ) ಒಂಬತ್ತನೇ ಯೋಜನೆಯ ಭಾಗವಾಗಿತ್ತು. ಈ ಅಭಿಯಾನವನ್ನು ಎಡಪಂಥೀಯ ಮತ್ತು ಪ್ರಗತಿಪರ ಸಂಘಟನೆಗಳ ಜೊತೆಗೆ ಹಲವಾರು ಬುದ್ಧಿಜೀವಿಗಳು, ಕಾರ್ಯಕರ್ತರು, ಮಾಧ್ಯಮದವರು, ಅಧಿಕಾರಿಗಳು ಮತ್ತು ಇತರ ಸಾರ್ವಜನಿಕ ವ್ಯಕ್ತಿಗಳು ಬೆಂಬಲಿಸಿದರು.

ಈ ಉಪಕ್ರಮದ ಪ್ರಾರಂಭವು ಭಾರತದ ಆರ್ಥಿಕ ಮತ್ತು ರಾಜಕೀಯ ಇತಿಹಾಸದಲ್ಲಿ ನಿರ್ಣಾಯಕ ಸಮಯದಲ್ಲಿ ನಡೆಯಿತು. 1991 ರಲ್ಲಿ, ಪಿ ವಿ ನರಸಿಂಹ ರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ಉದಾರೀಕರಣ, ಖಾಸಗೀಕರಣ, ಜಾಗತೀಕರಣ (ಸಂಕ್ಷಿಪ್ತವಾಗಿ 'ಎಲ್‌ಪಿಜಿ') ನೀತಿಯನ್ನು ಪರಿಚಯಿಸಿತು, ಇದು ನವ ಉದಾರೀಕರಣದತ್ತ ನಿರ್ಣಾಯಕ ಹೆಜ್ಜೆಯಾಗಿತ್ತು. ಅಂತರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮತ್ತು ವಿಶ್ವಬ್ಯಾಂಕ್‌ನಂತಹ ಅಂತರಾಷ್ಟ್ರೀಯ ಸಂಸ್ಥೆಗಳಿಂದ ಪ್ರಭುತ್ವದ ಖರ್ಚು ಮತ್ತು ಒಟ್ಟಾರೆಯಾಗಿ ಸಮಾಜದಲ್ಲಿ ಪ್ರಭುತ್ವದ ಪಾತ್ರವನ್ನು ಕಡಿಮೆ ಮಾಡಲು ತೀವ್ರವಾದ 'ಒತ್ತಾಯವಿದ್ದ ಸಮಯವಾಗಿತ್ತು. 'ಬೇರೇನೂ ಪರ್ಯಾಯವೇ ಇಲ್ಲ' (TINA– There is No Alternative)ಎಂಬಂತೆ ಬಿಂಬಿಸುತ್ತಿದ್ದ ಸಂದರ್ಭದಲ್ಲಿ, ಜನರು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಭಾಗವಹಿಸುವ ಆಧಾರದ ಮೇಲೆ ಆಮೂಲಾಗ್ರ ಪರ್ಯಾಯವನ್ನು ನೀಡುವ ಮೂಲಕ ಒಂದು ಉತ್ತಮ ಜಗತ್ತು ಸಾಧ್ಯವಿದೆ ಎಂದು ಕೇರಳ ಸಾಬೀತುಪಡಿಸಿತು.

"ಇದು ಹೊಸ ಉಪಕ್ರಮವಾದ್ದರಿಂದ, ನಾವೆಲ್ಲರೂ ತುಂಬಾ ಉತ್ಸುಕರಾಗಿದ್ದೆವು! ಪುರಸಭೆ ಏನು ಮಾಡಬೇಕು ಎಂಬುದರ ಬಗ್ಗೆ ಜನರು ಸಾಮಾನ್ಯವಾಗಿ ಹೇಳುವಂತಿಲ್ಲ, ಆದರೆ ಈ ಯೋಜನೆಯಲ್ಲಿ, ಏನು ಮಾಡಬೇಕೆಂದು ಅವರು ಸ್ವತಃ ನಿರ್ಧರಿಸಬಹುದಾಗಿರುವುದರಿಂದ, ಪ್ರತಿಯೊಬ್ಬರೂ ಸಾಕಷ್ಟು ಆಸಕ್ತಿ ಹೊಂದಿದ್ದರು. ಅದು ರಸ್ತೆ ನಿರ್ಮಾಣ ಯೋಜನೆಯಾಗಲಿ ಅಥವಾ ನೀರಾವರಿ ಯೋಜನೆ ಕಾರ್ಯಕ್ರಮವಾಗಲಿ, ಅದರ ಬಗ್ಗೆ ಹೇಗೆ ಮುಂದುವರೆಯಬೇಕೆಂದು ಜನರು ಕುಳಿತು ಚರ್ಚಿಸುತ್ತಾರೆ"ಎಂದು ಯೋಜನೆಯ ಮೊದಲ ಹಂತದಲ್ಲಿ ಉತ್ತರ ಕೇರಳದ ಕಣ್ಣೂರು ಜಿಲ್ಲೆಯ ಕರಾವಳಿ ಪಟ್ಟಣವಾದ ತಲಸ್ಸೆರಿಯ ಪುರಸಭೆಯ ಅಧ್ಯಕ್ಷೆ ಪಿ ಕೆ ಆಶಾ ನೆನಪಿಸಿಕೊಳ್ಳುತ್ತಾರೆ.

ಮೇಲೆ ಹೇಳಿದಂತೆ, ಒಂಬತ್ತನೇ ಯೋಜನಾ ಬಜೆಟನ್ನು ಎಚ್ಚರಿಕೆಯಿಂದ ವಿಕೇಂದ್ರೀಕರಿಸುವುದರೊಂದಿಗೆ ಅಭಿಯಾನವನ್ನು ಸಾಧ್ಯಗೊಳಿಸಲಾಯಿತು. "ಪೀಪಲ್ಸ್ ಪ್ಲಾನಿಂಗ್ : ಕೇರಳ, ಲೋಕಲ್ ಡೆಮಾಕ್ರಸಿ ಅಂಡ್ ಡೆವಲಪ್‌ಮೆಂಟ್" ಯಲ್ಲಿಟ್ಟಿ. ಎಂ.ಥಾಮಸ್ ಐಸಾಕ್ ಮತ್ತು ರಿಚರ್ಡ್ ಫ್ರಾಂಕೀ ಅವರು ಉಲ್ಲೇಖಿಸಿದ ಮಾಹಿತಿಯ ಪ್ರಕಾರ: 1997–98 ರ ರಾಜ್ಯದ ವಾರ್ಷಿಕ ಯೋಜನೆ ರೂ. 2855 ಕೋಟಿಗಳು ಆಗಿದೆ, ಅದರಲ್ಲಿ ರೂ. 1025 ಕೋಟಿಗಳು, ಅಂದರೆ, ಒಟ್ಟು ಬಜೆಟ್‌ನ 36% ವಿಕೇಂದ್ರೀಕರಣಕ್ಕಾಗಿ ಕಾಯ್ದಿರಿಸಲಾಗಿತ್ತು.. ರೂ.1025 ಕೋಟಿ, ಪೈಕಿ ರೂ. 749 ಕೋಟಿಗಳು ಸ್ಥಳೀಯ ಸಂಸ್ಥೆಗಳಿಗೆ ನಿಜವಾದ ಅನುದಾನ–ನೆರವು ಆಗಿತ್ತು. ಯೋಜನಾ ನಿಧಿಯನ್ನು ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ನಡುವೆ ಅವುಗಳ ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ ಅಂದರೆ, 85:15 ಅನುಪಾತದಲ್ಲಿ ಹಂಚಿಕೆ ಮಾಡಲಾಯಿತು. ಸ್ಥಳೀಯ ಸಂಸ್ಥೆಗಳಿಗೆ ಹಣವನ್ನು ಸಮರ್ಪಕವಾಗಿ ಬಳಸಲು ಮಾರ್ಗಸೂಚಿಗಳನ್ನು ಒದಗಿಸಲಾಯಿತು. ಸ್ಥಳೀಯ ಸಂಸ್ಥೆಗಳು ತಾವು ಸ್ವೀಕರಿಸುವ ಯೋಜನೆ ಹಂಚಿಕೆಯ ನಿಖರವಾದ ಮೊತ್ತದ ಬಗ್ಗೆ ತಿಳಿದಿದ್ದವು. ಇದು ಕಾರ್ಯನಿರ್ವಾಹಕರು ನಂತರ ಅನುದಾನಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ತಡೆಯಿತು.ಇಂತಹ ಖಚಿತವಾದ ಹಂಚಿಕೆಗಳೊಂದಿಗೆ, ಸ್ಥಳೀಯ ಸಂಸ್ಥೆಗಳು ಅಭಿವೃದ್ಧಿ ಯೋಜನೆಗಳನ್ನು ವಿಶ್ವಾಸದಿಂದ ಕೈಗೆತ್ತಿಕೊಳ್ಳಲು ಸಾಧ್ಯವಾಯಿತು.

ಪಿ ಕೆ ಆಶಾ ಹೇಳುತ್ತಾರೆ, "ನಮ್ಮ ತಲಸ್ಸೇರಿ ಪುರಸಭೆಯಲ್ಲಿ ನಾವು ಕನಿಷ್ಠ 20 ಕುಡಿಯುವ ನೀರಿನ ಯೋಜನೆ ಕಾರ್ಯಕ್ರಮಗಳಲ್ಲಿ ಕೆಲಸ ಮಾಡಿದ್ದೇವೆ. ಎಲ್ಲ ಮೂಲಸೌಕರ್ಯ ಕಾಮಗಾರಿಗಳನ್ನು ನಗರಸಭೆಯೇ ಮಾಡಿದ್ದರೂ ಏನು ಮಾಡಬೇಕೆಂದು ಜನರೇ ನಿರ್ಧರಿಸಿದ್ದಾರೆ. ಸ್ಥಳೀಯ ಮಟ್ಟದಲ್ಲಿ ಸಭೆ ನಡೆಸಿ ಅಲ್ಲಿನ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ನಂತರ ಯೋಜನೆಯ ಗ್ರಾಹಕರು ಹೆಚ್ಚಿನ ವಿಷಯಗಳನ್ನು ಚರ್ಚಿಸಲು ಸ್ವತಃ ಸಮಿತಿಯನ್ನು ರಚಿಸಿದರು. ಈ ಕೆಲವು ಯೋಜನೆಗಳು ಇನ್ನೂ ಮುಂದುವರೆದಿವೆ."

ಕೇರಳದಲ್ಲಿ ದಶಕಗಳಿಂದ ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ಶಿಕ್ಷಣ, ಗ್ರಾಮೀಣ ಮೂಲಸೌಕರ್ಯ ಮತ್ತು ಸಾಮಾನ್ಯ ಯೋಗಕ್ಷೇಮದಲ್ಲಿ ಗಣನೀಯ ಸುಧಾರಣೆಗೆ ಜನತಾ ಯೋಜನೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. 28% ಜನಸಂಖ್ಯೆಯು 1991 ರಲ್ಲಿ ಸಾರ್ವಜನಿಕ ಆರೋಗ್ಯ ಸೌಲಭ್ಯಗಳ ಮೇಲೆ ಅವಲಂಬಿತವಾಗಿದ್ದು, 2018 ರ ಹೊತ್ತಿಗೆ ಅದು 48% ಕ್ಕೆ ಏರಿತು. ಕೇರಳದಲ್ಲಿ 6,00,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಖಾಸಗಿ ಶಾಲೆಗಳಿಂದ ಸಾರ್ವಜನಿಕ ಶಾಲೆಗಳಿಗೆ ಸ್ಥಳಾಂತರಗೊಂಡರು. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು (ಎಸ್‌ಡಿಜಿ), 2020 ಕ್ಕೆ ಶಿಶು ಮರಣದ (ಐಎಂಆರ್) ಕಡಿತದ ಗುರಿ 8% ಎಂದು ಇಟ್ಟುಕೊಂಡಿದ್ದರೆ, ಕೇರಳದಲ್ಲಿ ಅದು 7% ಕ್ಕೆ ಇಳಿದು,. ಆ ಗುರಿ ಸಾಧಿಸಿದೆ. 1995–96 ರಲ್ಲಿ 115,000 ಕಿಮೀ ಇದ್ದ ಗ್ರಾಮೀಣ ರಸ್ತೆಗಳು 2018 ರಲ್ಲಿ 231,000 ಕಿಮೀ ಗೆ ಹೆಚ್ಚಾಯಿತು. ಬಡತನ ರೇಖೆಗಿಂತ ಕೆಳಗಿರುವ ಜನರ ಸಂಖ್ಯೆ 1993–94 ರಲ್ಲಿ 25% ರಿಂದ 2011–12 ರಲ್ಲಿ 6% ಕ್ಕೆ ಇಳಿದಿದೆ. ಅಭಿಯಾನವು 41,00,000 ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ವಿಶ್ವದ ಅತಿದೊಡ್ಡ ಮಹಿಳಾ ಜಾಲವಾದ ಕುಡುಂಬಶ್ರೀಯಂತಹ ಸ್ವ–ಸಹಾಯ ಗುಂಪುಗಳಿಗೆ ಜನ್ಮ ನೀಡಿತು. ಸಮುದಾಯ ಕ್ರಿಯೆಯ ಮೂಲಕ ತೀವ್ರ ಬಡತನವನ್ನು ನಿರ್ಮೂಲನೆ ಮಾಡುವುದು ಸಂಸ್ಥೆಯ ಧ್ಯೇಯವಾಗಿದೆ.

ಹಾಗಾದರೆ ಜನತಾ ಯೋಜನೆಯಲ್ಲಿ ಮುಂದೇನು? ಜನತಾ ಯೋಜನಾ ಅಭಿಯಾನದ ಶಿಲ್ಪಿಗಳಲ್ಲಿ ಒಬ್ಬರಾದ, ಮುಂದೆ ರಾಜ್ಯ ಹಣಕಾಸು ಸಚಿವರೂ ಆದ ಡಾ. ಟಿ ಎಂ ಥಾಮಸ್ ಐಸಾಕ್ ಅವರು ಫೇಸ್‌ಬುಕ್‌ನಲ್ಲಿ ಃಈಗೆ ಬರೆದಿದ್ದಾರೆ: "ಜನಪ್ರಿಯ ಯೋಜನಾ ಅವಧಿಯ ಹುರುಪನ್ನು ಪುನಃಸ್ಥಾಪಿಸಬೇಕು. ಭಾಗವಹಿಸುವಿಕೆ ಹೆಚ್ಚಾಗಬೇಕು. ಭ್ರಷ್ಟಾಚಾರ ನಿರ್ಮೂಲನೆಯಾಗಬೇಕು. ಕೃಷಿ, ಸಣ್ಣ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಳವಡಿಸಬೇಕು. ನಾವು ಜ್ಞಾನ ಸಮಾಜದತ್ತ ಪರಿವರ್ತನೆಯಲ್ಲಿದ್ದೇವೆ ಎಂಬುದನ್ನು ನೆನಪಿನಲ್ಲಿಡಬೇಕು. ಜಿಲ್ಲಾ ಯೋಜನೆಗಳ ಜತೆಗೆ ಜಲಾನಯನ ಮಹಾಯೋಜನೆಗಳನ್ನು ತರಬೇಕು. ನಗರ ಯೋಜನೆ ಇನ್ನಷ್ಟು ಸುಧಾರಿಸಬೇಕಿದೆ. ಬಡತನ ಸಂಪೂರ್ಣ ನಿರ್ಮೂಲನೆಯಾಗಬೇಕು. ಮಹಿಳಾ ಸಮಾನತೆಯನ್ನು ಖಾತ್ರಿಪಡಿಸಬೇಕು. ಪರಿಸರ ಸ್ನೇಹಿ ನೀತಿಗಳು ಜಾರಿಯಾಗಬೇಕು. ಯೋಜನೆಯಲ್ಲಿ ಕೆಳಸ್ತರದಲ್ಲಿರುವವರು, ವೃದ್ಧರು ಮತ್ತು ಅಂಗವಿಕಲರನ್ನು ಸೇರಿಸಿಕೊಳ್ಳಬೇಕು. ಮುಂದಿನ 25 ವರ್ಷಗಳು ಕೇರಳವನ್ನು ಈ ರೀತಿ ರೂಪಿಸಬೇಕು."

ಬಡತನವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಶಿಕ್ಷಣ, ಆರೋಗ್ಯ, ಸ್ಥಳೀಯ ಮೂಲಸೌಕರ್ಯ ಮತ್ತು ಮುಂತಾದ ನಿರ್ಣಾಯಕ ಕ್ಷೇತ್ರಗಳಲ್ಲಿ ಕೇರಳದ ಹೆಸರು ಸಾಮಾನ್ಯವಾಗಿ ತುತ್ತತುದಿಯಲ್ಲಿರುತ್ತದೆ. ಇದರಲ್ಲಿ ಇತ್ತೀಚಿನದ್ದೆಂದರೆ ನೀತಿ ಆಯೋಗ ಪ್ರಕಟಿಸಿರುವ ಬಹುಮುಖಿ ಬಡತನ ಸೂಚ್ಯಂಕ(ನೋಡಿ ಈ ಸಂಚಿಕೆಯ ಪುಟ6-10ರಲ್ಲಿರುವ ಲೇಖನ). ಇದರ ಪ್ರಕಾರ ಕೇರಳದಲ್ಲಿ ಇರುವ ಬಡತನದ ಪ್ರಮಾಣ 0.71%- ದೇಶದಲ್ಲಿಯೇ ಅತೀಕಡಿಮೆ. ಎರಡನೇ ಸ್ಥಾನದಲ್ಲಿರುವ ದೊಡ್ಡ ರಾಜ್ಯವೆಂದರೆ ತಮಿಳುನಾಡು. ಅಲ್ಲಿ ಇದು 4.9%. ಕೇರಳದಲ್ಲಿ ಅತಿ ಹೆಚ್ಚು ಬಡವರ ಪ್ರಮಾಣ ಇರುವ ವಾಯ್ನಾಡಿನಲ್ಲಿಯೂ ಇದು 3.48% ಮಾತ್ರ. ದೇಶದಲ್ಲಿ ಅತೀ ಹೆಚ್ಚುಬಡವರ ಪ್ರಮಾಣ 51.9%ಬಿಹಾರದಲ್ಲಿ. ಈ ಸೂಚ್ಯಂಕದ ಎಲ್ಲ 12 ಅಂಶಗಳಲ್ಲಿಯೂ ಕೇರಳವೇ ತುತ್ತತುದಿಯಲ್ಲಿದೆ. ವಂಚಿತರ ಪ್ರಮಾಣ ತಾಯಿ ಆರೋಗ್ಯದಲ್ಲಿ 1.73%, ಶಾಲಾ ವರ್ಷ 1.78%, ಶಾಲಾ ಹಾಜರಾತಿ 0.3% ಮತ್ತು ಸ್ವಚ್ಛತೆಯಿಂದ ವಂಚಿತರಾದವರ ಪ್ರಮಾಣ 1.1%. ಅದೇ ರೀತಿ ಪೌಷ್ಟಿಕತೆ,ಅಡುಗೆ ಇಂಧನ,ಕುಡಿಯುವ ನೀರು, ವಿದ್ಯುತ್, ವಸತಿ, ಬ್ಯಾಂಕ್ ಅಕೌಂಟುಗಳಲ್ಲಿಯೂ. ಇವೆಲ್ಲದರಲ್ಲಿ ಜನತಾ ಯೋಜನೆ" ನೀಡಿದ ಕೊಡುಗೆಯನ್ನು ಬಹಳಷ್ಟು ತಜ್ಞರು ಗುರುತಿಸಿದ್ದಾರೆ.

"ಬ್ಯಾಂಕ್ ಉಳಿಸಿ, ದೇಶ ಉಳಿಸಿ"– ಬ್ಯಾಂಕ್ ಅಧಿಕಾರಿಗಳ ಪ್ರಚಾರಾಂದೋಲನಕ್ಕೆ ರೈತರು, ಕಾರ್ಮಿಕರಿಂದ ಬೆಂಬಲ

ನವಂಬರ್ 30 ರಂದು ದಿಲ್ಲಿಯ ಜಂತರ್ ಮಂತರ್‌ನಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ನೂರಾರು ಅಧಿಕಾರಿಗಳು ಬ್ಯಾಂಕುಗಳ ಖಾಸಗೀಕರಣದ ವಿರುದ್ಧ ಮತಪ್ರದರ್ಶನ ನಡೆಸಿದರು. ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು, ರೈತರು, ರಾಜಕೀಯ ಪಕ್ಷಗಳ ಕಾರ್ಯಕರ್ತರು ಕೂಡ ಈ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಮಹಾಒಕ್ಕೂಟ (ಎಐಬಿಒಸಿ) ನೇತೃತ್ವದಲ್ಲಿ ಈ ಪ್ರಚಾರಾಂದೋಲನ ನಡೆಯುತ್ತಿದೆ. ಈ ಸಂಘಟನೆಯ ಮುಖಂಡರುಗಳು ಬ್ಯಾಂಕ್‌ಖಾಸಗೀಕರಣದ ವಿರುದ್ಧ ಸಂದೇಶವನ್ನು ದೇಶಾದ್ಯಂತ ಪಸರಿಸುವ 'ಭಾರತ ಯಾತ್ರೆ'ಯನ್ನು ನವಂಬರ್24ರಂದು ಮುಂಬೈ ಮತ್ತು ಕೊಲ್ಕತಾದಿಂದ ಆರಂಭಿಸಿದರು. ನವಂಬರ್ 30ರಂದು ಇದರ ಸಮಾರೋಪವಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಜಂತರ್ ಮಂತರ್‌ನಲ್ಲಿ ಮತಪ್ರದರ್ಶನ ನಡೆಸಿದರು.

ಕಳೆದ ಬಜೆಟ್ ಭಾಷಣದಲ್ಲಿ ಪ್ರಕಟಿಸಿದಂತೆ ಎರಡು ಬ್ಯಾಂಕುಗಳ ಖಾಸಗೀಕರಣಕ್ಕೆ ಅನುಕೂಲ ಮಾಡಿಕೊಳ್ಳಲು ಸಂಸತ್ತಿನ ಪ್ರಸಕ್ತ ಚಳಿಗಾಲದ ಅಧಿವೇಶನದಲ್ಲಿ .ಬ್ಯಾಂಕಿಂಗ್ ಕಾಯ್ದೆಗೆ ತಿದ್ದುಪಡಿ ಮಂಡಿಸುವ ಸಂಭವ ಇದೆಯೆಂದು ಹೇಳಲಾಗಿದೆ. ಇದರಲ್ಲಿ ಬ್ಯಾಂಕುಗಳಲ್ಲಿ ಸರಕಾರದ ಪಾಲುದಾರಿಕೆಯನ್ನು ಈಗಿರುವ 51ಶೇ.ದಿಂದ 26ಶೇ.ಕ್ಕೆ ಇಳಿಸಲಾಗುವುದು. ಇದನ್ನು ಸಾಧ್ಯವಾಗಿಸಲು 1970ರ ಬ್ಯಾಂಕ್ ರಾಷ್ಟ್ರೀಕರಣಕ್ಕೆ ಸಂಬಂಧಪಟ್ಟ ಕಾಯ್ದೆ ಮತ್ತು ಬ್ಯಾಂಕಿಂಗ್ ನಿಯಮಾವಳಿಗಳ ಕಾಯ್ದೆ , 1949ಕ್ಕೆ ತಿದ್ದುಪಡಿಗಳನ್ನು ತರಲಾಗುತ್ತದೆ ಎಂದೂ ವರದಿಯಾಗಿದೆ. ಇವಕ್ಕೆ ಸಂಸತ್ತಿನ ಒಪ್ಪಿಗೆಯನ್ನು ಪಡಕೊಂಡರೆ 1970ರಲ್ಲಿ ರಾಷ್ಟ್ರೀಕರಣಗೊಂಡ ಬ್ಯಾಂಕುಗಳನ್ನು ಮತ್ತೆ ಖಾಸಗಿವರಿಗೆ ಪೂರ್ಣವಾಗಿ ಒಪ್ಪಿಸುವ ಕೆಲಸ ಆರಂಭವಾಗಲಿದೆ.ಇದು ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮತ್ತು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ದೊಂದಿಗೆ ಆರಂಭವಾಗಲಿದೆ. ಸದ್ಯ ಭಾರತ ಸರಕಾರ ಈ ಬ್ಯಾಂಕುಗಳಲ್ಲಿ 90%ಕ್ಕಿಂತಲೂ ಹೆಚ್ಚಿನ ಪಾಲುದಾರಿಕೆ ಹೊಂದಿವೆ.

ಈಗಾಗಲೇ ಹತ್ತು ಸಾರ್ವಜನಿಕ ವಲಯದ ಬ್ಯಾಂಕುಗಳನ್ನು 4 ಬ್ಯಾಂಕುಗಳಾಗಿ ವಿಲೀನ ಮಾಡಲಾಗಿದೆ. ಇದರಿಂದಲೇ ಬ್ಯಾಂಕ್ ಗ್ರಾಹಕರು ಸಾಕಷ್ಟು ತೊಂದರೆಗಳನ್ನು ಅನುಭವಿಸಬೇಕಾಗಿ ಬಂದಿದೆ. ಇನ್ನು ಸಂಪೂರ್ಣ ಖಾಸಗೀಕರಣ ಮಾಡಿದರೆ ಗ್ರಾಹಕರು ಇನ್ನಷ್ಟು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಇದು ಮುಖ್ಯವಾಗಿ ರೈತರು, ಸಣ್ಣ ಉದ್ಯಮಗಳು ಮತ್ತು ಸಮಾಜದ ದುರ್ಬಲ ವಿಭಾಗಗಳನ್ನೇ ಹೆಚ್ಚಾಗಿ ತಟ್ಟುತ್ತದೆ ಎಂಧು ಬ್ಯಾಂಕ್ ಅಧಿಕಾರಿಗಳು ಆತಂಕ ವ್ಯಕ್ತಪಡಿಸುತ್ತಾರೆ.

ಬ್ಯಾಂಕ್ ಅಧಿಕಾರಿಗಳ ಈ ಚಳುವಳಿಯನ್ನು ಬೆಂಬಲಿಸುತ್ತ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಬ್ಯಾಂಕ್ ಅಧಿಕಾರಿಗಳ ಈ ಚಳುವಳಿಗೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಬೆಂಬಲವನ್ನು ವ್ಯಕ್ತಪಡಿಸಿದರು. ಬಜೆಟ್ ಅಧಿವೇಶನದದ ವೇಳೆಯಲ್ಲಿ ನಡೆಸಲಿರುವ ಎರಡು ದಿನಗಳ ಸಾರ್ವತ್ರಿಕ ಮುಷ್ಕರದಲ್ಲಿ ಈ ಪ್ರಶ್ನೆಯನ್ನು ಮತ್ತೆ ಎತ್ತಲಾಗುವುದು ಎಂದು ಅವರು ಹೇಳಿದರು.

ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಮಾತಾಡುತ್ತ ಕೇಂದ್ರ ಸರಕಾರ ಈ ಪ್ರಸ್ತಾವವನ್ನು ಹಿಂತೆಗೆದುಕೊಳ್ಳಬೇಕು ಎಂದು ಹೇಳಿದರು.

ಈ ಮಸೂದೆಯಿಂದ ಬ್ಯಾಂಕ್ ಸಿಬ್ಬಂದಿಗೂ ಪ್ರಯೋಜನವಿಲ್ಲ, ಜನಗಳಿಗೂ ಪ್ರಯೋಜನಿಲ್ಲ, ಹಾಗಿರುವಾಗ ಲಾಭವಾದರೂ ಯಾರಿಗೆ ಎಂದು ಕಾಂಗ್ರೆಸಿನ ರಾಷ್ಟ್ರೀಯ ವಕ್ತಾರ ಗೌರವ್ ವಲ್ಲಭ್ ಕೂಡ ಪ್ರಶ್ನಿಸಿದ್ದಾರೆ.

ಲಾಭ ಗಳಿಸುತ್ತಿದ್ದರೂ ಖಾಸಗೀಕರಣ ಏಕೆ?

ಬ್ಯಾಂಕಿಂಗ್ ಕ್ಷೇತ್ರದಲ್ಲಿ ದುಡಿಯುತ್ತಿರುವ ನೌಕರರ ಮತ್ತು ಅಧಿಕಾರಿಗಳ ಸಂಘಟನೆಗಳು ಮತ್ತು ಇವೆಲ್ಲವುಗಳನ್ನೂ ಒಳಗೊಂಡ ಐಕ್ಯವೇದಿಕೆ ಯು.ಎಫ್.ಬಿ.ಯು. ಬ್ಯಾಂಕ್ ಖಾಸಗೀಕರಣ ಮಸೂದೆಯ ವಿರುದ್ಧ ವ್ಯಾಪಕ ಪ್ರಚಾರದ ಭಾಗವಾಗಿ ಪ್ರಕಟಿಸಿರುವ ಅಂಕಿ–ಅಂಶಗಳ ಪ್ರಕಾರ ಕಳೆದ ಒಂದು ದಶಕದಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು ಗಳಿಸಿರುವ ಲಾಭದ (Operating Prifit)ಅಂಕಿ–ಅಂಶಗಳು ಹೀಗಿವೆ:

ವರ್ಷ	ಕಾರ್ಯಾಚರಣೆಯ ಲಾಭ
2010–11	ರೂ. 99,981 ಕೋಟಿ
2011–12	1,16,337 "
2012–13	1,21,839 "
2013–14	1,27,632 "
2014–15	1,38,064 "
2015–16	1,38,191 "
2016–17	1,59,022 "
2017–18	1,55,690 "
2018–19	1,49,804 "
2019–20	1,74,336 "

ಹಣಕಾಸು ವರ್ಷ 2021–22 ರ ಎರಡನೇ ತ್ರೈಮಾಸಿಕದಲ್ಲಿ ಸ್ಟೇಟ್ ಬ್ಯಾಂಕ್ ಸೇರಿದಂತೆ 12 ಸಾರ್ವಜನಿಕ ವಲಯದ ಬ್ಯಾಂಕುಗಳು ಗಳಿಸಿದ ಒಟ್ಟು ಲಾಭ ರೂ.50,863 ಕೋಟಿ ಮತ್ತು ನಿವ್ವಳ ಲಾಭ ರೂ. 17,132 ಕೋಟಿ.

ಈ ಪ್ರಶ್ನೆಯ ಇನ್ನೊಂದು ಮುಖ ಹೀಗಿದೆ: ಸುಸ್ತಿ ಸಾಲಗಳನ್ನು ಮನ್ನಾ ಮಾಡುವುದಿಲ್ಲ, ವಸೂಲಿ ಮಾಡಲಾಗುವುದು ಎಂದು ಹೇಳಿದರೂ, ವಾಸ್ತವವಾಗಿ ಇವುಗಳಲ್ಲಿ 'ಇತ್ಯರ್ಥ'ದ ಹೆಸರಲ್ಲಿ ಈ ಸಾಲಗಳನ್ನು ವಹಿಸಿಕೊಂಡವರಿಂದ ಸಿಕ್ಕಿದ ಹಣ, ಇದರಿಂದ ಬ್ಯಾಂಕುಗಳಿಗೆ ಬ್ಯಾಂಕ್ ಭಾಷೆಯಲ್ಲಿ ಆಗಿರುವ 'ಹೇರ್ ಕಟ್' ಅಂದರೆ ಚೌರ ಎಷ್ಟು ಎಂಬುದನ್ನು ಎಐಬಿಇಎ ಪ್ರಕಟಿಸಿರುವ ಈ ಪೋಸ್ಟರ್ ತಿಳಿಸುತ್ತದೆ. ಅದರ ಸಾರಾಂಶ ಹೀಗಿದೆ:

13 ಸುಸ್ತಿಸಾಲ ಖಾತೆಗಳಲ್ಲಿ ಬರಬೇಕಾಗಿದ್ದ ಒಟ್ಟು ಬಾಕಿ ರೂ. 4,46,800 ಕೋಟಿ

ಇತ್ಯರ್ಥವಾದ ಮೊತ್ತ 1,61,820 ಕೋಟಿ

ಬ್ಯಾಂಕುಗಳಿಗೆ ಆದ ನಷ್ಟ 2,84,980 ಕೋಟಿ

ಹೇರ್‌ಕಟ್ 64%

Borrower	Loan amount	Settled and Resolved for	Haircut for Banks %	IN FAVOUR OF
Essar	54,000	42,000	23 %	Arcelor Mittal
Bhushan Steels	57,000	35,000	38	Tatas
Jyothi Structures	8,000	3,600	55	Sharad sanghi
DHFL	91,000	37,000	60	Piramal
Bhushan Power	48,000	19,000	60	JSW
Electrosteel Steels	14,000	5,000	62	Vedanta
Monnet Ispat	11,500	2,800	75	JSW
Amtek	13,500	2,700	80	DVIL
Alok Industries	30,000	5,000	83	Reliance + JM Fin
Lanco Infra	47,000	5,300	88	Kalyan group
Videocon	46,000	2,900	94	Vedanta
ABC Shipyard	22,000	1,200	95	Liquidation
Sivasankaran industries	4,800	320	95 %	Father in law
IN 13 ACCOUNTS	4,46,800	1,61,820	64 %	

ಆರೆಸ್ಸೆಸ್‌ನ ಪಾಶವೀ ಹತ್ಯಾ ರಾಜಕೀಯ ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಕೇರಳದ ಪಥಣಂಥಿಟ್ಟ ಜಿಲ್ಲೆಯ ಪೆರಿಂಗರ ಸಿಪಿಐ(ಎಂ) ಸ್ಥಳೀಯ ಸಮಿತಿಯ ಕಾರ್ಯದರ್ಶಿ ಕಾಂ. ಪಿ.ಬಿ. ಸಂದೀಪ ಕುಮಾರ್ ಅವರನ್ನು ತಿರುವಳ್ಳದಲ್ಲಿ ಅಡ್ಡಗಟ್ಟಿ ಚಾಕುಗಳಿಂದ ಹಲವು ಬಾರಿ ತಿವಿದು ಕೊಲ್ಲಲಾಗಿದೆ. ಈ ಅಮಾನುಷ ಹತ್ಯೆಯನ್ನು ಸಿಪಿಐ(ಎಂ) ಪೊಲಿಟ್ ಬುರೊ ಬಲವಾಗಿ ಖಂಡಿಸಿದೆ. 36 ವರ್ಷದ ಸಂದೀಪ್ ಒಬ್ಬ ಜನಪ್ರಿಯ ಮುಖಂಡರು, ಒಬ್ಬ ಮಾಜೀ ಪಂಚಾಯತ್ ಸದಸ್ಯರು.

ಈ ಕೊಲೆ ಕೇರಳದಲ್ಲಿ ಸಿಪಿಐ(ಎಂ) ಮೇಲೆ ಗುರಿಯಿಟ್ಟು ಆರೆಸ್ಸೆಸ್–ಬಿಜೆಪಿ ನಡೆಸಿರುವ ಕೊಲೆ ರಾಜಕೀಯದ ಮುಂದುವರಿಕೆಯಾಗಿದೆ. ಬಂಧಿಸಲಾಗಿರುವ ಆರೋಪಿಗಳಲ್ಲಿ ಒಬ್ಬರು ಪೆರಿಂಗರದಲ್ಲಿ ಬಿಜೆಪಿಯ ಯುವ ಮೋರ್ಚದ ಅಧ್ಯಕ್ಷ ಮತ್ತು ಒಬ್ಬ ಆರೆಸ್ಸೆಸ್ ಕಾರ್ಯಕರ್ತ.

ಆರೆಸ್ಸೆಸ್–ಬಿಜೆಪಿಯ ಗುರಿ ರಾಜ್ಯದಲ್ಲಿ ನೆಲೆಸಿರುವ ಶಾಂತಿಯುತ ವಾತಾವರಣವನ್ನು ಕದಡುವುದು ಮತ್ತು ಹಿಮಸಾಚಾರಕ್ಕೆ ಇಳಿದು ಸಿಪಿಐ(ಎಂ)ನ ಬೆಳವಣಿಗೆಯನ್ನು ತಡೆಯುವುದು. ಈ ಕುತಂತ್ರಗಳು ಯಶಸ್ವಿಯಾಗಲು ಬಿಡುವುದಿಲ್ಲ ಎಂದಿರುವ ಪೊಲಿಟ್ ಬ್ಯುರೊ ಇಂತಹ ಹಿಂಸಾತ್ಮಕ ಹಲ್ಲೆಗಳನ್ನು ತಕ್ಷಣವೇ ಒಂದು ನಿಲುಗಡೆ ಹಾಕಬೇಕು ಎಂದು ಆಗ್ರಹಿಸಿದೆ.

ಸಂದೀಪ್ ಕುಮಾರ್ ನೇತೃತ್ವದಲ್ಲಿ ಇತ್ತೀಚೆಗೆ



ಆರೆಸ್ಸೆಸ್–ಬಿಜೆಪಿಯ ಸುಮಾರು 150 ಮಂದಿ ಸಿಪಿಐ(ಎಂ) ಸೇರಿದ್ದಾರೆ. ಬಡ ಹಿನ್ನೆಲೆಯಿಂದ ಬಂದಿರುವ ಸಂದೀಪ್ ಕಳೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಎಲ್‌ಡಿಎಫ್ ವಿಜಯದಲ್ಲಿ ಮಹತ್ವದ ಪಾತ್ರ ವಹಿಸಿದ್ದರು, 27 ವರ್ಷಗಳ ನಂತರ ಪೆರಿಂಗರ ಗ್ರಮ ಪಂಚಾಯತ್ ಎಲ್‌ಡಿಎಫ್ ಮತ್ತೆ ಗೆಲುವು ಪಡೆಯಿತು. ಅವರು ಪತ್ನಿ ಸುನೀತಾ ಮತ್ತು ಇಬ್ಬರು ಮಕ್ಕಳನ್ನು, ಮೂರೂವರೆ ವರ್ಷದ ನಿಹಾಲ್ ಮತ್ತು ಕೇವಲ 3 ತಿಂಗಳ ಹೆಣ್ಣುಮಗುವನ್ನು ಅಗಲಿದ್ದಾರೆ.

ಪುಟ 7 ರಿಂದ

ಸಂಸತ್ತಿಗೆ ಬಿಜೆಪಿಯ ತಿರಸ್ಕಾರ

ಖಾಸಗೀಕರಿಸುವ ಮಸೂದೆಯನ್ನು ಆಯ್ಕೆ ಸಮಿತಿಗೆ ಒಪ್ಪಿಸದೆ ಅಂಗೀಕರಿಸುವುದಕ್ಕೆ ಸರ್ಕಾರ ಮುಂದೊತ್ತಿದ ಸಂದರ್ಭದಲ್ಲಿ ಸದಸ್ಯರು 'ಅಶಿಸ್ತಿನಿಂದ ವರ್ತಿಸಿದ' ಈ ಪ್ರಕರಣ ನಡೆದಿತ್ತು. ಆ ವಿಚಾರದಲ್ಲಿ ಮತದಾನಕ್ಕೂ ಸರ್ಕಾರ ನಿರಾಕರಿಸಿತ್ತು.

ಹಿಂದಿನ ಅಧಿವೇಶನದ ಕೆಲವು ಘಟನೆಗಳಿಗಾಗಿ ಎಂಪಿಗಳನ್ನು 'ಶಿಸ್ತಿಗೊಳಪಡಿಸುವುದು' ಅಸಿಂಧುವಾಗಿದೆ. ಮಾತ್ರವಲ್ಲ ಆಗಸ್ಟ್ 11ರ ಘಟನೆಯಲ್ಲಿ ಹೆಸರಿಸಲಾದ 33 ಸದಸ್ಯರ ಪಟ್ಟಿಯಲ್ಲಿ ಇಲ್ಲದ, ಸದನದಲ್ಲಿ ಸಿಪಿಐ(ಎಂ) ಗುಂಪಿನ ನಾಯಕ ಎಳಮಾರಂ ಕರೀಂ ಮೇಲೆ ಗುರಿಯಿಟ್ಟಿರುವುದು ಮೇಲ್ಮನೆಯಲ್ಲಿ ಹೆಚ್ಚು ಬಲಿಷ್ಠವಾಗಿರುವ ಪ್ರತಿಪಕ್ಷದ ದನಿಯನ್ನು ಅಡಗಿಸುವ ಆಳುವ ಪಕ್ಷದ ಹುನ್ನಾರವನ್ನು ಜಗಜ್ಜಾಹೀರು ಗೊಳಿಸುತ್ತದೆ.

ಸಂಸತ್ ಸದಸ್ಯರು ಮತ್ತು ಪ್ರತಿಪಕ್ಷದ ಹಕ್ಕುಗಳ ಮೇಲಿನ ಈ ದಾಳಿಗಳನ್ನು ಪ್ರತಿಪಕ್ಷಗಳು ಒಗ್ಗಟ್ಟಿನಿಂದ ಪ್ರತಿಭಟಿಸುತ್ತಿವೆ. ಸಂಸತ್ತಿನ ಒಳಗಡೆ ನಿರ್ದಿಷ್ಟ ಪ್ರಶ್ನೆಗಳ ಮೇಲೆ ಈ ಒಗ್ಗಟ್ಟಿನ ಕಾರ್ಯಾಚರಣೆ ಒಂದು ಸಂಯುಕ್ತ ಪ್ರತಿರೋಧವನ್ನು ಹೇಗೆ ಕಟ್ಟಬಹುದು ಎಂಬುದಕ್ಕೆ ಮಾದರಿಯಂತಿದೆ.

ಆದರೆ, ಸಂಸತ್ತಿನ ಹೊರಗಡೆ ಸಂಯುಕ್ತ ಪ್ರತಿಪಕ್ಷದ ನಾಯಕತ್ವ ಚಲಾಯಿಸುವ ಮಮತಾ ಬ್ಯಾನರ್ಜಿ ಮತ್ತು ಟಿಎಂಸಿ ಪ್ರಯತ್ನಗಳಿಗೆ ಫಲ ಸಿಗದು. ನಾಯಕತ್ವ ವಹಿಸಬೇಕೆಂಬ ಕಾಂಗ್ರೆಸ್ ಪಕ್ಷದ ಆಕಾಂಕ್ಷೆ ಕೂಡ ಹಾಗೆಯೇ ವಿಫಲವಾಗಿದೆ.

ನಿರಂತರವಾದ ಐಕ್ಯ ಹೋರಾಟವೊಂದು ಏನನ್ನು ಸಾಧಿಸಬಹುದು ಎನ್ನುವುದನ್ನು ರೈತರ ಚಳವಳಿ ತೋರಿಸಿಕೊಟ್ಟಿದೆ. ಪ್ರತಿಪಕ್ಷಗಳು ಅದರಿಂದ ಸೂಕ್ತ ಪಾಠ ಕಲಿಯಬೇಕು. ಅಖಿಲ ಭಾರತ ಮಟ್ಟದಲ್ಲಿ ಒಬ್ಬ 'ನಾಯಕ'ರೊಂದಿಗೆ ಸರ್ವೋದ್ದೇಶಗಳ ಐಕ್ಯತೆ ಕೆಲಸ ಮಾಡದು. ದುಡಿಯುವ ಜನಗಳ ವಿವಿಧ ವಿಭಾಗಗಳ ಸಂಯುಕ್ತ ಕಾರ್ಯಾಚರಣೆಗಳಿಂದ ಮಾತ್ರವೇ ವಿಶಾಲ ಏಕತೆಯನ್ನು ಬೆಸೆಯಬಹುದಾಗಿದೆ. ಇದರೊಂದಿಗೇ ಹಿಂದುತ್ವ ಸರ್ವಾಧಿಕಾರಶಾಹೀ ಆಳ್ವಿಕೆಗೆ ಪರ್ಯಾಯ ನೀತಿಗಳು ಹಾಗೂ ರಾಜಕೀಯವನ್ನು ಮುಂದಿಡುವ ಮೂಲಕ, ಇದರ ಸುತ್ತ ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳನ್ನು ಅಣಿನೆರೆಯಿಸಲು ಸಾಧ್ಯವಾಗಬೇಕು.

ಅನು: ವಿಶ್ವ




ವ್ಯಂಗ್ಯಚಿತ್ರ: ಸತೀಶ ಆಚಾರ್ಯ



ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್

ಸಾಮ್ರಾಜ್ಯಶಾಹಿಯ ಮೇಲೆ ರೈತಾಪಿಯ ವಿಜಯ



ರೈತರು ಪ್ರದರ್ಶಿಸಿದ ಅಪ್ರತಿಮ ದೃಢನಿಶ್ಚಯದ ಎದುರಿನಲ್ಲಿ ಮೋದಿ ಸರ್ಕಾರವು ತಲೆಬಾಗಿತು ಎಂದು ಒಂದು ಮಟ್ಟದಲ್ಲಿ ಹೇಳಲಾಗುತ್ತಿದ್ದರೆ, ಮತ್ತೊಂದು ಮಟ್ಟದಲ್ಲಿ, ಇದನ್ನು ನವ-ಉದಾರವಾದ ನೀತಿಗಳಿಗೆ ಎದುರಾದ ಒಂದು ಹಿನ್ನಡೆ ಎಂದು ನೋಡಲಾಗಿದೆ.ಈ ಎರಡೂ ಮಟ್ಟಗಳ ಗ್ರಹಿಕೆಗಳಾಚೆಗೆ, ಮೂರನೆಯ ಮಟ್ಟದ ಒಂದು ಗ್ರಹಿಕೆಯೂ ಇದೆ. ಅದೇಂದರೆ, ಇದು ಅತ್ಯಂತ ಮೂಲಭೂತ ಅರ್ಥದಲ್ಲಿ ಸಾಮ್ರಾಜ್ಯಶಾಹಿಯನ್ನು ಹಿಮ್ಮೆಟ್ಟಿಸಿದೆ ಎಂಬುದು. ಒಂದು ಇಡೀ ವರ್ಷ ದೆಹಲಿಯ ಗಡಿ ಭಾಗಗಳಲ್ಲಿ ಬಿಡಾರ ಹೂಡಿದ ರೈತರು, ಇಂಥಹ ಒಂದು ಅದ್ಭುತ ಸಾಧನೆಯನ್ನು ಹೇಗೆ ಸಾಧಿಸಿದರು ಎಂಬುದನ್ನು ಸಂಶೋಧಕರು ಭವಿಷ್ಯದಲ್ಲಿ ಬಯಲು ಮಾಡುವುದರಲ್ಲಿ ಸಂದೇಹವಿಲ್ಲ. ಇದು, ಸಂಭ್ರಮಿಸಬೇಕಾದ ಸಾಧನೆಯೇ, ಆಚರಿಸಬೇಕಾದ ಸಾಧನೆಯೇ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ವೆಂ ಲ್ಲೋಟದಲ್ಲಿ ಕೆಲವು ಸಮರಗಳು ಸಾಧಾರಣವೆಂಬಂತೆ ಕಂಡರೂ ಸಹ, ಅವು ಅಪಾರ ಮಹತ್ವವನ್ನು ಹೊಂದಿರುತ್ತವೆ. ಆ ಮಹತ್ವವನ್ನು ಆ ಸಮರಗಳನ್ನು ಆರಂಭಿಸಿದ ಸಮಯದಲ್ಲಿ ಅದರಲ್ಲಿ ಭಾಗವಹಿಸಿದ್ದ ಯೋಧರೂ ಸಹ ಊಹಿಸಿರಲಾರರು. ಅಂಥಹವುಗಳಲ್ಲಿ ಒಂದು, ಪ್ಲಾಸಿ ಕದನ. ಅದು ಒಂದು ಕದನ ಆಗಿರಲಿಲ್ಲ. ಏಕೆಂದರೆ, ಒಂದು ಕಡೆಯ ಸೇನಾಪತಿ, ಇನ್ನೊಂದು ಕಡೆಯ ಸೇನಾಪತಿಗೆ ಲಂಚ ಕೊಟ್ಟು ಆತ ತಮ್ಮ ವಿರುದ್ಧ ತನ್ನ ಸೈನ್ಯವನ್ನು ಮುನ್ನಡೆಸದಿರುವ ವ್ಯವಸ್ಥೆ ಮಾಡಿಕೊಂಡ. ಆದರೂ ಆ ದಿನ ಪ್ಲಾಸಿಯ ಅರಣ್ಯದಲ್ಲಿ ಏನು ನಡೆಯಿತೋ ಅದು ವಿಶ್ವ ಇತಿಹಾಸದಲ್ಲಿ ಒಂದು ಹೊಸ ಯುಗಕ್ಕೆ ನಾಂದಿ ಹಾಡಿತು.

ರೈತರ ಆಂದೋಲನ ಮತ್ತು ಮೋದಿ ಸರ್ಕಾರದ ನಡುವಿನ ಸಮರವೂ ಸಹ ಒಂದು ಹೊಸ ಯುಗಕ್ಕೆ ನಾಂದಿ ಹಾಡುವ ಪರಂಪರೆಗೆ ಸೇರುತ್ತದೆ. ಹೆಚ್ಚು ಎದ್ದು ಕಾಣುವ ಮಟ್ಟದಲ್ಲಿ, ಚಳುವಳಿ-ನಿರತ ರೈತರು ಪ್ರದರ್ಶಿಸಿದ ಅಪ್ರತಿಮ ದೃಢನಿಶ್ಚಯದ ಎದುರಿನಲ್ಲಿ ಮೋದಿ ಸರ್ಕಾರವು ತಲೆಬಾಗಿತು ಎಂದು ಕಂಡುಬರುತ್ತದೆ. ಮತ್ತೊಂದು ಮಟ್ಟದಲ್ಲಿ, ಇದನ್ನು ನವ-ಉದಾರವಾದ ನೀತಿಗಳಿಗೆ ಎದುರಾದ ಒಂದು ಹಿನ್ನಡೆ ಎಂದು ನೋಡಲಾಗಿದೆ. ಹಿನ್ನಡೆ ಏಕೆಂದರೆ, ನವ-ಉದಾರವಾದಿ ಕಾರ್ಯಸೂಚಿಯ ನಿರ್ಣಾಯಕ ಭಾಗವಾಗಿ ರೈತ ಕೃಷಿಯನ್ನು ಕಾರ್ಪೊರೇಟ್‌ಗಳಿಗೆ ಅಧೀನಗೊಳಿಸುವ ಮೂಲಕ ಕೃಷಿ ವಲಯದ ಮೇಲೆ ಕಾರ್ಪೊರೇಟ್‌ಗಳು ಪ್ರಾಬಲ್ಯ ಹೊಂದುವುದನ್ನು ಉತ್ತೇಜಿಸವುದೇ ಕೃಷಿ ಕಾನೂನುಗಳ ಉದ್ದೇಶವಾಗಿತ್ತು. ಈ ಕಾನೂನುಗಳನ್ನು ರದ್ದುಗೊಳಿಸಿದ್ದರಿಂದಾಗಿ ಈ ಪ್ರಯತ್ನಕ್ಕೆ ಹಿನ್ನಡೆಯಾಗಿದೆ.

ಈ ಎರಡೂ ಮಟ್ಟಗಳ ಗ್ರಹಿಕೆಗಳು ಸಂಪೂರ್ಣವಾಗಿ ಸರಿಯಾಗಿವೆ. ಆದರೆ ಇವುಗಳಾಚೆಗೆ, ಮೂರನೆಯ ಮಟ್ಟದ ಒಂದು ಗ್ರಹಿಕೆಯೂ ಇದೆ. ರೈತರ ವಿಜಯವು ಹೆಚ್ಚಿನ ಮಹತ್ವ ಹೊಂದಿದ್ದರೂ ಅದರ ಬಗ್ಗೆ ಗಮನ ಹರಿದಿಲ್ಲ. ಇದು ಅತ್ಯಂತ ಮೂಲಭೂತ ಅರ್ಥದಲ್ಲಿ ಸಾಮ್ರಾಜ್ಯಶಾಹಿಯನ್ನು ಹಿಮ್ಮೆಟ್ಟಿಸಿದೆ ಎಂಬುದಕ್ಕೆ ಸಂಬಂಧಿಸಿದೆ. ಈ ಕಾರಣದಿಂದಾಗಿಯೇ, ಪಾಶ್ಚಾತ್ಯ ಮಾಧ್ಯಮಗಳು ರೈತರಿಗೆ ತಲೆಬಾಗಿದ ಮೋದಿ ಸರ್ಕಾರವನ್ನು ಕಟುವಾಗಿ ಟೀಕಿಸಿವೆ. ಈ ಬಗ್ಗೆ ಆಶ್ಚರ್ಯಪಡಬೇಕಾದ್ದಿಲ್ಲ.

ಯಾವ ರೀತಿಯಲ್ಲಿ ಸಾಮ್ರಾಜ್ಯಶಾಹಿಯು ಜಗತ್ತಿನ ಪಳೆಯುಳಿಕೆ ಇಂಧನಗಳ ಎಲ್ಲಾ ಮೂಲಗಳನ್ನೂ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಬಯಸುತ್ತದೆಯೋ, ಜಗತ್ತಿನ ಆಹಾರ ಮತ್ತು ಕಚ್ಚಾ ವಸ್ತುಗಳ ಎಲ್ಲಾ ಮೂಲಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತದೆಯೋ, ಅದೇ ರೀತಿಯಲ್ಲಿ, ಜಗತ್ತಿನ ಭೂ-ಬಳಕೆಯ ಮಾದರಿಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ಬಯಸುತ್ತದೆ. ಅದರಲ್ಲೂ ವಿಶೇಷವಾಗಿ, ಮೂರನೇ ಜಗತ್ತಿನ ಉಷ್ಣವಲಯದಲ್ಲಿ ಮತ್ತು ಅದರ ಸಮೀಪದ ಪ್ರದೇಶಗಳ ಭೂ-ಬಳಕೆಯ ಮಾದರಿಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ಬಯಸುತ್ತದೆ, ಏಕೆಂದರೆ, ಈ ಪ್ರದೇಶಗಳಲ್ಲಿ ತೆಗೆಯುವ ಬೆಳೆಗಳನ್ನು ಮೆಟ್ರೋಪಾಲಿಟನ್(ಮಹಾನಗರೀಯ) ಬಂಡವಾಳಶಾಹಿಯು ನೆಲೆಗೊಂಡಿರುವ ಸಮಶೀತೋಷ್ಣ ಪ್ರದೇಶಗಳಲ್ಲಿ ಬೆಳೆಯಲು ಸಾಧ್ಯವಿಲ್ಲ.

ಮಹಾನಗರೀಯರಿಗೆ ತಮ್ಮ ಸ್ವಂತ ಲಾಭಕ್ಕಾಗಿ ವಿಶ್ವಾದ್ಯಂತ ಭೂ-ಬಳಕೆಯನ್ನು ನಿಯಂತ್ರಿಸುವುದಕ್ಕಾಗಿ ಒಂದು ಉತ್ತಮ ಸಾಧನವನ್ನು ವಸಾಹತುಶಾಹಿಯು ನೀಡಿತ್ತು. ಈ ಸಾಧನವನ್ನು ಭಾರತದಂತಹ ದೇಶದಲ್ಲಿ ಲಜ್ಜೆಗೆಟ್ಟ ರೀತಿಯಲ್ಲಿ ಬಳಸಲಾಯಿತು. ವಸಾಹತುಶಾಹಿ ಸರ್ಕಾರದ ಆದಾಯವನ್ನು (ಅಂದರೆ, ಭೂ ಕಂದಾಯವನ್ನು) ರೈತರು ಒಂದು ನಿಗದಿತ



ಸಮಯದೊಳಗೆ ತುಂಬಬೇಕಿತ್ತು. ತಪ್ಪಿದರೆ, ಅವರ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳುತ್ತಿತ್ತು. ಹಾಗಾಗಿ, ಸಕಾಲದಲ್ಲಿ ಕಂದಾಯ ಕಟ್ಟುವ ಸಲುವಾಗಿ ರೈತರು ವ್ಯಾಪಾರಿಗಳಿಂದ ಮುಂಗಡ ಹಣ ಪಡೆಯುತ್ತಿದ್ದರು. ಈ ಸಾಲವನ್ನು ತೀರಿಸುವ ಸಲುವಾಗಿ ವ್ಯಾಪಾರಿಗಳು ಬಯಸಿದ ಬೆಳೆಗಳನ್ನು ಬೆಳೆದು, ಮೊದಲೇ ಮಾಡಿಕೊಂಡ ಕರಾರು-ಬೆಲೆಯ ಪ್ರಕಾರ ಅವುಗಳನ್ನು ಮಾರುತ್ತಿದ್ದರು. ಈ ವ್ಯಾಪಾರಿಗಳು, ಮಹಾನಗರಗಳಲ್ಲಿ ಯಾವ ಯಾವ ಬೆಳೆಗಳಿಗೆ ಹೆಚ್ಚು ಬೇಡಿಕೆ ಬರುತ್ತಿತ್ತೋ ಅಂಥಹ ಬೆಳೆಗಳನ್ನೇ ಬೆಳೆಯುವಂತೆ ನಿರ್ದೇಶಿಸುತ್ತಿದ್ದರು. ಅಥವಾ, ಈಸ್ಟ್ ಇಂಡಿಯಾ ಕಂಪನಿಯ ಆಫೀಮು ಏಜೆಂಟರುಗಳ ರೀತಿಯಲ್ಲಿ ರೈತರನ್ನು, ಅವರು ಯಾವ ಬೆಳೆ ತೆಗೆಯಲು ಮುಂಗಡ ಪಡೆದಿದ್ದರೋ ಅದೇ ಬೆಳೆಯನ್ನೇ ಬೆಳೆಯುವಂತೆ ನಿರ್ಬಂಧಿಸುತ್ತಿದ್ದರು.

ಈ ರೀತಿಯಲ್ಲಿ, ಇಂಡಿಗೊ(ನೀಲಿ), ಅಫೀಮು ಮತ್ತು ಹತ್ತಿಯಂತಹ ಬೆಳೆಗಳನ್ನು ಅವುಗಳನ್ನು ಹಿಂದೆಂದೂ ಬೆಳೆಯದ ಪ್ರದೇಶಗಳಲ್ಲಿ ಬೆಳೆಯುವಂತೆ ಹಾಗೂ ಆಹಾರ ಧಾನ್ಯಗಳ ಉತ್ಪಾದನೆಯನ್ನು ಬದಲಾಯಿಸುವಂತೆ ಒತ್ತಡ ಹಾಕುವ ಮೂಲಕ ಭೂ-ಬಳಕೆಯನ್ನು ಮೆಟ್ರೊಪೊಲಿಟನ್ ಶಕ್ತಿಗಳು ನಿಯಂತ್ರಿಸುತ್ತಿದ್ದವು ಮತ್ತು ರೈತರ ಈ ಉತ್ಪನ್ನಗಳು ಅವುಗಳಿಗೆ ಪುಕ್ಕಟೆಯೇ ಲಭ್ಯವಾಗುತ್ತಿದ್ದವು. ಹೇಗೆಂದರೆ, ರೈತರು ಕಂದಾಯವಾಗಿ ಅರ್ಪಿಸಿದ ಹಣದಿಂದಲೇ ವಸಾಹತುಶಾಹಿಯು ಈ ಉತ್ಪನ್ನಗಳನ್ನು ಕೊಳ್ಳುತ್ತಿತ್ತು. ಅಷ್ಟೇ ಅಲ್ಲ. ವಸಾಹತುಶಾಹಿ ದೇಶಗಳು ತಮ್ಮ ತಮ್ಮ ವಸಾಹತುಗಳಿಂದ ಹೊತ್ತೊಯ್ಯುತ್ತಿದ್ದ ಸರಕುಗಳನ್ನು ತಮ್ಮ ತಮ್ಮ ಅಗತ್ಯಗಳನ್ನು ಪೂರೈಸಿಕೊಂಡ ನಂತರ ಬೇರೆ ಬೇರೆ ದೇಶಗಳಿಗೆ ಮಾರುತ್ತಿದ್ದವು ಮಾತ್ರವಲ್ಲ, ತ್ರಿಕೋನ ವ್ಯಾಪಾರದ ಮೂಲಕ ತಮ್ಮ ವ್ಯಾಪಾರದ ಕೊರತೆಗಳನ್ನೂ ಇತ್ಯರ್ಥಪಡಿಸಿಕೊಳ್ಳುತ್ತಿದ್ದವು. ಒಂದು ಉದಾಹರಣೆಯಾಗಿ ಹೇಳುವುದಾದರೆ, ಚೀನಾದಿಂದ ಚಹಾ, ಪಿಂಗಾಣಿ ಮತ್ತಿತರ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಬ್ರಿಟನ್ ಆಮದು ಮಾಡಿಕೊಂಡದ್ದರಿಂದಾಗಿ, ಅದು ಚೀನಾದೊಂದಿಗೆ ವ್ಯಾಪಾರದ ಕೊರತೆ (ಪಾವತಿ ಶೇಷ) ಸಮಸ್ಯೆಯನ್ನು ಎದುರಿಸುತ್ತಿತ್ತು. ಈ ಸಮಸ್ಯೆಯನ್ನು ಆ ದೇಶದೊಂದಿಗೆ ಬಗೆಹರಿಸಿಕೊಳ್ಳಲು, ಬ್ರಿಟನ್, ಭಾರತದ ರೈತರನ್ನು ಬಲವಂತಪಡಿಸಿ ಬೆಳೆಸಿದ ಅಫೀಮನ್ನು ಚೀನಾಕ್ಕೆ ರಫ್ತು ಮಾಡಿ, ಬಲವಂತ-ಪುಸಲಾವಣೆಗಳ ಮೂಲಕ ಅವರು ಆ ಅಫೀಮನ್ನು ಸೇವಿಸುವಂತೆ ಮಾಡಿ, ಆ ಮೂಲಕ ಗಳಿಸಿದ ಹಣವನ್ನು ತನ್ನ ವ್ಯಾಪಾರದ ಕೊರತೆ ಸಮಸ್ಯೆಯನ್ನು ಇತ್ಯರ್ಥಪಡಿಸಿಕೊಳ್ಳಲು ಬಳಸಿಕೊಳ್ಳುತ್ತಿತ್ತು. ರೈತರ ನಿರ್ದಯ ಶೋಷಣೆಯ ಬಗ್ಗೆ ಹತ್ತೊಂಬತ್ತನೇ ಶತಮಾನದ ಅನೇಕ ಬಂಗಾಳಿ ಕಾದಂಬರಿಗಳು ಮತ್ತು ನಾಟಕಗಳು ಮನೋಜ್ಞವಾಗಿ ಚಿತ್ರಿಸಿವೆ. ದಿನಬಂಧು ಮಿತ್ರ ಅವರ 'ನೀಲ್ ದರ್ಪಣ್' ಎಂಬ ಬಂಗಾಳಿ ನಾಟಕದಲ್ಲಿ ಇಂಡಿಗೊ ಬೆಳೆಗಾರರ ದುಃಸ್ಥಿತಿಯು ಎಷ್ಟು ವಾಸ್ತವಿಕವಾಗಿ ಸೆರೆಹಿಡಿಯಲ್ಪಟ್ಟಿತ್ತು ಎಂದರೆ, ನಾಟಕ ಪ್ರದರ್ಶನಗೊಳ್ಳುತ್ತಿರುವಾಗ ಪ್ರೇಕ್ಷಕರಲ್ಲಿ ಒಬ್ಬರಾಗಿದ್ದ ಮಹಾನ್ ಸಮಾಜ ಸುಧಾರಕ ಈಶ್ವರಚಂದ್ರ ವಿದ್ಯಾಸಾಗರ್ ಅವರಂಥಹ ವ್ಯಕ್ತಿಯೂ ಸಹ, ಪ್ಲಾಂಟರ್- ವ್ಯಾಪಾರಿಯ ಪಾತ್ರವನ್ನು ನಿರ್ವಹಿಸುತ್ತಿದ್ದ ನಟನ ಮೇಲೆ ಕೋಪದಿಂದ ತನ್ನ ಚಪ್ಪಲಿಗಳನ್ನು ಎಸೆದಿದ್ದರು!

ರೈತರಿಂದ ಸಮಯಕ್ಕೆ ಸರಿಯಾಗಿ ಮತ್ತು ಕಟ್ಟು ನಿಟ್ಟಾಗಿ ಕಂದಾಯ ವಸೂಲು ಮಾಡುವ, ವ್ಯಾಪಾರಿಗಳಿಗೆ ಮುಂಗಡ ನೀಡಿ ಇಂಥದ್ದೇ ಬೆಳೆ ಬೆಳೆಯಬೇಕೆಂದು ಪ್ರಭಾವ ಬೀರುವ ಮತ್ತು ರೈತರು ಸಂದಾಯಮಾಡಿದ ಕಂದಾಯದ ಹಣವನ್ನೇ ಅವರ ಬೆಳೆಗಳನ್ನು ಖರೀದಿಸಲು ಉಪಯೋಗಿಸಿಕೊಳ್ಳುತ್ತಿದ್ದ ಕಾರ್ಯವಿಧಾನವು ಇನ್ನು ಮುಂದೆ ಮೆಟ್ರೊಪಾಲಿಟನ್‌ಗೆ ಲಭ್ಯವಿಲ್ಲ ಮತ್ತು ಸಾಧ್ಯವೂ ಇಲ್ಲ. ಏಕೆಂದರೆ, ಸ್ವಾತಂತ್ರ್ಯಾನಂತರದ ನಿಯಂತ್ರಣ ನೀತಿಗಳ (ಡಿರಿಜಿಸ್ಟ್) ಆಡಳಿತವು ಆಹಾರ ಧಾನ್ಯಗಳಿಗೆ ಬೆಲೆ-ಬೆಂಬಲ ಒದಗಿಸುವ ಮೂಲಕ ರೈತ ಕೃಷಿಗೆ ನೀಡಿದ ರಕ್ಷಣೆಯು, ರೈತರು ತಾವು ಇಂಥದ್ದೇ ಬೆಳೆಗಳನ್ನು ಬೆಳೆಯಬೇಕೆಂದು ಮೆಟ್ರೊಪಾಲಿಟನ್‌ಗಳು ಮಾಡುತ್ತಿದ್ದ ಹುಕುಂಗಳನ್ನು ನಿರ್ಲಕ್ಷಿಸುವಂತೆ ಮಾಡಿದೆ.

ಮೆಟ್ರೊಪಾಲಿಟನ್‌ಗೆ ಪ್ರಸ್ತುತದಲ್ಲಿ ಆಹಾರ ಧಾನ್ಯಗಳ ಅಗತ್ಯವಿಲ್ಲ. ಆದರೆ, ರೈತರು ಆಹಾರ ಧಾನ್ಯಗಳ ಉತ್ಪಾದನೆಯಿಂದ ದೂರ ಸರಿದು ಅವರಿಗೆ ಬೇಕಾದ ಬೆಳೆಗಳನ್ನೇ ಉತ್ಪಾದಿಸುವುದು ಈಗ ಸಾಧ್ಯವಿಲ್ಲ, ಏಕೆಂದರೆ, ಸರ್ಕಾರವು ಆಹಾರ ಧಾನ್ಯಗಳನ್ನು ಮೊದಲೇ ಘೋಷಿಸಿದ ಖಚಿತ ಬೆಲೆಗಳಲ್ಲಿ ಸಂಗ್ರಹಿಸುತ್ತದೆ. ವಿತ್ತೀಯ ಮಿತವ್ಯಯದ ಮೂಲಕ ದುಡಿಯುವ ಜನರ ಆದಾಯವನ್ನು ಕುಗ್ಗಿಸಿ ಆ ಮೂಲಕ ಆಹಾರ ಧಾನ್ಯಗಳ ದೇಶೀಯ ಬೇಡಿಕೆಯನ್ನು ತಗ್ಗಿಸುವ ನವ-ಉದಾರವಾದಿ ಕಾರ್ಯಸೂಚಿಯು ಈ ಪರಿಸ್ಥಿತಿಯಲ್ಲಿ ಸಾಮ್ರಾಜ್ಯಶಾಹಿಗೆ ಉಪಯೋಗಕ್ಕೆ ಬರುತ್ತಿಲ್ಲ. ಏಕೆಂದರೆ, ಈ ಕ್ರಮವು ಅತ್ತ, ಆಹಾರ ಧಾನ್ಯಗಳ ಉತ್ಪಾದನೆಯನ್ನು ಕಡಿಮೆ ಮಾಡದೆ, ಇತ್ತ, ಭೂ ಬಳಕೆಯ ಮಾದರಿಯನ್ನೂ ಬದಲಾಯಿಸದೆ, ಸರ್ಕಾರದ ಧಾನ್ಯ ಸಂಗ್ರಹ-ದಾಸ್ತಾನುಗಳಿಗೆ ಕಾರಣವಾಗುತ್ತದೆ. ಹಾಗಾಗಿ, ಸಾಮ್ರಾಜ್ಯಶಾಹಿಗೆ ಈಗ ಬೇಕಾಗಿರುವುದು, ಬೆಲೆ-ಬೆಂಬಲದ ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ರದ್ದುಗೊಳಿಸುವುದು. ಅದರ ಜೊತೆಗೆ, ರೈತರ ಬೆಳೆ ಬೆಳೆಯುವ ನಿರ್ಧಾರಗಳ ಮೇಲೆ ಪ್ರಭಾವ ಬೀರುವಂಥಹ ಒಂದು ಪರ್ಯಾಯ ವ್ಯವಸ್ಥೆಯನ್ನು ಆರಂಭಿಸುವುದು.

ಈ ಪರ್ಯಾಯ ವ್ಯವಸ್ಥೆಯ ಭಾಗವಾಗಿ, (ಅಂದರೆ, ಸಾಮ್ರಾಜ್ಯಶಾಹಿಯ ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶದ ಭಾಗವಾಗಿ), ಮೋದಿ ಸರ್ಕಾರವು ಮೂರು ಕೃಷಿ ಕಾನೂನುಗಳನ್ನು ಜಾರಿಗೆ ತಂದಿತು. ಹೇಳುವುದು ಒಂದು ಮಾಡುವುದು ಮತ್ತೊಂದು ಎನ್ನುವಂತೆ "ಅತಿರೇಕದ-ರಾಷ್ಟ್ರವಾದ"ದ ಮಾತುಗಾರಿಕೆಯ ಮೂಲಕ ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸಿತು. ಸರ್ಕಾರವು ಕೃಷಿಯ ಕಾರ್ಪೊರೇಟೀಕರಣಕ್ಕೆ ನಾಂದಿ ಹಾಡಬಯಸಿತ್ತು. ತನ್ಮೂಲಕ ಭೂ-ಬಳಕೆಯ ಮೇಲೆ ಮೆಟ್ರೊಪಾಲಿಟನ್ ನಿಯಂತ್ರಣವನ್ನು ಸ್ಥಾಪಿಸುವುದಾಗಿತ್ತು: ಮಾರುಕಟ್ಟೆಯ ಸನ್ನೆ-ಸಂಕೇತಗಳನ್ನು ಪಡೆದ ಕಾರ್ಪೊರೇಟ್‌ಗಳು ರೈತರಿಗೆ ಇಂಥಹ ಬೆಳೆಗಳನ್ನೇ ಬೆಳೆಯುವಂತೆ ಸೂಚಿಸುತ್ತಿದ್ದವು. ಅಂದರೆ, ಮೂರನೇ ಜಗತ್ತಿನ ಭೂ-ಬಳಕೆಯನ್ನು ಮೆಟ್ರೊಪಾಲಿಟನ್ ಬೇಡಿಕೆಗಳಿಗೆ ಹೊಂದಿಕೊಳ್ಳುವಂತೆ ಮಾಡುವುದಾಗಿತ್ತು. ಸಾಮ್ರಾಜ್ಯಶಾಹಿಯು ಈ ಗುರಿಯನ್ನು ಸಾಧಿಸುವ ಸಲುವಾಗಿ, ಸರ್ಕಾರವು ಬೆಲೆ-ಬೆಂಬಲ ಪದ್ಧತಿಯನ್ನು ಬೆಂಬಲಿಸದಿರುವುದು ರೈತರಿಗೆ ಎಷ್ಟು ಒಳ್ಳೆಯದಾಗಬಲ್ಲದು ಎನ್ನುವ ಧಾಟಿಯಲ್ಲಿ ಅಕೆಡೆಮಿಕ್(ಅಧ್ಯಯನ ರಂಗದ) ಮತ್ತು ಮಾಧ್ಯಮಗಳ ತನ್ನ ಅನುಯಾಯಿಗಳು ಟಾಮ್-ಟಾಮ್ ಹೊಡೆಯುವಂತೆ ಮಾಡಿದ ಕ್ರಮವೂ ಸೇರಿದಂತೆ ಲಭ್ಯವಿದ್ದ ಎಲ್ಲಾ ಮಾರ್ಗಗಳನ್ನೂ ಬಳಸಿತು. ಆದರೂ, ವಿಫಲವಾಯಿತು.

ಈ ಮೂರು ಕಾನೂನುಗಳ ವಿರುದ್ಧ ರೈತರು ಒಡ್ಡಿದ ಪ್ರಬಲ ಪ್ರತಿರೋಧವು ಅಂತಿಮವಾಗಿ ಮೋದಿ ಸರ್ಕಾರವನ್ನು ಶರಣಾಗುವಂತೆ ಮಾಡಿತು. ಆದರೆ ಬರಿಯ ಕಾನೂನುಗಳನ್ನಷ್ಟೇ ಹಿಂತೆಗೆದುಕೊಂಡಾಗ ತಾನೇ ತಾನಾಗಿ ಯಥಾಸ್ಥಿತಿ ಮರಳುವುದಿಲ್ಲ. ಈ ಕಾರಣದಿಂದಾಗಿಯೇ ರೈತರು, ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಪದ್ಧತಿಯನ್ನು ಶಾಸನಬದ್ಧಗೊಳಿಸುವಂತೆ ಪಟ್ಟು ಹಿಡಿದಿರುವುದು. ಮೂರು ಕಾನೂನುಗಳನ್ನು ರದ್ದುಗೊಳಿಸಿದ ನಂತರ, ಧಾನ್ಯಗಳ ಮಾರಾಟವು, ಒಂದು ವೇಳೆ, ನಿರ್ದಿಷ್ಟಪಡಿಸಿದ ಮೊದಲಿನ ಸ್ಥಳಗಳಲ್ಲೇ ಜರುಗಿದರೂ ಸಹ, ಅಂದರೆ, ಮಂಡಿಗಳಲ್ಲಿ ಧಾನ್ಯಗಳ ಮಾರಾಟದ ಇಡೀ ಪ್ರಕ್ರಿಯೆಯನ್ನು ಸರ್ಕಾರದ ಪ್ರತಿನಿಧಿಗಳು ಮೇಲ್ವಿಚಾರಣೆ ಮಾಡಿದರೂ ಸಹ, ಎಂಎಸ್‌ಪಿ ಪದ್ಧತಿ ಮುಂದುವರಿಯದ ಹೊರತು, ರೈತರಿಗೆ ತಮ್ಮ ಖರ್ಚು-ವೆಚ್ಚಗಳ ಜೊತೆಗೆ ಒಂದಿಷ್ಟು ನಿರ್ದಿಷ್ಟ ಲಾಭ ನೀಡುವಂಥಹ ಒಂದು ಕನಿಷ್ಠ ಬೆಲೆಯನ್ನು ಖಚಿತಪಡಿಸಿಕೊಳ್ಳುವ ವಿಧಾನವೇ ಇಲ್ಲ.

ಈ ಅಂಶವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಮಂಡಿಗಳ ಹೊರಗಿನ ಸ್ಥಳಗಳಲ್ಲಿ ಧಾನ್ಯ ಮಾರುಕಟ್ಟೆಯ ಅವಕಾಶವನ್ನು ಕಲ್ಪಿಸಿಕೊಟ್ಟಾಗ (ಈ ವ್ಯವಸ್ಥೆಯಲ್ಲಿ ಸರ್ಕಾರದ ಮೇಲ್ವಿಚಾರಣೆ ಇರುವುದಿಲ್ಲ), ಒಂದು ವೇಳೆ ಎಂಎಸ್‌ಪಿಯ ಘೋಷಣೆಯನ್ನು ಔಪಚಾರಿಕವಾಗಿ ಮುಂದುವರಿಸಿದರೂ ಸಹ, ಎಂಎಸ್‌ಪಿಯನ್ನು ಜಾರಿಗೊಳಿಸಲು ಸಾಧ್ಯವಿಲ್ಲ ಎಂದಾಗುತ್ತದೆ. ಇದನ್ನು ತಿರುಗು ಮುರುಗು ಮಾಡಿದರೂ ಸಹ ಸರಿಯಾಗುವುದಿಲ್ಲ: ಸರ್ಕಾರದ ಮೇಲ್ವಿಚಾರಣೆಯನ್ನು ಕಡ್ಡಾಯಗೊಳಿಸಿದಾಕ್ಷಣ, ಎಂಎಸ್‌ಪಿ ಪದ್ಧತಿ ಮರಳುವುದಿಲ್ಲ. ಒಂದು ಹೊಸ ಎಂಎಸ್‌ಪಿ ಆಳ್ವಿಕೆಯನ್ನು ಕಾನೂನುಬದ್ಧವಾಗಿಯೇ ಸ್ಥಾಪಿಸಬೇಕಾಗುತ್ತದೆ. ಎಂಎಸ್‌ಪಿಯನ್ನು ಕಾನೂನುಬದ್ಧಗೊಳಿಸಿದಾಗ, ಮತ್ತೊಂದು ಸರ್ಕಾರವು ಬಯಸಿದರೂ ಕೂಡ ಅದನ್ನು ಗಾಳಿಗೆ ತೂರಲು ಬರುವುದಿಲ್ಲ. ಆದ್ದರಿಂದಲೇ, ಎಂಎಸ್‌ಪಿಯನ್ನು ಕಾನೂನುಬದ್ಧಗೊಳಿಸುವಂತೆ ಪುಟ 14 ನೋಡಿ

ಸಾಮ್ರಾಜ್ಯಶಾಹಿಯ ಮೇಲೆ ರೈತಾಪಿಯ ವಿಜಯ

ಪುಟ 13 ರಿಂದ

ರೈತರು ಒತ್ತಾಯಿಸುತ್ತಿರುವುದು.

ಬಿಜೆಪಿ ಸರ್ಕಾರದ ವಿತಂಡವಾದ ಮತ್ತು ಅನ್ಯಾಯವನ್ನೇ ನ್ಯಾಯವೆಂದು ಸಾಧಿಸುವ ಕುಯುಕ್ತಿಗಳನ್ನು ಗಮನಿಸಿದರೆ, ಎಂಎಸ್‌ಪಿಯನ್ನು ಕಾನೂನುಬದ್ಧಗೊಳಿಸುವ ಕೆಲಸವನ್ನು ಆದಷ್ಟು ಬೇಗ ಮಾಡಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಮೂರು ಕೃಷಿ ಕಾನೂನುಗಳನ್ನು ಔಪಚಾರಿಕವಾಗಿ ರದ್ದುಗೊಳಿಸಿದರೂ ಸಹ, ಅದು ಇತರ ವಿಧಾನಗಳ ಮೂಲಕ ಅದೇ ಗುರಿ ಸಾಧಿಸುವ ಪ್ರಯತ್ನವನ್ನು ಮುಂದುವರಿಸಬಹುದು.

ಎಲ್ಲಿಯವರೆಗೆ ಅಂತಹ ದುಸ್ಸಾಹಸಗಳನ್ನು ದೂರವಿಡುವುದು ಸಾಧ್ಯವೋ ಅಲ್ಲಿಯವರೆಗೆ ರೈತರು ಈ ನಿರ್ಣಾಯಕ ಯುದ್ಧವನ್ನು – ದೇಶದ ಉಷ್ಣವಲಯದ ಮತ್ತು ಉಪೋಷ್ಣವಲಯದ ಗಣನೀಯ ಭೂಪ್ರದೇಶವನ್ನು ಸಾಮ್ರಾಜ್ಯಶಾಹಿಯ ನಿಯಂತ್ರಣದಿಂದ ದೂರವಿಡುವ ಯುದ್ಧವನ್ನು – ಗೆದ್ದಿದ್ದಾರೆ ಎಂದೇ ತಿಳಿಯಬಹುದು. ಈ ವಿಜಯದ ಎರಡು ಲಕ್ಷಣಗಳತ್ತ ವಿಶೇಷವಾಗಿ ಗಮನ ಹರಿಸಬೇಕಾಗಿದೆ.

ಮೊದಲನೆಯದು, ನವ–ಉದಾರವಾದವು ಜನರ ಸಾಮೂಹಿಕ ಪ್ರತಿಭಟನೆಗಳ ವ್ಯಾಪ್ತಿಯನ್ನು ಬಹಳವಾಗಿ ನಿರ್ಬಂಧಿಸುವ ಅಂಶಕ್ಕೆ ಸಂಬಂಧಿಸಿದೆ. ನವ–ಉದಾರವಾದವು ಜಾತಿ, ಉಪ–ಜಾತಿ, ಭಾಷೆ ಮತ್ತು ಪ್ರದೇಶಗಳ ಆಧಾರದ ಮೇಲೆ ಜನರನ್ನು ಸಣ್ಣ ಸಣ್ಣ ಘಟಕಗಳಾಗಿ ವಿಂಗಡಿಸುತ್ತದೆ. ಸಮೂಹ ಮಾಧ್ಯಮಗಳು ಮತ್ತು ಅಕೆಡಿಮಿಕ್ ವಲಯದ ಮೇಲೆ ಅದು ಹೊಂದಿರುವ ಹಿಡಿತ–ಪ್ರಭಾವಗಳ ಮೂಲಕ ಜನರು ಒಗ್ಗೂಡುವುದನ್ನು ತಪ್ಪಿಸುವಂತೆ ನೋಡಿಕೊಳ್ಳುತ್ತದೆ. ಸಾಮೂಹಿಕ ಪ್ರತಿಭಟನೆಗಳಿಗೆ ಬೆಂಬಲ ವೃದ್ಧಿಸದಂತೆ ನೋಡಿಕೊಳ್ಳುತ್ತದೆ. ನವ–ಉದಾರವಾದದ ಈ ಕಾಲಾವಧಿಯಲ್ಲಿ, ಜನಸಾಮಾನ್ಯರು ನವ–ಉದಾರವಾದಿ ನೀತಿಗಳನ್ನು ವಿರೋಧಿಸಿರುವುದು, ಸಾಮಾನ್ಯವಾಗಿ, ನೇರ ಕ್ರಮಗಳ ಮೂಲಕ ಅಲ್ಲ. ಅಂದರೆ, ದೀರ್ಘಕಾಲದ ಮುಷ್ಕರಗಳು ಅಥವಾ ಘೆರಾವೋಗಳ ಮೂಲಕ ಅಲ್ಲ. ಬಹುತೇಕ ಚಳುವಳಿಗಳು ಪರೋಕ್ಷ ರಾಜಕೀಯ ವಿಧಾನಗಳನ್ನು ಅನುಸರಿಸಿವೆ. ಲ್ಯಾಟಿನ್ ಅಮೆರಿಕಾದ ಹಲವು ದೇಶಗಳಲ್ಲಿ, ಪರ್ಯಾಯ ರಾಜಕೀಯ ಚಳುವಳಿಗಳನ್ನು ಕಟ್ಟುವ ಮೂಲಕ ನವ–ಉದಾರವಾದಿ ನೀತಿಗಳನ್ನು ವಿರೋಧಿಸಲಾಗಿದೆ ಮತ್ತು ರಾಜಕೀಯ ಅಧಿಕಾರವನ್ನು ಪಡೆಯಲಾಗಿದೆ ಎಂಬುದು ಗಮನಾರ್ಹವಾಗಿದೆ. ನವ–ಉದಾರವಾದವನ್ನು ವಿರೋಧಿಸುವ ಸರ್ಕಾರಗಳು ಅಧಿಕಾರಕ್ಕೆ ಬಂದಾಗಲೆಲ್ಲಾ, ಅವು ವಿದೇಶಿ ವಿನಿಮಯದ ಬಿಕ್ಕಟ್ಟಿನಿಂದ ಹಿಡಿದು ಸಾಮ್ರಾಜ್ಯಶಾಹಿಯು ಹೇರಿದ ನಿರ್ಬಂಧಗಳ ವರೆಗೆ ಅನೇಕ ಅಡೆತಡೆಗಳನ್ನು ಎದುರಿಸಿವೆ. ಇಂಥಹ ಅಡೆತಡೆಗಳಿಂದಾಗಿ ಅನೇಕ ಸರ್ಕಾರಗಳು ಬಿದ್ದು ಹೋಗಿವೆ.

ಇಂಥಹ ಸನ್ನಿವೇಶದಲ್ಲಿ ಭಾರತದ ರೈತ ಚಳುವಳಿಯು ಒಂದು ನೂತನ ಮಾರ್ಗವನ್ನು ಅನುಸರಿಸಿದೆ: ಮುಂಬರುವ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಪ್ರಚಾರ ಮಾಡುವ ರಾಜಕೀಯ ಬೆದರಿಕೆಯನ್ನು ಅದು ಬಳಸಿತ್ತಾದರೂ, ಅದು ನೇರ ಕಾರ್ಯಾಚರಣೆಯ ಕ್ರಮವನ್ನು ಅನುಸರಿಸಿತು. ನವ–ಉದಾರವಾದದ ಕಾಲಮಾನದಲ್ಲಿ ಇದೊಂದು ಬಲು ಅಪರೂಪದ ಪ್ರಸಂಗವೇ.

ಎರಡನೆಯದು, ರೈತರ ನೇರ ಕಾರ್ಯಾಚರಣೆಯು ಜರುಗಿದ ಅವಧಿ. ಒಂದು ಇಡೀ ವರ್ಷ ದೆಹಲಿಯ ಗಡಿ ಭಾಗಗಳಲ್ಲಿ ರೈತರು ಬಿಡಾರ ಹೂಡಿದ್ದರು. ಇಂಥಹ ಒಂದು ಅದ್ಭುತ ಸಾಧನೆಯನ್ನು ಹೇಗೆ ರೈತರು ಸಾಧಿಸಿದರು ಎಂಬುದನ್ನು ಸಂಶೋಧಕರು ಭವಿಷ್ಯದಲ್ಲಿ ಬಯಲು ಮಾಡುವುದರಲ್ಲಿ ಸಂದೇಹವಿಲ್ಲ. ಇದು, ಸಂಭ್ರಮಿಸಬೇಕಾದ ಸಾಧನೆಯೇ, ಆಚರಿಸಬೇಕಾದ ಸಾಧನೆಯೇ.



ಮುಂಬೈಯಲ್ಲಿ ರೈತರ ಮಹಾ ಪಂಚಾಯತ್ ಸಮರವನ್ನು ಮುಂದುವರೆಸುವ ದೃಢ ನಿರ್ಧಾರ

ನವಂಬರ್ 28 ಮುಂಬೈಯ ಐತಿಹಾಸಿಕ ಆಝಾದ್ ಮೈದಾನ್ ಇನ್ನೊಂದು ಮಹತ್ವದ ಘಟನೆಗೆ ಸಾಕ್ಷಿಯಾಯಿತು. ಮಹಾರಾಷ್ಟ್ರದ ಎಲ್ಲೆಡೆಗಳಿಂದ ಬಂದ ಸಾವಿರ–ಸಾವಿರ ರೈತರನ್ನು ಉದ್ದೇಶಿಸಿ ದೇಶದ ಎಲ್ಲೆಡೆಗಳಿಂದ ಬಂದ ರೈತ ಮುಖಂಡರು ಮಾತನಾಡಿದರು.

"ನಾವೆಲ್ಲ ಇಲ್ಲಿಗೆ ಬಂದಿದ್ದೇವೆ. ಏಕೆಂದರೆ ಮೋದಿ ಸರಕಾರ ಎಂಎಸ್‌ಪಿ ಕುರಿತ ಕಾಯ್ದೆ, ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ ವಾಪಸಾತಿ ಮತ್ತು ಮಂತ್ರಿ ಅಜಯ್ ಮಿಶ್ರ ರಾಜೀನಾಮೆ/ವಜಾದ ಆಗ್ರಹಗಳನ್ನು ಒಪ್ಪಿಕೊಂಡಿಲ್ಲ. ಅದು ಈಡೇರುವ ವರೆಗೆ ಏನೇ ಆಗಲಿ, ನಾವು ಪ್ರತಿಭಟಿಸುತ್ತಲೇ ಇರುತ್ತವೆ"– ಇದು ಅಲ್ಲಿ ನೆರೆದ ರೈತರ ದೃಢನಿರ್ಧಾರವಾಗಿತ್ತು.

ನವಂಬರ್ 28 ಮಹಾರಾಷ್ಟ್ರದ ಪ್ರಖ್ಯಾತ ಸಮಾಜ ಸುಧಾರಕ ಜ್ಯೋತಿಬಾ ಪುಲೆಯವರ ಮರಣ ವಾರ್ಷಿಕದ ದಿನ. ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಮಹಾರಾಷ್ಟ್ರದ ಶೇತ್ಕರಿ ಕಾಮ್ಗಾ??? ಮೋರ್ಚಾ ಮತ್ತಿತರ ಸಂಘಟನೆಗಳು ಈ ಮಹಾಪಂಚಾಯತ್ಏರ್ಪಡಿಸಲು ಈ ದಿನವನ್ನೇ ಆರಿಸಿಕೊಂಡರು. ಇದು ಭಾಗಶಃವಾದರೂ ಐತಿಹಾಸಿಕವಾದ ರೈತರ ಹೋರಾಟದ ವಿಜಯದ ಆಚರಣೆಯೊಂದಿಗೆ, ಈ ಶಾಂತಿಯುತ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದ 700ಕ್ಕೂ ಹೆಚ್ಚು ರೈತರಿಗೆ ಶ್ರದ್ಧಾಂಜಲಿ ಸಭೆಯೂ ಆಗಿತ್ತು. ಲಖಿಂಪುರ ಖೇರಿಯಲ್ಲಿ ಕೇಂದ್ರ ಮಂತ್ರಿಯ ಕಾರುಗಳಿಗೆ ಬಲಿಯಾದ ರೈತರ 'ಅಸ್ಥಿ ಕಲಶ'ಗಳೊಂದಿಗೆ ಅಕ್ಟೋಬರ್ 27ರಂದು ಪುಣೆಯಿಂದ ಆರಂಭವಾಗಿದ್ದ 'ಶಹೀದ್ ಕಲಶ್ ಯಾತ್ರಾ' ಕಳೆದ ಒಂದು ತಿಂಗಳಲ್ಲಿ ಮಹಾರಾಷ್ಟ್ರದ 30 ಜಿಲ್ಲೆಗಳನ್ನು ಹಾದು ನವಂಬರ್ 28ರಂದು ಆಝಾದ್ ಮೈದಾನಿಗೆ ಬಂದಿತು. ನಂತರ ಹುತಾತ್ಮ ಚೌಕ್ ನಲ್ಲಿ ಶ್ರದ್ಧಾಂಜಲಿ ಅರ್ಪಿಸಿ ಅದನ್ನು ಗೇಟ್ ವೇ ಆಫ್ ಇಂಡಿಯಾದ ಬಳಿ ಅರಬ್ಬೀ ಸಮುದ್ರದಲ್ಲಿ ವಿಸರ್ಜಿಸಲಾಯಿತು.

"ಮೋದಿ ಸರಕಾರ ದುರಹಂಕಾರಿ. ಆದರೆ ರೈತರು ಅವರಿಗೆ ಅವರ ಜಾಗ ತೋರಿಸಿದ್ದಾರೆ. ನಿಮ್ಮ ಸರ್ವಾಧೀಕಾರವನ್ನು ಇನ್ನು ಸಹಿಸುವುದಿಲ್ಲ ಎಂದು ಮುಂಬೈಯಲ್ಲಿ ರೈತರು ಅವರಿಗೆ ಮತ್ತು ಅವರ ಬಂಟ ಗೆಳೆಯರಿಗೆ ಹೇಳುತ್ತಿದ್ದಾರೆ. ನೀವು ಮೂರು ಕೃಷಿ ಕಾಯ್ದೆಗಳನ್ನು ರದ್ದುಮಾಡುವುದಾಗಿ ಪ್ರಕಟಿಸುವಂತೆ ಮಾಡಿದ್ದೇವೆ; ಎಂಎಸ್‌ಪಿ ಖಾತ್ರಿಯ ಕಾಯ್ದೆಯನ್ನು ತರುವಂತೆಯೂ ಮಾಡುತ್ತೇವೆ, ವಿದ್ಯುತ್ ಮಸೂದೆಯನ್ನು ರದ್ದು ಮಾಡುವಂತೆಯೂ ಮತ್ತು ನಾಲ್ಕು ಕಾರ್ಮಿಕ–ವಿರೋಧಿ ಸಂಹಿತೆಗಳನ್ನು ಹಿಂತೆಗೆದುಕೊಳ್ಳುವಂತೆಯೂ ಮಾಡುತ್ತೇವೆ" ಎಂದು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಅಶೋಕ ಧವಳೆ ಸಾರಿದರು.

"ಅವರು ನಮ್ಮನ್ನು ಜಾತಿಗಳಲ್ಲಿ, ಪ್ರದೇಶಗಳಲ್ಲಿ ಹಂಚಿ ಮುರಿಯಲು ಪ್ರಯತ್ನಿಸಿದರು. ನಾವು ದೇಶ–ವಿರೋಧಿಗಳು ಮತ್ತು ಇನ್ನೇನೇನೋ ಎಂದು ಹಣೆಪಟ್ಟಿ ಹಚ್ಚಿದರು. ಕೊನೆಗೆ ಅವರೇ ಬಿಟ್ಟುಕೊಡಬೇಕಾಯಿತು. ಏಕೆಂದರೆ, ರೈತರು ಐಕ್ಯತೆಯಿಂದಿದ್ದರು, ಗುರಿಸಾಧನೆಗೆ ಧೈರ್ಯವಾಗಿ ಹೋರಾಡಿದರು. ವರ್ಷವಿಡೀ ನಿಮ್ಮ ಅದ್ಭುತ ಬೆಂಬಲಕ್ಕೆ ಉತ್ತರಪ್ರದೇಶ, ಹರ್ಯಾಣ, ಪಂಜಾಬಿನ ರೈತರು ಕೃತಜ್ಞರು. ಆದರೆ ಸಮರ ಇನ್ನೂ ಮುಗಿದಿಲ್ಲ, ಎಂಎಸ್‌ಪಿ ಆಗ್ರಹವನ್ನು ಕೂಡ ಒಪ್ಪಿಕೊಳ್ಳಬೇಕು ಎಂದು ಮೋದಿ ಸರಕಾರಕ್ಕೆ ಮನವಿ ಮಾಡುತ್ತೇನೆ, ಏಕೆಂದರೆ ನೀವು ಚುನಾವಣೆಯ ಮೊದಲು ಭರವಸೆ ನೀಡಿದ್ದೀರಿ" ಎಂದು ಭಾರತೀಯ ಕಿಸಾ??? ಯೂನಿಯನ್ ಮುಖಂಡ ರಾಕೇಶ್ ಟಿಕಾಯ್ತ್ ಹೇಳಿದರು.

ರಾಜ್ಯಾದ್ಯಂತ ಕಾರ್ಮಿಕರೂ ಈ ಮಾಹಾಪಂಚಾಯತ್ ಗೆ ಬೆಂಬಲ ನೀಡಿದರು. ನಾಶಿಕ್ ನಿಂದ ಸಿಐಟಿಯು ಕಾರ್ಯಕರ್ತರ ಒಂದು ತಂಡ 101 ವಾಹನಗಳಲ್ಲಿ ಮುಂಬೈಗೆ ಬಂದಿತ್ತು. ಎನ್.ಎ.ಪಿ.ಎಂ. ನ ವಿವಿಧ ಘಟಕಗಳು ಈ ಮಹಾಪಂಚಾಯ್ತಿನಲ್ಲಿ ಭಾಗವಹಿಸಿದರು.

"ನಾವು ಭಯ, ಭೂಖ್, ಭ್ರಮೆಯಲ್ಲಿರಬೇಕೆಂದು ಅವರು ಬಯಸುತ್ತಾರೆ. ಇಂತಹ ಸನ್ನಿವೇಶದಲ್ಲಿ ಸಿಲುಕಿದ ವ್ಯಕ್ತಿ ತನಗೆ ಹೇಳಿದನ್ನೆಲ್ಲ ಮಾಡುತ್ತಾರೆ. ಇದು ಫ್ಯಾಸಿಸ್ಟರ ವಿಧಾನ. ಆದರೆ ಈ ವಿಧಾನವನ್ನು ಅವಿರತ ಹೋರಾಟದಿಂದ ಸೋಲಿಸಬಹುದು ಎಂದು ದೇಶದ ರೈತರು ತೋರಿಸಿ ಕೊಟ್ಟಿದ್ದಾರೆ ಎಂಧು ಸರ್ವಹಾರಾ ಜನಾಂದೋಲನದ ಉಲ್ಕಾ ಮಹಾಜನ್ ಹೇಳಿದರು.

"ಮುಂಬೈಗೆ ದೊಡ್ಡ ಸಂಖ್ಯೆಯಲ್ಲಿ ಬಂದ ರೈತರನ್ನು ವಂದಿಸಿದ ಮಹಾರಾಷ್ಟ್ರ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಅಜಿತ್ ನವಳೆ "ರೈತರೀಗ ಎಚ್ಚೆತ್ತಿದ್ದಾರೆ. ತಮ್ಮ ಶಕ್ತಿಯನ್ನು ಅರಿತಿದ್ದಾರೆ, ಗೆಲ್ಲುವ ವರೆಗೂ ಹೋರಾಡಲು ಸಿದ್ಧರಿದ್ದಾರೆ. ಈ ಚಳುವಳಿಯನ್ನು ಮುರಿಯುವ ಎಲ್ಲ ತಂತ್ರಗಳೂ ಕಳೆದ ಒಂದು ವರ್ಷದಲ್ಲಿ ವಿಫಲವಾಗಿರುವುದು ಮೋದಿ ಸರಕಾರಕ್ಕೆ ಗೊತ್ತಿರಬೇಕು.ಆದ್ದರಿಂದ ಎಲ್ಲ ಆರು ಬೇಡಿಕೆಗಳನ್ನು ಒಪ್ಪಿಕೊಳ್ಳುವುದು ಒಳ್ಳೆಯದು" ಎಂದು ಎಚ್ಚರಿಸಿದರು.

ಮಹಿಳೆಯರು ಈ ಮಹಾಪಂಚಾಯ್ತ್ ನಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು. "ಮಹಿಳೆಯರು ಯಾವುದೇ ಮನೆಯ ಬೆನ್ನೆಲುಬು. ಅವರು ಇಲ್ಲಿಗೆ ಪ್ರತಿಭಟನೆಯನ್ನು ಬೆಂಬಲಿಸಲು ಬಂದಿದ್ದಾರೆ. ಏಕೆಂದರೆ ರೈತರು ತಮಗೆ ವಿಶ್ವಾಸಘಾತವಾಗಿದೆ ಎಂದು ಭಾವಿಸುತ್ತಿದ್ದಾರೆ. ಅವರ ಬೆಳೆಗಳಿಗೆ ಸರಿಯಾದ ಬೆಲೆಗಳು ಸಿಗುತ್ತಿಲ್ಲ. ಬೆಳೆಸುವ ಖರ್ಚಿನ ಅರ್ಧದಷ್ಟೂ ಕೂಡ ಸಿಗುತ್ತಿಲ್ಲ. ಆದ್ದರಿಂದ ಎಂಎಸ್‌ಪಿ ಕಾಯ್ದೆ ಬೇಕಾಗಿದೆ" ಎಂದು ಅಲಿಬಾಗ್‌ನಿಂದ ಬಂದ ಸಯಾಲೀ ಪಾಟೀಲ್ ಹೇಳಿದರು.


ಕೃಷಿ ಕಾಯ್ದೆಗಳನ್ನು ರದ್ದು ಮಾಡುವ ಪ್ರಕಟಣೆಯೂ ಒಂಧು ಜುಮ್ಲಾ ಆಗಿರಬಹುದು. ಸಂಸತ್ತಿನಲ್ಲಿ ಅದನ್ನು ಹಿಂತೆಗೆದುಕೊಂಡರೇ ರೈತರು ಇದನ್ನು ನಂಬುವುದು ಎಂದು ಸಿಪಿಐ(ಎಂ)ನ ಮಾಜೀ ಶಾಸಕ ಜೆ ಪಿ ಗವಿತ್ ಹೇಳಿದರು.

ಸಂಯುಕ್ತ ಕಿಸಾನ್ ಮೋರ್ಚಾದ ಇತರ ಮುಖಂಡರಾದ ಡಾ.ದರ್ಶನ್ ಪಾಲ್, ಹನ್ನನ್ ಮೊಲ್ಲ, ಯುದ್ಧವೀರ್ ಸಿಂಗ್, ಅತುಲ್ ಕುಮಾರ ಅಂಜನ್, ಯೋಗೇಂಧ್ರ ಯಾದವ್, ಮೇಧಾ ಪಾಟ್ಕರ್, ಪ್ರತಿಭಾ ಶಿಂದೆ, ಬಿ.ವೆಂಕಟ್, ನರಸಯ್ಯ ಅದಂ ಮತ್ತಿತರೂ ರೈತರನ್ನುದ್ದೇಶಿಸಿ ಮಾತಾಡಿದರು.

ಈ ಮಹಾಪಂಚಾಯ್ತ್ ಗೆ ಎಡಪಕ್ಷಗಳಲ್ಲದೆ ಕಾಂಗ್ರೆಸ್, ಶಿವಸೇನೆ, ಎನ್‌ಸಿಪಿ, ಪಿಡಬ್ಲ್ಯುಪಿ ಮತ್ತು ಎಎಪಿ ರಾಜ್ಯ ಘಟಕಗಳು ಬೆಂಬಲ ನೀಡಿದವು.



ಕನ್ನಡ ಪ್ರಜ್ಞೆಯ ಸುತ್ತಮುತ್ತ: ನಾಡು–ನುಡಿ–ಚಿಂತನೆ



"ಕನ್ನಡ ಪ್ರಜ್ಞೆಯ ಸುತ್ತಮುತ್ತ : ನಾಡು–ನುಡಿ–ಚಿಂತನೆ" ಎಂಬ ಪುಸ್ತಕವನ್ನು ಆನ್ ಲೈನ್ ಸಭೆಯೊಂದರಲ್ಲಿ ನವೆಂಬರ್ 1 ರಂದು ಡಾ. ವಿನಯಾ ಒಕ್ಕುಂದ ಅವರು ಬಿಡುಗಡೆ ಮಾಡಿದರು. ಡಾ.ಗೀತಾ ಡಿ.ಸಿ ಮತ್ತು ನಾಗರೇಖಾ ಗಾಂವಕರ್ ಸಂಪಾದಿಸಿರುವ ಈ ಪುಸ್ತಕವನ್ನು ಕ್ರಿಯಾ ಮಾಧ್ಯಮ ಪ್ರಕಟಿಸಿದೆ. ಇಲ್ಲಿ ಪುಸ್ತಕದ ಕಿರು ಪರಿಚಯ, ಪುಸ್ತಕದ ಕೆಲವು ಆಯ್ದ ಭಾಗಗಳು ಮತ್ತು ಪುಸ್ತಕ ಬಿಡುಗಡೆಯ ಸಂದರ್ಭದ ಡಾ. ವಿನಯಾ ಅವರ ಕೆಲವು ಗಮನಾರ್ಹ ಮಾತುಗಳನ್ನು ಕೊಡಲಾಗಿದೆ.

ವಸಂತರಾಜ್ ಎನ್.ಕೆ.

ಕನ್ನಡ ಭಾಷೆ ಬಹಳ ಸಮಯದಿಂದ ಬರಿಯ ಆಡು ಭಾಷೆಯಾಗುವ ಮತ್ತು ಕ್ರಮೇಣ ಅಳಿದು ಹೋಗುವ ಅಪಾಯದ ಅಂಚಿನಲ್ಲಿದೆ. ಭಾಷಾವಾರು ರಾಜ್ಯಗಳ ಘಟನೆಯ ನಂತರ ಜ್ಞಾನದ, ವ್ಯವಹಾರದ ಭಾಷೆಯಾಗಿ ಭಾರತೀಯ ಭಾಷೆಗಳ ಸಮಗ್ರ ಬೆಳವಣಿಗೆಯಾಗಬೇಕು. ಭಾರತೀಯ ಭಾಷಾ ಮಾಧ್ಯಮದಲ್ಲಿ ಹಂತ ಹಂತವಾಗಿ ಸ್ನಾತಕೋತ್ತರ ಪದವಿಯ ವರೆಗೆ ಶಿಕ್ಷಣವಿರಬೇಕು ಎಂಬ ಕನಸು ಕಮರಿ ಹೋಗಿ ಬಹಳ ದಿನವಾಗಿದೆ. ಈಗ ಕನ್ನಡವನ್ನು ಪ್ರಾಥಮಿಕ ಹಂತದಲ್ಲಾದರೂ ಮತ್ತು ಒಂದು ಅಧ್ಯಯನ ವಿಷಯವಾಗಿಯಾದರೂ ಉಳಿಸಿಕೊಳ್ಳಲು ಹೋರಾಡುವ ದುಸ್ಥಿತಿಯಿದೆ. ಆಗಾಗ ಹೊಸದಾಗಿ ಬರುವ ಶಿಕ್ಷಣ ನೀತಿಗಳು, 1990ರ ದಶಕದಿಂದ ಬಂದಿರುವ ನವ–ಉದಾರವಾದಿ ನೀತಿಗಳು ಮತ್ತುಇತರ ಬೆಳವಣಿಗೆಗಳು ಕನ್ನಡದ ಸ್ಥಿತಿಯನ್ನು ಇನ್ನಷ್ಟು ದುರ್ಭರಗೊಳಿಸುತ್ತಾ ಬಂದಿವೆ. ರಾಷ್ಟ್ರೀಯ ಶಿಕ್ಷಣ ನೀತಿ–2020 ಮತ್ತು ಅದರ ಜಾರಿಗೆ ಕರ್ನಾಟಕ ಸರಕಾರ ತೋರುತ್ತಿರುವ ತರಾತುರಿ ಕನ್ನಡಕ್ಕೆ ಬಂದಿರುವ ಹೊಸ ಕುತ್ತು.

ರಾಷ್ಟ್ರೀಯ ಶಿಕ್ಷಣ ನೀತಿ–2020 ರಲ್ಲಿ ಶಿಕ್ಷಣ ಕ್ಷೇತ್ರದ ಖಾಸಗೀಕರಣ, ವ್ಯಾಪಾರೀಕರಣ, ಕೇಂದ್ರೀಕರಣ, ನಾಲ್ಕು ವರ್ಷದ ಪದವಿ ಶಿಕ್ಷಣ ಪದ್ಧತಿ – ಇತ್ಯಾದಿಗಳಿಗೆ ಕೊಟ್ಟಿರುವ ಒತ್ತು, ಕನ್ನಡಕ್ಕೆ ಹೊಸ ತೊಡಕುಗಳನ್ನು ಒಡ್ಡಿದೆ. ಹಿಂದಿನ ಮೂರು ವರ್ಷದ ಪದವಿ ಪದ್ಧತಿಯಲ್ಲಿ ಎರಡು ವರ್ಷಗಳ ಕಾಲವಿದ್ದ ಭಾಷಾಕಲಿಕೆಯನ್ನು, ಹೊಸ ನಾಲ್ಕು ವರ್ಷದ ಪದವಿ ಶಿಕ್ಷಣ ಪದ್ಧತಿಯಲ್ಲಿ ಒಂದು ವರ್ಷಕ್ಕೆ ಇಳಿಸಿರುವುದು (ಎರಡು ವರ್ಷಕ್ಕೆ ಏರಿಸುವುದಾಗಿ ಆಶ್ವಾಸನೆ ಕೊಟ್ಟಿದ್ದರೂ ಖಚಿತವಿಲ್ಲ), ಶಾಲಾ ಶಿಕ್ಷಣದಲ್ಲಿ ಮಾಧ್ಯಮವಾಗಿ ಈಗಾಗಲೇ ಕನ್ನಡತನ್ನ ಸ್ಥಾನ ಕಳೆದುಕೊಂಡಿರುವುದು (ಈ ಕುರಿತು ರಾಷ್ಟ್ರೀಯ ಶಿಕ್ಷಣ ನೀತಿ ಬಣ್ಣದ ಮಾತುಗಳನ್ನು ಮಾತ್ರ ಆಡುತ್ತದೆ, ಯಾವುದೇ ನಿರ್ದಿಷ್ಟ ಕ್ರಿಯೆಯಿಲ್ಲ) ಕನ್ನಡದ ಸ್ಥಾನಮಾನದ ಬಗ್ಗೆ ಮತ್ತೆ ಚರ್ಚೆಯನ್ನು ಹುಟ್ಟು ಹಾಕಿದೆ. ನಾಡು–ನುಡಿಗಳ ಅಸ್ಮಿತೆ, ಸಂಸ್ಕೃತಿಗಳ ರಕ್ಷಣೆಯಲ್ಲಿ ಶಿಕ್ಷಣದಲ್ಲಿ ಮಾತೃ ಭಾಷಾ ಮಾಧ್ಯಮದ ಮಹತ್ವ, ಯಾವುದೇ ವಿಷಯದ ಕಲಿಕೆಯಲ್ಲಿ, ವ್ಯಕ್ತಿಯ ಅಭಿವ್ಯಕ್ತಿ ಮತ್ತು ಸಮಗ್ರ ಬೆಳವಣಿಗೆಯಲ್ಲಿ ಭಾಷಾ ಕಲಿಕೆಯ ಸ್ಥಾನ ಇತ್ಯಾದಿಗಳ ಕುರಿತು ನಾಡಿನಾದ್ಯಂತ ತೀವ್ರ ಚರ್ಚೆ ನಡೆಯುತ್ತಿದೆ.

"ಕನ್ನಡ ಪ್ರಜ್ಞೆಯ ಸುತ್ತಮುತ್ತ : ನಾಡು–ನುಡಿ–ಚಿಂತನ", ಈ ಚರ್ಚೆಯ ಹಲವು ಮಗ್ಗಲುಗಳನ್ನು ಶೋಧಿಸುವ ಬರಹಗಳನ್ನು ಸಂಗ್ರಹಿಸಿ ಸಮಗ್ರವಾಗಿ ಪ್ರಸ್ತುತ ಪಡಿಸುವ ಪ್ರಯತ್ನ. ನಾಡಿನ 72 (ಹೌದು 72!) ಹಿರಿಯ ಕಿರಿಯ ಬರಹಗಾರರು, ಚಿಂತಕರು ಕನ್ನಡ ಪ್ರಜ್ಞೆಯ ಸುತ್ತಮುತ್ತಲಿನ ಎಲ್ಲ ಆಯಾಮಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಈ ಪುಸ್ತಕದ ವಿಶೇಷವೇನೆಂದರೆ, ಸುಬ್ರಾಯ ಚೊಕ್ಕಾಡಿ, ಜಿ. ರಾಮಕೃಷ್ಣ, ಕೆ.ವಿ.ತಿರುಮಲೇಶ್, ಚಂದ್ರಶೇಖರ ಕಂಬಾರ, ಬರಗೂರು ರಾಮಚಂದ್ರಪ್ಪ, ವೈದೇಹಿ, ಎಚ್. ಎಸ್. ರಾಘವೇಂದ್ರರಾವ್, ಎಸ್.ಜಿ. ಸಿದ್ಧರಾಮಯ್ಯ, ಓ.ಎಲ್. ನಾಗಭೂಷಣಸ್ವಾಮಿ, ಕೆ.ವಿ. ನಾರಾಯಣ, ಪುರುಷೋತ್ತಮ ಬಿಳಿಮಲೆ ಅವರಂಥ ಹಿರಿಯ ಬರಹಗಾರರಿಂದ, ಖಾಸಗಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿಗಳೂ ಸೇರಿದಂತೆ, ಶಿಕ್ಷಕರು, ಅಧ್ಯಾಪಕರು, ವೈದ್ಯರು, ಉದ್ಯೋಗಿಗಳು, ಪತ್ರಕರ್ತರು, ಪರಿಸರವಾದಿಗಳು, ವಿಜ್ಞಾನಿಗಳು, ಗೃಹಿಣಿಯರು, ತಂತ್ರಜ್ಞರು, ಸಾಫ್ಟವೇರ್ ಇಂಜಿನಿಯರುಗಳು, ಚಿತ್ರಕಲಾವಿದರು, ರಂಗಭೂಮಿ ಕಲಾವಿದರು, ಕಥೆಗಾರರು, ಕವಿಗಳು, ಅನುವಾದಕರು, ಬ್ಯಾಂಕ್ ಉದ್ಯೋಗಿಗಳಾಗಿದ್ದವರು, ಪದವಿ ಓದುತ್ತಿರುವ ವಿದ್ಯಾರ್ಥಿ, ಸಂಶೋಧನಾ ವಿದ್ಯಾರ್ಥಿನಿ.. ಹೀಗೆ ವಿವಿಧ ವೃತ್ತಿಗಳಲ್ಲಿದ್ದೂ ಕನ್ನಡದ ಬಗೆಗೆ ಪ್ರೀತಿ ಇಟ್ಟುಕೊಂಡವರೆಲ್ಲರ ಬರಹಗಳೂ ಇಲ್ಲಿರುವುದು. ಸಹಜವಾಗಿಯೇ ಇವರು ಕನ್ನಡ ಪ್ರಜ್ಞೆಯ ವಿವಿಧ ಮಗ್ಗುಲುಗಳನ್ನು ಅನ್ವೇಷಿಸಿದ್ದಾರೆ. 'ಕನ್ನಡ, ಸಂಸ್ಕೃತಿ ಮತ್ತು ಸ್ವಾಯತ್ತತೆ', "ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡವೆಂಬ ಕೂಗು", "ಕನ್ನಡ ಮತ್ತು ಐಟಿ ಕನ್ನಡಿಗರು", "ರಾಷ್ಟ್ರೀಯ ಶಿಕ್ಷಣ ನೀತಿ 2020ಕ್ಕೆ ಅಧ್ಯಾಪಕರ ತಿರಸ್ಕಾರ" "ನಾಟೀ ಭಾಷೆಗಳ ನಿಟ್ಟುಸಿರು, ಕೊನೆಯುಸಿರು", "ಕನ್ನಡ ಉಳಿಸಿ ಬೆಳೆಸಲು ರಂಗಭೂಮಿ ಎಷ್ಟರ ಮಟ್ಟಿಗೆ ಸಹಕಾರಿ?", "ಭಾಷೆ ಹಾಗೂ ಅರಿವಿನ ವಿಕಾಸ", "ತಾಂತ್ರಿಕ ಬೋಧನೆಯಲ್ಲಿ ಕನ್ನಡ", "ಕನ್ನಡ : ಭಾಷೆ–ಉಪಭಾಷೆ–ತಂತ್ರಜ್ಞಾನ", :ಮಾಧ್ಯಮಗಳಲ್ಲಿ ಭಾಷೆಯ ಉಳಿವು" –ಇಲ್ಲಿರುವ ಬರಹಗಳ ತಲೆಬರಹಗಳು ಇಲ್ಲಿನ ವೈವಿಧ್ಯತೆಯನ್ನು ಬಿಂಬಿಸುತ್ತವೆ.

'ಕನ್ನಡ ಪ್ರಜ್ಞೆ..'ಯ ಆಯ್ದ ಭಾಗಗಳು

ರಾಜಕೀಯ ಪಕ್ಷಗಳು ಭಾಷೆಯ ಪ್ರಶ್ನೆಯನ್ನು ಸಾಹಿತಿಗಳ ಸಮಸ್ಯೆ ಅಥವಾ ಹಿಡಿಯಷ್ಟು ಜನರ ಚಳವಳಿಯ ಆಸಕ್ತಿ ಮಾತ್ರ ಎಂದು ತಪ್ಪಾಗಿ ತಿಳಿದು ತಂತಮ್ಮ ಪ್ರಣಾಳಿಕೆಗಳಲ್ಲಿ ನಿರ್ಲಕ್ಷ್ಯ ಮಾಡುತ್ತಾ ಬಂದವು. ಸಾಮಾನ್ಯ ಜನರ ಭಾಷೆ ಮತ್ತು ಸಾಮಾನ್ಯ ಜನರ ಬದುಕು ಎರಡನ್ನೂ ಒಟ್ಟಿಗೇ ನೋಡುವ ಚಳವಳಿಗಳು ಮತ್ತು ರಾಜಕೀಯ ಪಕ್ಷಗಳು ನಮಗೆಬೇಕು. ಈ ದೃಷ್ಟಿಯಿಂದ ನೋಡಿದಾಗ ಕನ್ನಡದ ಕೆಲಸಕ್ಕೆ ಇರುವ ಬಹುಮುಖತೆ ಅರ್ಥವಾಗುತ್ತದೆ. ಜನ ಭಾಷೆ, ಜನ ಸಂಸ್ಕೃತಿ, ಜನಪರ ಯೋಜನೆ ಈ ಎಲ್ಲ ಮುಖಗಳ ಮೂಲ ಒಂದೇ, ಅದೇ ಸಮಾನತೆಯ ಆಶಯ. ಆದ್ದರಿಂದ ಭಾಷೆಯ ಪ್ರಶ್ನೆ ರಾಜಕೀಯ ಪ್ರಶ್ನೆಯೂ ಆಗುತ್ತದೆ. ಹೀಗೆ ಭಾಷಾ ಚಳವಳಿಗಳು ಪಡೆಯಬೇಕಾದ ಸೈದ್ಧಾಂತಿಕ ಸ್ವರೂಪವನ್ನು ನಿರ್ಲಕ್ಷಿಸಿ ಬಿಡಿಬಿಡಿಯಾದ ನೆಲೆಯಲ್ಲಿ ಯೋಚಿಸಿದರೆ ಭಾವೋದ್ರೇಕವೇ ಮುಖ್ಯವಾಗಬಹುದು. ಸಾಂಸ್ಕೃತಿಕ ಸ್ವಾಯತ್ತತೆಯ ಬದಲು ಪ್ರಾಂತೀಯ ವೈಪರೀತ್ಯ ಮಾತ್ರ ಮೆರೆಯಬಹುದು. ಭಾಷೆ ಮತ್ತು ಬದುಕು ಬೇರ್ಪಟ್ಟು ಹೋರಾಟ ವಿಜೃಂಭಿಸಬಹುದು. ಈ ಅಪಾಯಗಳ ಎದುರಿನಲ್ಲಿ ಸರ್ಕಾರವು ಕೇವಲ ತಾತ್ಕಾಲಿಕ ಪರಿಹಾರರೂಪದ ಕೆಲಸಗಳನ್ನು ಮಾಡುತ್ತ ಕಾಲ ತಳ್ಳಬಹುದು. ಯಾವುದೇ ಸರ್ಕಾರ, ಜನಮುಖೀ ಕೆಲಸದ ಭಾಗವಾಗಿಯೇ ಭಾಷೆಯ ಕೆಲಸವನ್ನು ಕೈಗೊಳ್ಳಬೇಕು. ಜನಸಾಮಾನ್ಯರ ಬದುಕನ್ನು ಹಸನುಗೊಳಿಸುವ ಕೆಲಸ ಮತ್ತುಜನಭಾಷೆಗೆ ಮನ್ನಣೆಕೊಡುವ ಕೆಲಸಗಳು ಪರಸ್ಪರ ಪೂರಕವೆಂದೇ ಭಾವಿಸಬೇಕು. ಈ ಆಲೋಚನೆಯ ನೆಲೆಯಲ್ಲಿ.. ..ಪ್ರಾಥಮಿಕ ಶಿಕ್ಷಣದಲ್ಲಿ ಸಮಾನತೆ ಮತ್ತು ಏಕರೂಪತೆಯನ್ನು ಸಾಧಿಸದೆಜನರನ್ನು ಕನ್ನಡ ಮಾಧ್ಯಮಕ್ಕಾಗಿ ಒತ್ತಾಯಿಸುವುದು ಮತ್ತು ದೂರುವುದು ಅರ್ಥಹೀನ ಎನ್ನುವುದು ನನ್ನ ಅಭಿಪ್ರಾಯ.. .. ಆಡಳಿತ ಭಾಷೆಯ ವಿಷಯವೂ ಅಷ್ಟೆ. ನನಗಿದು ಕೇವಲ ಅಭಿಮಾನದ, ಆದರ್ಶದ ಪ್ರಶ್ನೆಯಲ್ಲ. ನಮ್ಮ ಸಂವಿಧಾನ ಒಪ್ಪಿಕೊಂಡಿರುವ ಫೆಡರಲ್ ಪದ್ಧತಿಯ ಪ್ರಜಾ ಪ್ರಭುತ್ವದ ಪ್ರಶ್ನೆ. ಪ್ರಾದೇಶಿಕ ಭಾಷಾ ಸಂಸ್ಕೃತಿಗಳ ಬೆಳವಣಿಗೆ ಆಗಬೇಕಾದ ಅಗತ್ಯ ಒಂದು ಕಡೆ; ತಂತಮ್ಮ ಭಾಷೆಯ ಮೂಲಕ ಒಟ್ಟು ಬದುಕಿನಲ್ಲಿ, ಆಡಳಿತ ಕ್ರಿಯೆಯಲ್ಲಿ ಜನರ ತೊಡಗುವಿಕೆ ಇನ್ನೊಂದು ಕಡೆ,

– ಬರಗೂರು ರಾಮಚಂದ್ರಪ್ಪ

ಭಾಷೆಯೆಂಬುದು ಕೇವಲ ಅಕ್ಷರಗಳ ಗುಂಪಲ್ಲವಷ್ಟೆ? ಅದು ಸಮಾಜ ವಿಜ್ಞಾನದ, ಭಾವ ಕೋಶದ, ಸಂಸ್ಕೃತಿ ಪರಂಪರೆಯ ಸಮ್ಯಕ್ ಬೀಗದ ಕೈ. ಒಂದು ಹಂತದವರೆಗೆ ಮಕ್ಕಳು ಅವರವರ ಪ್ರದೇಶ ಭಾಷೆಯಲ್ಲೇ ಕಲಿಯುತ್ತ ಮುಂದಿನದನ್ನು ಬೇಕಾದರೆ ಅವರಿಗೆ ಬಿಡೋಣ. ಹೆತ್ತವರೆಂದ ಮಾತ್ರಕ್ಕೆ ಮಕ್ಕಳ ಕುರಿತ ಎಲ್ಲ ಹಕ್ಕೂ ನಮಗಿದೆ ಅಂತ ತಿಳಿಯುವುದೇ ಅಸಂಬದ್ಧವಷ್ಟೆ

–ವೈದೇಹಿ

ರಾಷ್ಟ್ರೀಯ ಶಿಕ್ಷಣ ನೀತಿಯ ಮುನ್ನೋಟ ಹೇಳುತ್ತದೆ: "ಸರ್ವರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ನಮ್ಮ ಸಮಾಜವನ್ನು ಒಂದು ಸುಸ್ಥಿರ, ಸಮಾನ ಹಾಗೂ ಜೀವಂತಿಕೆಯುಳ್ಳ ಸಮಾಜವನ್ನಾಗಿ ಮಾರ್ಪಡಿಸಲು ಶ್ರಮಿಸುತ್ತದೆ."– ಈ ಉದ್ದೇಶ ಅದ್ಭುತವಾದುದು.. .. ..ಶಿಕ್ಷಣ ನೀತಿಯ ಅವಲೋಕನದ ಮುಖ್ಯ ಅಂಶಗಳ ಭಾಗದಲ್ಲಿ ಒಟ್ಟು 11 ವಿಭಾಗಗಳಿವೆ.. ..ಇದು ಮೇಲ್ನೋಟಕ್ಕೆ ಹೆಚ್ಚು ವೈಜ್ಞಾನಿಕ ಹಾಗೂ ವೈಚಾರಿಕ ಮುನ್ನೋಟದಿಂದ ರೂಪಿಸಲಾಗಿದೆ ಎನಿಸುತ್ತದೆ. ಆದರೆ ಒಂದೊಂದನ್ನೂ ಸೂಕ್ಷ್ಮವಾಗಿ ವಿಶ್ಲೇಷಿಸಿ ಗಮನಿಸಿದಾಗ, ಪ್ರಾಯೋಗಿಕವಾಗಿ ಒಕ್ಕೂಟ ನೀತಿಗೆ ವಿರುದ್ಧವಾದ ನಡೆಗಳಿರುವುದು ಗೋಚರವಾಗುತ್ತದೆ; ಖಾಸಗೀಕರಣಕ್ಕೆ ಹೆಚ್ಚು ಒತ್ತುಕೊಡುವ ಒಳ ಆಶಯದಿಂದ ಕೂಡಿವೆ. ನಮ್ಮ ಸಂವಿಧಾನದಲ್ಲಿ ಶಿಕ್ಷಣವನ್ನು ಕುರಿತು ಇರುವ ರಾಜ್ಯ ಮತ್ತು ಕೇಂದ್ರಗಳ ಸಹಭಾಗಿತ್ವದ ಉದ್ದೇಶವನ್ನೇ ವಿಫಲಗೊಳಿಸುವ ಸಾಧ್ಯತೆಗಳು ಇಲ್ಲಿ ಢಾಳಾಗಿ ಕಾಣುತ್ತಿವೆ.ವಿಕೇಂದ್ರೀಕರಣ ನೀತಿಗಿಂತ 'ಕೇಂದ್ರೀಕೃತ' ಅಧಿಪತ್ಯದ' ನೀತಿಯಎತ್ತಡಇಲ್ಲಿದ್ದಂತಿದೆ.

ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಣಗೊಳಿಸುವ ಸಮಾನ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಅಗತ್ಯವಿದೆ. ಅದು ಬಿಟ್ಟು ದಿನದಿಂದ ದಿನಕ್ಕೆ ಖಾಸಗೀಕರಣವನ್ನುಹೆಚ್ಚು ಬೆಂಬಲಿಸುತ್ತಿರುವ ಆಡಳಿತ ನೀತಿ, ಅಸಮಾನತೆಯನ್ನು ಹೆಚ್ಚುಗೊಳಿಸುತ್ತದೆ. ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸುತ್ತದೆ. ಇದರಿಂದ ಈ

'ಎಲ್ಲರನ್ನೂ ಒಳಗೊಂಡ ಸಮಾನ ಶಿಕ್ಷಣ' ಎಂಬ ಮಾತು ಕೇವಲ ಬಡವರ ತುಟಿಗೆ ತುಪ್ಪ ಸವರಿದ ಮಾತಾಗುತ್ತದೆ.

–ಎಸ್.ಜಿ. ಸಿದ್ಧರಾಮಯ್ಯ

ಹೊಸ ಶಿಕ್ಷಣ ನೀತಿಯ ವರದಿ ಸಲ್ಲಿಸಿದ ಕರ್ನಾಟಕದ ಸಮಿತಿಗೆ ಭಾಷೆ ಕುರಿತು ಹೊಸ ಚಿಂತನೆಗಳೇನೂ ಇದ್ದಂತೆ ಕಾಣುವುದಿಲ್ಲ. ಹೀಗಾಗಿ ಕನ್ನಡ ಕಲಿಕೆಯ ಕುರಿತಾದ ತನ್ನ ಎಂದಿನ ತಪ್ಪು ಗ್ರಹಿಕೆಯನ್ನು ಇಲ್ಲೂ ಮುಂದುವರಿಸಿದೆ. ಭಾಷಾ ಕಲಿಕೆಯೆಂದರೆ ಕಾಗಕ್ಕ ಗುಬ್ಬಕ್ಕರ ಕತೆ ಕಲಿಸುತ್ತಿದ್ದಾರೆ ಎಂಬ ಭಾವನೆ ಸರಿಯಲ್ಲ. ಇತ್ತೀಚಿನ ಸಂಶೋಧನೆಗಳ ಪ್ರಕಾರ ಭಾಷೆ ಎನ್ನುವುದು ಬಾಹ್ಯವಾದದ್ದಲ್ಲ. ಅದು ಆಂತರಿಕ

ಅರಿವಿಗೆ ಸಂಬಂಧಿಸಿದ ಅಂಗ – ಕಾಗ್ನಿಟಿವ್. ನೋಮ್ ಚಾಮ್ಸ್ಕಿ ಲಾಂಗ್ವೇಜ್ ಅಕ್ವೈರ್ ಡಿವೈಸ್ ಎಂಬುದು ನಮ್ಮ ಮಿದುಳಿನಲ್ಲಿ ಇದೆ ಎನ್ನುತ್ತಾರೆ. ಭಾಷೆ ಎಂಬುದು ಸ್ಕೂಲ್ ಆಫ್ ಥಾಟ್ – ಅಧ್ಯಯನ ಕ್ರಮ, ಜ್ಞಾನ ಮೂಲ. ಅದನ್ನು ಬಿಟ್ಟು ಭಾಷೆಯನ್ನು ಕೇವಲ ಸ್ಕಿಲ್‌ಗೆ ಸೀಮಿತಗೊಳಿಸುವುದು ಸರಿಯಲ್ಲ. ಹೀಗಾಗಿ ಭಾಷಾ ಕಲಿಕೆಯನ್ನು ಹೇಗೆ ಮಾಡಿಸಬೇಕು ಎಂಬುದನ್ನು ಪದವಿ ಅಧ್ಯಾಪಕರ ವಿವೇಚನೆಗೇ ಬಿಡಬೇಕೇ ಹೊರತು ಹೊರಗಿನಿಂದ ಅದನ್ನು ಹೇರಿಕೆ ಮಾಡಬಾರದು.

–ಡಾ. ಸಬಿತಾ ಬನ್ನಾಡಿ

ಕನ್ನಡ ಪ್ರಜ್ಞೆ ತಲ್ಲಣಕ್ಕೆ ಒಳಗಾಗಿದೆ

"ಕನ್ನಡ ಪ್ರಜ್ಞೆ ಇಂದು ಬಹುದೊಡ್ಡ ತಲ್ಲಣಕ್ಕೆ ಒಳಗಾಗಿದೆ. ಕನ್ನಡ ಜ್ಞಾನದ ಮೂಲ ಎನ್ನುವ ಮುಖ್ಯ ನೆಲೆಯಿಂದ ನಾವು ದೂರ ಬಂದಿದ್ದೇವೆ. ಕನ್ನಡ ಎಂಬ ಕಾಡನ್ನು ಅದರ ಪಾಡಿಗೆ ಬೆಳೆಯಲು ಬಿಡಬೇಕೇ ಹೊರತು, ಅದನ್ನು ಬಂಧಿಸುವ ಅಥವಾ ನಾಶಪಡಿಸುವ ಕೆಲಸ ಮಾಡಬಾರದು.. .. ..ಕನ್ನಡ ಎನ್ನುವುದು ಬದುಕಿಗೆ ಬೇಕಿರುವ ವಿವೇಕದ ಸಂಕಥನ ಎಂಬುದನ್ನು ನಾವೆಲ್ಲ ಮರೆಯುತ್ತಿದ್ದೇವೆ. ಇದು, ಕನ್ನಡಕ್ಕೆ ಆಗುತ್ತಿರುವ ಬಹಳ ದೊಡ್ಡಧಕ್ಕೆ .. ..ಕನ್ನಡವನ್ನು ವೈಭವೀಕೃತ, ಆದರ್ಶ ಹಾಗೂ ತಾಯಿ ಭುವನೇಶ್ವರಿಯ ನೆಲೆಗಳಲ್ಲಿ ಮಾತ್ರ ನೋಡುತ್ತಿದ್ದು, ಭುವನೇಶ್ವರಿಯ ಚಿತ್ರದಲ್ಲಿ ಆಗಬೇಕಿರುವ ಸರ್ವಧರ್ಮ ಸಹಿಷ್ಣುತೆಯ ಮರುರೂಪಣದ ಬಗ್ಗೆ ಯೋಚಿಸುವ ಸಾಮರ್ಥ್ಯವನ್ನೂ ಕಳೆದುಕೊಳ್ಳುತ್ತಿದ್ದೇವೆ. ಇದು ನಮ್ಮೆದುರು ಇರುವ ದೊಡ್ಡ ಸವಾಲು.. ..ರಾಜ್ಯೋತ್ಸವ ಬಂದಾಗ ಕಾರ್ಯಕ್ರಮಗಳು, ಹಾಡುಗಳು ಹಾಗೂ ಮನರಂಜನೆಗೆ ಮಾತ್ರ ಭಾಷೆಯನ್ನು ಉಳಿಸುತ್ತಿದ್ದೇವೆ. ಕನ್ನಡವನ್ನು ಜ್ಞಾನದ, ಅಧಿಕಾರದ ಹಾಗೂ ಅನ್ನದ ಭಾಷೆಯಾಗಿ ಸರ್ಕಾರದ ಪ್ರತಿನಿಧಿಗಳು ಏಕೆ ಬಿಂಬಿಸುತ್ತಿಲ್ಲ?.. ..ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಕನ್ನಡದ ಆದ್ಯತೆ ಹಾಗೂ ಗೊಂದಲಗಳ ಬಗ್ಗೆ ಈ ಪುಸ್ತಕ ಪ್ರಶ್ನೆ ಎತ್ತುವಂತಿದೆ. ಕನ್ನಡ ಪ್ರಸ್ತುತದಲ್ಲಿ ಎದುರಿಸುತ್ತಿರುವ ಬಿಕ್ಕಟ್ಟುಗಳ ಬಗ್ಗೆಯೂ ಪುಸ್ತಕದಲ್ಲಿನ ಬರಹಗಳು ಬೆಳಕು ಚೆಲ್ಲಿವೆ."

– ಡಾ. ವಿನಯಾ ಒಕ್ಕುಂದ (ಪುಸ್ತಕ ಬಿಡುಗಡೆ ಮಾಡುತ್ತಾ)

JANASHAKTHI KANNADA VARA PATRIKE DECEMBER 6-12, 2021 Price: Rs. 10/- Date of Publication: 3 DECEMBER 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21





ಸಿಪಿಐ(ಎಂ) ಕಲಬುರಗಿ ಜಿಲ್ಲಾ 23ನೇ ಸಮ್ಮೇಳನ

ಐತಿಹಾಸಿಕ ಮೆರವಣಿಗೆ ರಸ್ತೆಯುದ್ದಕ್ಕೂ ರಾರಾಜಿಸಿದ ಕೆಂಬಾವುಟ, ಮೊಳಗಿದ ಲಾಲ್ ಸಲಾಮ್



ವರದಿ: **ಕೋದಂಡರಾಮ**

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) 23 ನೇ ಜಿಲ್ಲಾ ಸಮ್ಮೇಳನದ ಅಂಗವಾಗಿ ಕಲಬುರಗಿಯಲ್ಲಿ 26 ನವೆಂಬರ್ 2021 ರಂದು ಆಯೋಜಿಸಿದ್ದ ಬೃಹತ್ ಮೆರವಣಿಗೆ ಸಾರ್ವಜನಿಕರ ಗಮನ ಸೆಳೆಯಿತು.

ಜಿಲ್ಲೆಯ ಮೂಲೆಮೂಲೆಯಿಂದ ಬಂದಿದ್ದ ಸುಮಾರು 4 ಸಾವಿರಕ್ಕೂ ಹೆಚ್ಚು ಸಂಖ್ಯೆಯ ಕಾರ್ಯಕರ್ತರು ನೆಹರು ಗಂಜ್‌ನ ಲಾಹೋಟಿ ಕಲ್ಯಾಣ ಪಂಟಪದಿಂದ ಬೃಹತ್ ಮೆರವಣಿಗೆ ಮೂಲಕ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಸೂಪರ್ ಮಾರ್ಕೆಟ್ ವರೆಗೆ ನಡೆದ ಕಾಲ್ನಡಿಗೆಯಲ್ಲಿ ಹೆಜ್ಜೆ ಹೆಜ್ಜೆಗೂ ಕೆಂಬಾವುಟಗಳೇ ರಾರಾಜಿಸಿದವು.

ಡೊಳ್ಳು ಕುಣಿತ, ಭಜನೆ, ಕೋಲಾಟ, ಡೋಲು ಮೇಳ, ಜನಪದ ನೃತ್ಯ ಹೀಗೆ ವಿವಿಧ ಸಾಂಸ್ಕೃತಿಕ ವೈಭವವು ಬೃಹತ್ ಮೆರವಣಿಗೆಗೆ ಮೆರಗು ತಂದಿತು.

ಸಂವಿಧಾನ ಸಮರ್ಪಣಾ ದಿನಾಚರಣೆ ಅಂಗವಾಗಿ ನಿರ್ಮಿಸಿದ ಸಂವಿಧಾನದ ಪ್ರಸ್ತಾವನೆಯ ಬೃಹತ್ ಕಟೌಟ್ ಜನಮನ ಸೆಳೆಯಿತು. ಇನ್‌ಕ್ವಿಲಾಬ್ ಜಿಂದಾಬಾದ್, ಸಿಪಿಐ(ಎಂ) ಜಿಂದಾಬಾದ್, ರೈತ ಕಾರ್ಮಿಕರ ಹೋರಾಟಕ್ಕೆ ಜಯವಾಗಲಿ ಮುಂತಾಗಿ ಜೈಕಾರ ಮೊಳಗಿದವು.

ಸೂಪರ್ ಮಾರ್ಕೆಟ್ ನಲ್ಲಿ ಜರುಗಿದ ಬೃಹತ್ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯರು ಹಾಗೂ ಕೇರಳದ ಮಾಜಿ ಸಚಿವರು ಆದ ಕಾಂ.ಎಂ.ಎ.ಬೇಬಿ ಅವರು, ಮುಂದಿನ ಮೂರು ವರ್ಷಗಳಲ್ಲಿ ದೇಶದಾದ್ಯಂತ ಕಾರ್ಮಿಕ ಹೋರಾಟವನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಬೇಕಾಗಿದೆ. ಕೇಂದ್ರದ ಬಿ.ಜೆ.ಪಿ ನೇತೃತ್ವದ ಎನ್.ಡಿ.ಎ ಸರ್ಕಾರದ ಹಲವು ಕುತಂತ್ರದ ಮಧ್ಯೆಯೂ ಕೃಷಿಕಾಯ್ದೆಗಳನ್ನು ವಿರೋಧಿಸಿ ರೈತರು ಮಾಡಿದ ಸಂಯುಕ್ತ ಹೋರಾಟದ ರೀತಿ ಹಾಗೂ ಅದರ ಪ್ರತಿಫಲ ನಮ್ಮ ಕಣ್ಣಮುಂದಿದೆ. ಅದೇ ಮಾದರಿಯಲ್ಲಿ ಕೆಂಬಾವುಟಗಳೂ ಹಾರಾಡಬೇಕು ಎಂದು ಕರೆ ನೀಡಿದರು.

ಧರ್ಮದ ಆಧಾರದ ಮೇಲೆ ಪೌರತ್ವ ನೀಡುವ ಸಿಎಎ ವಿರುದ್ಧ ಹೋರಾಟ ಆರಂಭವಾಗಲಿದೆ. ಅಲ್ಪಸಂಖ್ಯಾತರ ವಿರುದ್ಧ ಮೋದಿ ಸರ್ಕಾರ ಮಾಡುವ ಎಲ್ಲ ಕುತಂತ್ರಗಳನ್ನು ಹಿಮ್ಮೆಟ್ಟಿಸುತ್ತೇವೆ. ಹೊಸ ಶಿಕ್ಷಣ ನೀತಿಯನ್ನೂ ಹಿಂಪಡೆಯುವಂತೆ ಒತ್ತಾಯಿಸುತ್ತೇವೆ ಎಂದು ಹೇಳಿದರು.

ಪಕ್ಷದ ಕೇಂದ್ರ ಸಮಿತಿ ಸದಸ್ಯೆ ಕಾಂ.ಎಸ್.ವರಲಕ್ಷ್ಮಿ ಮಾತನಾಡುತ್ತಾ, ಈಗ ಎಲ್ಲ ಸಾಮಾಗ್ರಿಗಳ ದರಗಳೂ ಹೆಚ್ಚಾಗಿವೆ. ಆದರೆ ದುಡಿಯುವ ಜನತೆಯ ಸಂಬಳ ಮಾತ್ರ ಹೆಚ್ಚಾಗಿಲ್ಲ. ಹಾಗಿದ್ದರೆ ನಾವು ಬದುಕುವುದು ಹೇಗೆ ಎಂದು ಪ್ರಶ್ನಿಸಿದರು.

ಅಂಗನವಾಡಿ, ಅಕ್ಷರದಾಸೋಹ ಸೇರಿದಂತೆ ಡಿ ದರ್ಜೆಯ ಎಲ್ಲ ನೌಕರರಿಗೆ ಕೆಲಸಕ್ಕೆ ತಕ್ಕಂತೆ ಸಂಬಳ ನೀಡುತ್ತಿಲ್ಲ. ಕನಿಷ್ಟ ರೂ.21 ಸಾವಿರ ಸಂಬಳ ನೀಡುವಂತೆ ಮಾಡುತ್ತಿರುವ ಹೋರಾಟಕ್ಕೆ ಸರ್ಕಾರ ಕಿವಿಗೊಟ್ಟಿಲ್ಲ. ನರೇಗಾ ಕೆಲಸದ ದಿನಗಳನ್ನು 200 ಕ್ಕೆ ಹೆಚ್ಚಿಸಬೇಕು. ಕೂಲಿ ದರವನ್ನು ರೂ.600 ಕ್ಕೆ ಏರಿಸಬೇಕು ಎಂದು ಆಗ್ರಹಿಸಿದರು.

ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಯು. ಬಸವರಾಜ, ಕೇಂದ್ರ ಸಮಿತಿ ಸದಸ್ಯರಾದ ಕಾಂ.ನಿತ್ಯಾನಂದ ಸ್ವಾಮಿ, ಕಾರ್ಯದರ್ಶಿ ಶರಣಬಸಪ್ಪ ಮಮಶೆಟ್ಟಿ, ಕಾಂ.ಕೆ ನೀಲಾ, ಕಾಂ.ಗೌರಮ್ಮ ಪಾಟೀಲ ಸಭೆಯನ್ನುದ್ದೇಶಿಸಿ ಮಾತನಾಡಿದರು. ವೇದಿಕೆ ಮೇಲೆ ಸ್ವಾಗತ ಸಮಿತಿ ಗೌರವಾಧ್ಯಕ್ಷ ಡಾ.ಪ್ರಭು ಖಾನಾಪುರೆ, ಕಾಂ.ಮೇಘರಾಜ ಕಠಾರೆ, ಕಾಂ.ಪಾಂಡುರಂಗ, ಕಾಂ.ಅಲ್ತಾಫ್ ಇನಾಮದಾರ ಇತರರಿದ್ದರು. ಶ್ರೀಮಂತ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಕಾಂ. ಭೀಮಶೆಟ್ಟಿ ಎಂಪಳ್ಳಿ ಸ್ವಾಗತಿಸಿದರು. ರೇವಣಸಿದ್ದಪ್ಪ ಕಲಬುರಗಿ ನಿರೂಪಿಸಿದರು. ಕಾಂ.ಶಾಂತಾ ಘಂಟೆ ವಂದಿಸಿದರು.

ನಂತರ ನಡೆದ 2 ದಿನಗಳ ಪ್ರತಿನಿಧಿಗಳ ಅಧಿವೇಶನದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಡೆದ ಪಕ್ಷದ ಕಾರ್ಯಚಟುವಟಿಕೆಗಳ ವಿಮರ್ಶೆ ನಡೆಯಿತು. ಅಧಿವೇಶನದ ಪ್ರಾರಂಭದಲ್ಲಿ ಕ್ರಿಯಾ ಮಾಧ್ಯಮ ಪ್ರಕಟಿಸಿದ "ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ – 1920–1964 ಅವಧಿಯ ಒಂದು ಇತಿಹಾಸ" ಮತ್ತು "ಭಾರತ ಕಮ್ಯುನಿಸ್ಟ್ ಅಂದೋಲನ – ಹೋರಾಟಗಳ 100 ವರುಷಗಳು" ಎಂಬ ಎರಡು ಪುಸ್ತಕಗಳನ್ನು ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯರಾದ ಕಾಂ.ಎಂ.ಎ.ಬೇಬಿ ಬಿಡುಗಡೆ ಮಾಡಿದರು.



ಕೆ. ನೀಲಾ

ಅಧಿವೇಶನದ ಪ್ರಾಂಗಣದಲ್ಲಿನ ಚಿತ್ರಕಲಾ ಪ್ರದರ್ಶನವು ಹೊಸ ಮೆರಗನ್ನು ನೀಡಿತು. ಹಾಗೂ ವೈಚಾರಿಕ ಪುಸ್ತಕಗಳ ಮಾರಾಟದ ಜವಾಬ್ದಾರಿಯನ್ನು ಕೋದಂಡರಾಮ ಮತ್ತು ಶಾಂತೇಶ ಕೋಡ್ಲೆ ನಿರ್ವಹಿಸಿದರು.

ಪಕ್ಷದ 23ನೇ ಜಿಲ್ಲಾ ಸಮ್ಮೇಳನವು 18 ಜನ ಸದಸ್ಯರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಕಾಮ್ರೇಡ್ ಕೆ.ನೀಲಾ ಅವರನ್ನು ಜಿಲ್ಲಾ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು.

ಸಮ್ಮೇಳನದಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಹೊಸ ಶಿಕ್ಷಣ ನೀತಿಯನ್ನು ಸರಕಾರವು ಕೈ ಬಿಡಬೇಕು. ಮತ್ತು ಶಿಕ್ಷಣದ ಕೇಸರೀಕರಣದಿಂದ ದೇಶಕ್ಕೆ ಅಪಾಯವಿದ್ದು ಕೂಡಲೇ ಎನ್ ಇ ಪಿ ಜಾರಿ ಕೈಬಿಡಲು ಆಗ್ರಹಿಸಲಾಯಿತು.

ಕೋಮುವಾದ ಫಾಸಿವಾದವನ್ನು ತಡೆಗಟ್ಟಲು ಮತ್ತು ಸಂವಿಧಾನ ಸಂರಕ್ಷಿಸಿ ದೇಶದ ಸೌಹಾರ್ದ ಪರಂಪರೆಯನ್ನು ಉಳಿಸಲು ಪಕ್ಷ ಶ್ರಮಿಸುವುದಾಗಿ ತೀರ್ಮಾನಿಸಿತು.

ನೀರಿನ ಖಾಸಗೀಕರಣ ತಡೆಗಟ್ಟಿ ಜನತೆಗೆ ಕುಡಿಯುವ ನೀರು ಉಚಿತವಾಗಿ ದೊರೆಯಲು ಸಾಧ್ಯವಾಗಬೇಕೆಂದು ನಿರ್ಣಯಿಸಲಾಯಿತು.

ಜಾನುವಾರು ಹತ್ಯಾ ನಿಷೇಧ ಕಾಯ್ದೆಯನ್ನು ಹಿಂಪಡೆಯಲು ಆಗ್ರಹಿಸಲಾಯಿತು.

ಎಪಿಎಂಸಿ ತಿದ್ದುಪಡಿ ಕಾಯ್ದೆ ಜಾರಿ ಮಾಡುವುದನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಲಾಯಿತು.

ಎಸ್ಸೆನ್ಸಿಯಲ್ ಕಮಾಡಿಟಿ ಎಕ್ಟ್ ತಿದ್ದುಪಡಿ ರದ್ದುಪಡಿಸಬೇಕು.

ದೇವದಾಸಿ ಮಹಿಳೆಯರು ಸಮಗ್ರ ಅಭಿವೃದ್ಧಿಗಾಗಿ ಕ್ರಮ ಕೈಗೊಳ್ಳು ಸರಕಾರಕ್ಕೆ ಆಗ್ರಹಿಸಲಾಯಿತು. ದೇವದಾಸಿ ಮಹಿಳೆಯರಿಗೆ ಉಳುಮೆಯೋಗ್ಯ ಐದು ಎಕರೆ ಭೂಮಿಯನ್ನು ವಿತರಿಸಿ ಉದ್ಯೋಗ ಖಾತ್ರಿ ಕಾಯ್ದೆಯಡಿ ಕಾಮಗಾರಿಯಲ್ಲಿ 365 ದಿನಗಳಲ್ಲಿ ಅವಶ್ಯಕತೆಗನುಸರಿಸಿ ಕೇಳಿದಷ್ಟು ಕೆಲಸ ಒದಗಿಸಲು ಆಗ್ರಹಿಸಲಾಯಿತು.

ದಲಿತರ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲು ಆಗ್ರಹಿಸಲಾಯಿತು.

ಉದ್ಯೋಗ ಖಾತ್ರಿ ಕಾಯ್ದೆಯನ್ನು ನಗರಕ್ಕೂ ವಿಸ್ತರಿಸಿ ಉದ್ಯೋಗ ದೊರೆಯುವಂತೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಲಾಯಿತು.

ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಜನತೆಯ ಚಳುವಳಿಯನ್ನು ಬಲಪಡಿಲು ಸಮ್ಮೇಳನವು ತೀರ್ಮಾನ ಮಾಡಿತು.

ಪಕ್ಷದ ಕೇಂದ್ರ ಸಮಿತಿಯ ಪಾಲಿಟ್ ಬ್ಯೂರೊ ಸದಸ್ಯರಾದ ಹಾಗೂ ಮಾಜಿ ಸಚಿವರಾದ ಕಾಮ್ರೇಡ್ ಎಂ ಎ ಬೇಬಿಯವರು ಸಮಾರೋಪ ಸಮಾರಂಭದಲ್ಲಿ ಮಾತನಾಡಿ 'ಪಕ್ಷವು ದುಡಿಯುವ ವರ್ಗದ ಧ್ವನಿಯಾಗಿ ಮತ್ತು ಬಹುಸಾಂಸ್ಕೃತಿಕ ಪರಂಪರೆಯನ್ನು ಗಟ್ಟಿಗೊಳಿಸುತ್ತ ಮುನ್ನಡೆಯಬೇಕಿದೆ.' ಎಂದು ಹೇಳಿದರು.

ಜಿಲ್ಲಾ ಸಮಿತಿ ಸದಸ್ಯರು

ಕಾ.ಶರಣಬಸಪ್ಪ ಮಮಶೆಟ್ಟಿ, ಕಾ.ಶಾಂತಾ ಘಂಟೆ, ಕಾ.ಗೌರಮ್ಮ ಪಾಟಿಲ, ಕಾ.ಭೀಮಶೆಟ್ಟಿ ಯಂಪಳ್ಳಿ, ಕಾ.ಶ್ರೀಮಂತ ಬಿರಾದಾರ, ಕಾ.ಪಾಂಡುರಂಗ ಮಾವಿನಕರ್, ಕಾ.ಮೇಘರಾಜ ಕಠಾರೆ, ಕಾ.ನಾಗಯ್ಯ ಸ್ವಾಮಿ, ಕಾ.ಶಿವಶರಣಪ್ಪ ಧನ್ನೂರೆ, ಕಾ.ಎಂ ಬಿ ಸಜ್ಜನ, ಕಾ.ರೇವಣಸಿದ್ದಪ್ಪ ಕಲಬುರಗಿ, ಕಾ.ಸುಭಾಷ ಜೇವರ್ಗಿ, ಕಾ.ಸುಧಾಮ ಧನ್ನಿ, ಕಾ.ಶೇಖಮ್ಮ ಕುರಿ, ಕಾ.ಜಾವೇದ್ ಹುಸೇನ್, ಕಾ.ಪ್ರದೀಪ ತಿರ್ಲಾಪುರ, ಕಾ.ಶಿವಾನಂದ ಕವಲಗಾ.

"ಗೆಲುವು ನಮ್ಮದು" ಹೋರಾಟದ ಹಾಡಿನೊಂದಿಗೆ ಅತ್ಯಂತ ಯಶಸ್ವಿಯಾಗಿ ಸಮ್ಮೇಳನ ಮುಕ್ತಾಯಗೊಂಡಿತು.



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**